ಡಾ. ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ ಆಶೀರ್ವಾದಗಳೊಂದಿಗೆ

ಸಂಕಲ್ಪವೆಂದರೆ?

ತಟವರ್ತಿ ವೀರರಾಘವರಾವು

ಕನ್ನಡ ಅನುವಾದ :

ಸುಮಲತ ಜಿ.ಎಸ್. ರಾಜು

ಬ್ರಹ್ಮರ್ಷಿ ಪತ್ರೀಜೀ ಆಶೀರ್ವಾದಗಳೊಂದಿಗೆ

ಸಂಕಲ್ಪವೆಂದರೆ?

ರಚನೆ : **ತಟವರ್ತಿ ವೀರರಾಘವರಾವು**

ಕನ್ನಡ ಅನುವಾದ : **ಸುಮಲತ ಜಿ.ಎಸ್. ರಾಜು**

ಶ್ರೀರಾಮ ಪಬ್ಲಿಕೇಶನ್ಸ್

ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್

ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066.
M.: 9449695503, 8050082689, 9886532204

ಮೊದಲನೇ ಮುದ್ರಣ	:	2023
ಹಕ್ಕುಗಳು	:	ಪ್ರಕಾಶಕರು
ಪ್ರಕಾಶಕರು	:	**ಶ್ರೀರಾಮ ಪಬ್ಲಿಕೇಶನ್ಸ್** ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ, ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066 ಮೊ.: 9449695503, 9886532204
ಬಳಸಿದ ಕಾಗದ	:	70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8
ಪ್ರತಿಗಳು	:	1000
ಬೆಲೆ	:	50/–
ಪುಟಗಳು	:	iv+48=52
ಮುಖಪುಟ	:	ಚಂದ್ರಕಾಂತ ಪಟ್ಟಣ
ಅಕ್ಷರ ಜೋಡಣೆ	:	**ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ** ಮೊ: 96328 12541

ಮುದ್ರಣ :

ಪೂರ್ಣಾ ಗ್ರಾಫಿಕ್ಸ್,

ಬೆಂಗಳೂರು 9844167475

ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ

ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,

ಎಚ್.ಎನ್.ಶ್ರೀನಿವಾಸ

ಮತ್ತು

ಎಸ್.ಎನ್.ವಿಜಯಲಕ್ಷ್ಮಿ

ಸಂಸ್ಥಾಪಕರು,

ಶ್ರೀರಾಮಧಾಮ ಧ್ಯಾನಕೇಂದ್ರ

ಅನುಬಂಧ : ಬ್ರಹ್ಮರ್ಷಿ ಪತ್ರೀಜಿಯವರ ಸಂಕಲ್ಪ ಶಕ್ತಿ ಧ್ಯಾನದ ಮೂಲಕ ಶಕ್ತಿ

ಧ್ಯಾನ ಏತಕ್ಕಾಗಿ? ಎಂದು ಬಹಳಷ್ಟು ಜನ ಅಂದುಕೊಳ್ಳುತ್ತಾರೆ. ಆದರೆ ಧ್ಯಾನ ಮಾಡಿದರೆ ಯಾರಿಗಾದರೂ ಶಕ್ತಿ ಲಭಿಸುತ್ತದೆ. ಅಂದರೆ ಅವರಲ್ಲಿ ಶಕ್ತಿ ಹೆಚ್ಚುತ್ತದೆ. ಶಕ್ತಿ ಹೆಚ್ಚುತ್ತಾ ಹೋದಂತೆ ಯಾರಾದರೂ ಏನನ್ನಾದರೂ ಸಾಧಿಸಬಹುದು.

ಅದಕ್ಕಾಗಿಯೇ ಮುನಿಗಳು, ಋಷಿಗಳು, ರಾಕ್ಷಸರು ಹಿಂದಿನ ಕಾಲದಲ್ಲಿ ಧ್ಯಾನ ಮಾಡುತ್ತಿದ್ದರು. ಅಪಾರವಾದ ಶಕ್ತಿಯನ್ನು ಸಂಪಾದಿಸಿಕೊಳ್ಳುತ್ತಿದ್ದರು, ಅತೀಂದ್ರಿಯ ಶಕ್ತಿಗಳನ್ನು ಸಹ ಸಂಪಾದಿಸಿಕೊಳ್ಳುತ್ತಿದ್ದರು. ಸಾಮಾನ್ಯರಿಗೆ ಅಸಾಧ್ಯವಾದವುಗಳನ್ನು ಸಹ ಸಾಧಿಸಿಕೊಳ್ಳುತ್ತಿದ್ದರು.

ಪ್ರಸ್ತುತ ನಾವು ಮಾಡುತ್ತಿರುವ ಧ್ಯಾನವನ್ನೇ ಪೂರ್ವಕಾಲದಲ್ಲಿ ತಪಸ್ಸು ಎನ್ನುತ್ತಿದ್ದರು. ಕಾರಣ ಅವರೆಲ್ಲ ಯಾವುದೋ ಒಂದು ತಪನೆಯಿಂದ(ಅನ್ವೇಷಣೆ) ಈ ಧ್ಯಾನವನ್ನು ವಿಶೇಷವಾಗಿ ಮಾಡುತ್ತಿದ್ದರು. ಹಾಗೆ "ತಪನೆಯಿಂದ, ತಪಿಸುತ್ತಾ ಮಾಡುವ ಧ್ಯಾನವನ್ನೇ ತಪಸ್ಸು" ಎನ್ನುತ್ತಾರೆ."ತಪಿಸುವುದೇ ತಪಸ್ಸು". ಒಂದು ವಿಧದಲ್ಲಿ 'ತಪಸ್ಸು' ಮಾಡುವುದೆಂದರೆ 'ಧ್ಯಾನ' ಮಾಡುವುದೇ. ಒಂದು ವಿಧದಲ್ಲಿ ಪೂರ್ವಕಾಲದಲ್ಲಿ ಋಷಿಗಳು ಮಾಡುತ್ತಿದ್ದ 'ತಪಸ್ಸು' ಪ್ರಸ್ತುತ ನಾವು ಮಾಡುತ್ತಿರುವ 'ಧ್ಯಾನ' ಎರಡೂ ಒಂದೇ!

ಧ್ಯಾನ ಮಾಡುವುದು ಎಂದರೆ ಗಮನ ಇರಿಸುವುದು. ಯಾರ ಮೇಲೆ? ತಾನು ಇಷ್ಟಪಡುವವರ ಮೇಲೆ, ತನಗೆ ಬೇಕಾದವರ ಮೇಲೆ. ಪ್ರಸ್ತುತ ನಾವು ಧ್ಯಾನದ ಮೂಲಕ ಯಾರ ಮೇಲೆ ಗಮನ ಇರಿಸುತಿದ್ದೇವೆ? 'ಆತ್ಮ'ದ ಮೇಲೆ, 'ಆತ್ಮ' ಎಂದರೆ ಯಾರು? ಸಾಕ್ಷಾತ್ ಭಗವಂತನು. ಈ ಸೃಷ್ಟಿಯನ್ನು ಸೃಷ್ಟಿ ಮಾಡಿದವನು. ಸೃಷ್ಟಿಗೆ ಕಾರಣನಾದವನು, ಸೃಷ್ಟಿಯನ್ನು ನಡೆಸುತ್ತಿರುವವನು, ಸೃಷ್ಟಿಗೆ ಆಧಾರವಾದವನು. ಅಂತಹ ಭಗವಂತನ ಮೇಲೆ ಗಮನ ಇರಿಸುವುದೇ, ದೃಷ್ಟಿ ಇರಿಸುವುದೇ ನಾವು ಮಾಡುವ 'ಶ್ವಾಸದ ಮೇಲೆ ಗಮನ' ಧ್ಯಾನ.

ಹಾಗೆ ತಪಸ್ಸು ಮಾಡುತ್ತಾ ಹೋದಂತೆ ಅಂದರೆ ಧ್ಯಾನ ಮಾಡುತ್ತಾ ಹೋದಂತೆ ಯಾರಾದರೂ ಸರಿ ಆತ್ಮಕ್ಕೆ ಅಂದರೆ ಭಗವಂತನಿಗೆ ಹತ್ತಿರವಾಗುತ್ತಾರೆ. ಹಾಗೆ ಭಗವಂತನಿಗೆ ಹತ್ತಿರವಾಗುತ್ತಾ ಹೋದಂತೆ ಯಾರಿಗಾದರೂ 'ಶಕ್ತಿ' ಹೆಚ್ಚುತ್ತದೆ. 'ಶಕ್ತಿ' ಎಂಬುದು ಕಣ್ಣಿಗೆ ಕಾಣಿಸುವಂತಹದ್ದಲ್ಲ. 'ಶಕ್ತಿ' ಎಂಬುದು ಶರೀರಕ್ಕೆ ಪುಷ್ಟಿಯನ್ನು ನೀಡುವುದಿಲ್ಲ. ಶರೀರಕ್ಕೆ ಪುಷ್ಟಿಯನ್ನು ಕೊಟ್ಟರೆ 'ಬಲ' ಎನ್ನುತ್ತಾರೆ. ಅದಕ್ಕಾಗಿ ದೇವತೆಯರನ್ನು, ದೇವರುಗಳನ್ನು, ಯೋಗಿಗಳನ್ನು, ಋಷಿಗಳನ್ನು, ಶಕ್ತಿವಂತರು

ಎನ್ನುತ್ತಾರೆಯೇ ಹೊರತು, ಬಲವಂತರು ಎನ್ನುವುದಿಲ್ಲ.

ರಾಮಕೃಷ್ಣ ಪರಮಹಂಸ ಶಕ್ತಿವಂತನು, ರಮಣ ಮಹರ್ಷಿ ಶಕ್ತಿವಂತನು, ಷಿರಡಿ ಬಾಬಾ ಶಕ್ತಿವಂತನು, ವೀರ ಬ್ರಹ್ಮೇಂದ್ರ ಸ್ವಾಮಿ ಶಕ್ತಿವಂತನು, ಇವರು ಬಲವಂತರಲ್ಲ. ಇವರಿಗೆ ಸ್ನಾಯುಗಳಿಲ್ಲ.(ಬಲವಾದ ಮಾಂಸ ಖಂಡಗಳು) ಇವರಿಗೆ ಶಕ್ತಿಯು ಧ್ಯಾನ ಮಾಡಿದ್ದರಿಂದಲೇ ಬಂತು. ಎಷ್ಟು ಹೆಚ್ಚಾಗಿ ಧ್ಯಾನ ಮಾಡಿದರೆ ಅಷ್ಟು ಹೆಚ್ಚು ಶಕ್ತಿ ಬರುತ್ತದೆ.

ಶಕ್ತಿ ಇರುವವನು ಏನನ್ನಾದರೂ ಮಾಡಬಲ್ಲನು. ಏನನ್ನಾದರೂ ಸಾಧಿಸಬಲ್ಲನು. ಶಕ್ತಿ ಹೀನನು ಏನನ್ನೂ ಮಾಡಲಾರನು, ಏನನ್ನು ಸಾಧಿಸಲಾರನು. ಶಕ್ತಿ ಹೀನನು ಎಲ್ಲದಕ್ಕೂ ಭಯಪಡುತ್ತಾನೆ, ಎಲ್ಲದಕ್ಕೂ ಸಂಶಯ ಪಡುತ್ತಾನೆ. ಶಕ್ತಿ ಇರುವವನು ನಿರ್ಭಯವಾಗಿರುತ್ತಾನೆ, ಯಾವುದಕ್ಕೂ ಸಂಕೋಚ ಪಡುವುದಿಲ್ಲ.

ಶಕ್ತಿಹೀನನು ಬೇಡಿಕೊಳ್ಳುತ್ತಾನೆ, ಪ್ರಾರ್ಥಿಸುತ್ತಾನೆ, ಕಾಪಾಡು, ರಕ್ಷಿಸು, ಎನ್ನುತ್ತಾನೆ, ಆರ್ತನಾದಗಳನ್ನು ಮಾಡುತ್ತಾನೆ, ದೀನನಂತೆ ಹೀನವಾಗಿ ಪ್ರವರ್ತಿಸುತ್ತಾನೆ. ಆದರೆ ಶಕ್ತಿವಂತನು ಬೇಡುವುದಿಲ್ಲ – ಆಶೀರ್ವದಿಸುತ್ತಾನೆ, ಪ್ರಾರ್ಥಿಸುವುದಿಲ್ಲ – ಪಾಲಿಸುತ್ತಾನೆ. ರಕ್ಷಿಸು ಎಂದು ಕೇಳುವುದಿಲ್ಲ – ಎಲ್ಲರನ್ನೂ ರಕ್ಷಿಸುತ್ತಾನೆ. ಕಾಪಾಡು ಎನ್ನುವುದಿಲ್ಲ – ಎಲ್ಲರನ್ನೂ ಕಾಪಾಡುತ್ತಾನೆ. ಆರ್ತನಾದಗಳನ್ನು ಮಾಡುವುದಿಲ್ಲ – ಆದ್ಯತೆಯನ್ನು ಪ್ರದರ್ಶಿಸುತ್ತಾನೆ. ಹೇಡಿಯಂತೆ ಪ್ರವರ್ತಿಸುವುದಿಲ್ಲ – ಧೀರನಂತೆ ಪ್ರವರ್ತಿಸುತ್ತಾನೆ. ಹೀನವಾಗಿ ಪ್ರವರ್ತಿಸುವುದಿಲ್ಲ – ಹೀರೋನಂತೆ ಪ್ರವರ್ತಿಸುತ್ತಾನೆ. ಇದೆಲ್ಲವೂ ಶಕ್ತಿ ಇರುವುದರಿಂದಲೇ.

ಧ್ಯಾನ ಮಾಡಿ ಶಕ್ತಿ ಸಂಪಾದಿಸಿಕೊಳ್ಳುವವರು ಶಕ್ತಿ ಹೆಚ್ಚುತ್ತಾ ಹೋದಂತೆ ಎಲ್ಲವನ್ನೂ ಮಾಡಬಲ್ಲರು, ಶಕ್ತಿಗೆ ತಕ್ಕಂತೆ ಪ್ರವರ್ತಿಸುತ್ತಾರೆ. ಶಕ್ತಿ ಹೆಚ್ಚುತ್ತಾ ಹೋದಂತೆ ಬರೆಯಲಾರದವರು ಬರೆಯುತ್ತಾರೆ, ನಾಲ್ಕು ಜನರಲ್ಲಿ ಮಾತನಾಡಲಾರದವರು ಮಾತನಾಡಬಲ್ಲವರಾಗುತ್ತಾರೆ, ಮಾಡಲಾರದ ಕೆಲಸಗಳನ್ನು ಮಾಡುತ್ತಿರುತ್ತಾರೆ. ಶಕ್ತಿ ಹೆಚ್ಚುತ್ತಾ ಹೋದಂತೆ ಮಾಡುವ ಕೆಲಸಗಳಲ್ಲಿ ನೈಪುಣ್ಯತೆ ಹೆಚ್ಚುವುದಷ್ಟೇ ಅಲ್ಲ ನೈಪುಣ್ಯತೆಯನ್ನು ಸಹ ಪ್ರದರ್ಶಿಸುತ್ತಾರೆ .

ಶಕ್ತಿ ಹೀನರು ದುಃಖವನ್ನು, ಕಷ್ಟಗಳನ್ನು, ಸಮಸ್ಯೆಗಳನ್ನು ಸಹಿಸಿಕೊಳ್ಳುವುದಿಲ್ಲ. ಶಕ್ತಿ ಇರುವವರು ಎಷ್ಟು ಕಷ್ಟಗಳು ಬಂದರೂ ಹೆದರುವುದಿಲ್ಲ, ಎಷ್ಟು ದುಃಖವಿದ್ದರೂ ಏನೂ ಇಲ್ಲದವರಂತೆ ಪ್ರವರ್ತಿಸುತ್ತಾರೆ.

ಶಕ್ತಿ ಇಲ್ಲದವರು ಪ್ರತಿಯೊಂದಕ್ಕೂ ಪ್ರತಿಕ್ರಿಯಿಸುತ್ತಾರೆ. ಆದರೆ ಶಕ್ತಿ ಇರುವವರು ಶೀತೋಷ್ಣಗಳಲ್ಲಾಗಲೀ, ಸುಖ–ದುಃಖಗಳಲ್ಲಾಗಲೀ, ಮಾನ–ಅವಮಾನಗಳಲ್ಲಾಗಲೀ,

ಸೋಲು ಗೆಲುವುಗಳಲ್ಲಾಗಲೀ ಸಮಸ್ಥಿತಿಯನ್ನು ಪ್ರದರ್ಶಿಸುತ್ತಾರೆ. ಅಯ್ಯಯ್ಯೋ , ದೇವರೇ ಎನ್ನುವುದಿಲ್ಲ.

ಶಕ್ತಿ ಇಲ್ಲದವರಿಗೆ ತ್ರಿಕರಣ ಶುದ್ದಿ ಇರುವುದಿಲ್ಲ. ಶಕ್ತಿ ಇರುವವರಿಗೆ ತ್ರಿಕರಣ ಶುದ್ಧಿ ಇರುತ್ತದೆ.

ಶಕ್ತಿ ಇಲ್ಲದವರು ತಮಗೆ ಇರುವವುಗಳೆಲ್ಲಾ, ತಮಗೆ ಸಂಭವಿಸುತ್ತಿರುವವೆಲ್ಲಾ ಶಾಶ್ವತವೆಂದುಕೊಳ್ಳುತ್ತಾರೆ. ವಿಪರೀತವಾದ ಮಮಕಾರವನ್ನು ಪ್ರದರ್ಶಿಸುತ್ತಿರುತ್ತಾರೆ. ಆದರೆ ಶಕ್ತಿವಂತರು ಯಾವುದೂ ಶಾಶ್ವತವಲ್ಲವೆಂದು ತಿಳಿದುಕೊಳ್ಳುತ್ತಾರೆ, ಎಲ್ಲವೂ ಬದಲಾಗುವಂತಹವೇ! ಬದಲಾವಣೆ ಹೊಂದುವಂತಹ ವೇ! ಬದಲಾವಣೆ ಎಂಬುದು ಸಹಜವೆಂದು ತಿಳಿದುಕೊಳ್ಳುತ್ತಾರೆ.

ಶಕ್ತಿ ಇಲ್ಲದವರು ಅಜ್ಞಾನದಲ್ಲಿ ಇರುತ್ತಾರೆ. ಶಕ್ತಿ ಹೆಚ್ಚುತ್ತಾ ಹೋದಂತೆ ಜ್ಞಾನವಂತರಾಗುತ್ತಿರುತ್ತಾರೆ. ಶಕ್ತಿ ಇರುವವರು ಮಾನವನ್ನು, ಅವಮಾನವನ್ನು ಮಧುರವಾಗಿ ತೆಗೆದುಕೊಳ್ಳುತ್ತಾರೆ. ಶಕ್ತಿ ಇಲ್ಲದವರು ಸನ್ಮಾನಕ್ಕೆ ಹಿಗ್ಗುತ್ತಾರೆ. ಅವಮಾನಕ್ಕೆ ಕುಗ್ಗುತ್ತಾರೆ.

ಶಕ್ತಿ ಇಲ್ಲದವರು ಏನಾದರೂ ಹೋದರೆ ದುಃಖ ಪಡುತ್ತಾರೆ, ಬಂದರೆ ಸಂಭ್ರಮ ಪಡುತ್ತಾರೆ. ಆದರೆ ಶಕ್ತಿ ಇರುವವರು ಬಂದರೂ, ಹೋದರೂ ಒಂದೇ ರೀತಿ ಜೀವಿಸುತ್ತಾರೆ. ಶಕ್ತಿ ಇಲ್ಲದವರು ದುಃಖಿಸುತ್ತಾರೆ, ಅಶಾಂತಿಯಿಂದ ಜೀವಿಸುತ್ತಾರೆ. ಆದರೆ ಶಕ್ತಿ ಇರುವವರು ಆನಂದದಿಂದ, ಶಾಂತಿಯಿಂದ ಜೀವಿಸುತ್ತಾರೆ.

ಶಕ್ತಿ ಇಲ್ಲದವರಿಗೆ ಪ್ರಜ್ಞೆ (ಅರಿವು) ಇರುವುದಿಲ್ಲ ಆದರೆ ಶಕ್ತಿ ಇರುವವರಿಗೆ ಪ್ರಜ್ಞೆ ಇರುತ್ತದೆ. ಶಕ್ತಿ ಹೆಚ್ಚುತ್ತಾ ಹೋದಂತೆ ಊರ್ಧ್ವಲೋಕ ಪ್ರಾಪ್ತಿ ಉಂಟಾಗುತ್ತದೆ.

ನಾವು ಆರಾಧಿಸುವ ದೇವರೆಲ್ಲಾ ಶಕ್ತಿವಂತರೇ, ಎಲ್ಲರೂ ಧ್ಯಾನ ಮಾಡಿದವರೇ! ಹಾಗೆ ಯಾರಾದರೂ ಸರಿ ಧ್ಯಾನ ಮಾಡುತ್ತಾ ಹೋದಂತೆ ಶಕ್ತಿವಂತರಾಗಿ, ವಿವೇಕಾನಂದರಂತೆ, ರಮಣ ಮಹರ್ಷಿಗಳಂತೆ, ಸತ್ಯ ಸಾಯಿಬಾಬಾರಂತೆ, ಬುದ್ಧರಂತೆ, ಜೀಸಸ್ ನಂತೆ ಶಕ್ತಿವಂತರಾಗುತ್ತಾರೆ.

ಆದ್ದರಿಂದ ಶಕ್ತಿ ಹೆಚ್ಚಿಸಿಕೊಳ್ಳಿ. ಆನಂದದಿಂದ ಜೀವಿಸಿ. ನಿಮ್ಮಲ್ಲಿ ಶಕ್ತಿ ಇದೆಯೇ? ಶಕ್ತಿ ಹೆಚ್ಚಾಯಿತೇ? ಎಂದು ತಿಳಿಯಬೇಕೆಂದರೆ ನೀವು ಜೀವಿಸುತ್ತಿರುವ ವಿಧಾನವನ್ನು ಪರಿಶೀಲನೆ ಮಾಡಿಕೊಂಡರೆ ನಿಮಗೇ ತಿಳಿಯುತ್ತದೆ. ಅದೇ ರೀತಿ ಧ್ಯಾನ ಮಾಡುತ್ತಾ ಹೋದಂತೆ ನಿಮ್ಮಲ್ಲಿ ಶಕ್ತಿ ಹೆಚ್ಚುತ್ತಾ ಇರುತ್ತದೆ. ನಿಮ್ಮಲ್ಲಿ ಬರುವ ಬದಲಾವಣೆಗಳನ್ನು ನೀವೇ ಗಮನಿಸಿಕೊಳ್ಳುತ್ತೀರ. ಎಷ್ಟು ಧ್ಯಾನ ಸಾಧನೆ ಮಾಡಿದರೆ ಅಷ್ಟು ಶಕ್ತಿವಂತರಾಗುತ್ತಾರೆ. ಹೆಚ್ಚು ಮಾಡಿದರೆ ಹೆಚ್ಚು ಶಕ್ತಿ, ಕಡಿಮೆ ಮಾಡಿದರೆ ಕಡಿಮೆ ಶಕ್ತಿ. ಅದಕ್ಕಾಗಿಯೇ "ಮಾಡಿಕೊಂಡವರಿಗೆ ಮಾಡಿಕೊಂಡಷ್ಟು ಮಹಾದೇವ" ಎನ್ನುತ್ತಾರೆ.

ಹಾಗೆ ನಿಮ್ಮ ಜೀವನದಲ್ಲಿ ಎಷ್ಟು ದಿನ ಧ್ಯಾನ ಮಾಡಿದರೆ ಅಷ್ಟು ದಿನ ನಿಮ್ಮ ಶಕ್ತಿ ಹೆಚ್ಚುತ್ತಲೇ ಇರುತ್ತದೆ. ಆದ್ದರಿಂದ ಸಾಧ್ಯವಾದಷ್ಟು ಹೆಚ್ಚು ಧ್ಯಾನ ಮಾಡಿ.

ಧ್ಯಾನ ಮಾಡಿದರೆ ಶಕ್ತಿ ಹೇಗೆ ಹೆಚ್ಚುತ್ತದೆ?

ಧ್ಯಾನ ಮಾಡುವಾಗ ಮೊದಲಿಗೆ ನಾವು ಕೈಗಳನ್ನು ಕಟ್ಟಿ ಹಾಕುತ್ತೇವೆ, ಕಾಲುಗಳನ್ನು ಕಟ್ಟಿ ಹಾಕುತ್ತೇವೆ, ಕಣ್ಣುಗಳನ್ನು ಮುಚ್ಚುತ್ತೇವೆ. ಆಗ ನಮಗೆ ಸಹಜವಾಗಿಯೇ ಆಲೋಚನೆಗಳು ಬರುತ್ತವೆ. ಅಂದರೆ ಮನಸ್ಸು ವಿಧವಿಧವಾದ ಆಲೋಚನೆಗಳ ಮೇಲೆ ಹೋಗುತ್ತದೆ. ತಕ್ಷಣವೇ ನಾವು ಮನಸ್ಸನ್ನು ಶ್ವಾಸದ ಮೇಲೆ ಮರಳಿಸುತ್ತೇವೆ. ಸ್ವಲ್ಪ ಹೊತ್ತಿಗೆ ಮನಸ್ಸು ಮತ್ತೇ ಆಲೋಚನೆಗಳೊಳಗೆ ಹೋಗುತ್ತದೆ. ಪುನಹ ಮನಸ್ಸನ್ನು ಶ್ವಾಸದ ಮೇಲೆ ಇರಿಸುತ್ತೇವೆ. ಹೀಗೆ ಮಾಡುತ್ತಾ... ಮಾಡುತ್ತಾ... ಆಲೋಚನೆಗಳು ನಿಧಾನವಾಗಿ ಕಡಿಮೆಯಾಗುತ್ತಾ... ಕಡಿಮೆಯಾಗುತ್ತಾ... ಒಂದು ಸ್ಥಿತಿಯಲ್ಲಿ... ಒಂದು ಹಂತದಲ್ಲಿ... ಆಲೋಚನೆಗಳೆಲ್ಲವೂ ನಿಂತು ಮನಸ್ಸು ನಿರ್ವಿಷಯವಾಗುತ್ತದೆ. ಅಂದರೆ ಮನಸ್ಸಿನಲ್ಲಿ ಯಾವುದೇ ವಿಷಯಗಳು ಇರುವುದಿಲ್ಲ ಅಂದರೆ ಯಾವುದೇ ಆಲೋಚನೆಗಳು ಇರುವುದಿಲ್ಲ ಅಂದರೆ ಮನಸ್ಸು ಶೂನ್ಯವಾಗುತ್ತದೆ.

ಈ ಸ್ಥಿತಿಯಲ್ಲಿ ಅಲ್ಲಿರುವುದು ಅನಂತಶಕ್ತಿಯುತವಾದ 'ಆತ್ಮ' ಒಂದೇ. ಹಾಗೆ ಯಾರಾದರೆ ಅಂತಹ ಸ್ಥಿತಿಯಲ್ಲಿ ಎಷ್ಟು ಹೊತ್ತು ಇರುತ್ತಾರೋ... ಅವರು ಅಷ್ಟು ಹೊತ್ತು ಆತ್ಮ ಸ್ಥಿತಿಯಲ್ಲಿ ಇರುವಂತೆ. ಅಂತಹವರಿಗೆ ಸಹಜವಾಗಿಯೇ ಆಂತರಿಕವಾಗಿರುವ ಅನಂತವಾದ ಆತ್ಮಶಕ್ತಿ ಸ್ವಲ್ಪ ಲಭಿಸುತ್ತದೆ. ಅದರೊಂದಿಗೆ ವಿಶ್ವದಲ್ಲಿರುವ ವಿಶ್ವಶಕ್ತಿಯೂ ಸಹ ಸ್ವಲ್ಪ ಲಭಿಸುತ್ತದೆ. ಈ ಶಕ್ತಿಗಳಿಂದ ಅವರು ಶಕ್ತಿವಂತರಾಗುತ್ತಾರೆ. ಹಾಗೆ ಎಷ್ಟುಹೊತ್ತು ಧ್ಯಾನ ಸ್ಥಿತಿಯಲ್ಲಿದ್ದರೆ ಅಂದರೆ ಆಲೋಚನಾ ರಹಿತ ಸ್ಥಿತಿಯಲ್ಲಿದ್ದರೆ ಅಷ್ಟುಹೊತ್ತು ಅವರು ಶಕ್ತಿಯನ್ನು ಹೊಂದಿ ಶಕ್ತಿವಂತರಾಗುತ್ತಿರುತ್ತಾರೆ.

ಹಾಗೆ ಶಕ್ತಿ ಹೆಚ್ಚುತ್ತಾ ಹೋದಂತೆ ಅವರು ಜೀವನದಲ್ಲಿ ಬಹಳಷ್ಟು ಲಾಭಗಳನ್ನು ಹೊಂದುತ್ತಾರೆ. ಅವುಗಳಲ್ಲಿ ಕೆಲವನ್ನು ನಾವು ಮೇಲೆ ತಿಳಿದುಕೊಂಡಿದ್ದೇವೆ. ಅದಕ್ಕೆ ಹಲವಾರು ಯೋಗಿಗಳು ಆ ವಿಧವಾದ ಧ್ಯಾನ ಸ್ಥಿತಿಯಲ್ಲಿ ಗಂಟೆಗಳು, ದಿನಗಳು, ತಿಂಗಳುಗಳು, ವರ್ಷಗಳು ಇದ್ದು ಅಪಾರವಾದ ಶಕ್ತಿಯನ್ನು ಸಂಪಾದಿಸಿಕೊಂಡಿದ್ದಾರೆ, ದಿವ್ಯ ಶಕ್ತಿಗಳನ್ನು ಸಂಪಾದಿಸಿಕೊಂಡಿದ್ದಾರೆ, ದಿವ್ಯತ್ವವನ್ನು ಹೊಂದಿದ್ದಾರೆ. ಅಂತಹವರನ್ನು ಬಹಳಷ್ಟು ಜನರನ್ನು ನಾವು ಪ್ರಸ್ತುತ ಕಾಲದಲ್ಲಿ ನೋಡುತ್ತಿದ್ದೇವೆ, ಹಿಂದೆಯೂ ಸಹ ಅವರು ಇದ್ದರು. ರಮಣ ಮಹರ್ಷಿ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಶ್ರೀವೀರಬ್ರಹ್ಮೇಂದ್ರಸ್ವಾಮಿ, ಯೋಗಿವೇಮನ, ರಾಘವೇಂದ್ರ ಸ್ವಾಮಿ, ಸತ್ಯಸಾಯಿಬಾಬಾ, ಷಿರಡಿಸಾಯಿಬಾಬಾ, ಪಾಕಲಪಾಟಿ ಗುರುಗಳು, ಮುಮ್ಮಿಡಿವರಂ ಬಾಲಯೋಗಿ,

ಸುಭಾಷ್ ಪತ್ರೀಜಿ ಅಂತಹವರು ಬಹಳಷ್ಟು ಜನರಿದ್ದಾರೆ. ಎಲ್ಲರೂ ಧ್ಯಾನ ಮಾಡಿದವರೇ. ಅವರೆಲ್ಲರೂ ಮಾಡಿದ್ದು ಧ್ಯಾನವನ್ನೇ, ಹೇಳಿದ್ದು ಧ್ಯಾನವನ್ನೇ.

ಅವರೆಲ್ಲರನ್ನು ನಾವು ಶಕ್ತಿವಂತರು ಎನ್ನುತ್ತೇವೆಯೇ ಹೊರತು ಬಲವಂತರು ಎಂದು ಹೇಳುವುದಿಲ್ಲ. ಕಾರಣ ಅವರಿಗೆ ಶಾರೀರಿಕವಾದ ಬಲ ಇರುವುದಿಲ್ಲ. ಅಂದರೆ ಮಾಂಸ ಖಂಡಗಳು ಇಲ್ಲ. ಅಂದರೆ ಅವರು ಊಟಕ್ಕೆ ಪ್ರಾಮುಖ್ಯತೆ ಕೊಡಲಿಲ್ಲ. ಮಾಂಸ, ಮೊಟ್ಟೆಗಳು, ಮೀನುಗಳು, ಕೋಳಿಗಳು, ಮೇಕೆಗಳು, ಹಂದಿಗಳನ್ನು ತಿನ್ನಲಿಲ್ಲ.

ಶರೀರವನ್ನು ಹೆಚ್ಚಿಸಿಕೊಳ್ಳಲಿಲ್ಲ, ಶಕ್ತಿಯನ್ನು ಹೆಚ್ಚಿಸಿಕೊಂಡರು. ಅದರ ಮೂಲಕ ಜ್ಞಾನವನ್ನು ಸಂಪಾದಿಸಿಕೊಂಡರು – ಜ್ಞಾನವಂತರಾದರು. ಬುದ್ಧಿಯನ್ನು ಹೆಚ್ಚಿಸಿ ಕೊಂಡರು – ಬುದ್ಧಿವಂತರಾದರು. ಧರ್ಮವನ್ನು ತಿಳಿದುಕೊಂಡರು – ಧರ್ಮಮೂರ್ತಿ ಗಳಾದರು. ಪ್ರೇಮವನ್ನು ಹೆಚ್ಚಿಸಿಕೊಂಡರು – ಪ್ರೇಮ ಮೂರ್ತಿಗಳಾದರು. ಕರುಣೆಯನ್ನು ಹೆಚ್ಚಿಸಿಕೊಂಡರು – ಕರುಣಾ ಸ್ವರೂಪರಾದರು. ದಯೆಯನ್ನು ಹೆಚ್ಚಿಸಿ ಕೊಂಡರು – ದಯಾಮಯರಾದರು. ದಿವ್ಯ ಶಕ್ತಿಗಳನ್ನು ಸಂಪಾದಿಸಿಕೊಂಡರು – ದಿವ್ಯರಾದರು. ಅಂದರೆ ದೇವರಾದರು. ಮಾನವರನಷ್ಟೇ ಅಲ್ಲ ಸಮಸ್ತ ಜೀವಿಗಳನ್ನು ಕೋಳಿ, ಮೇಕೆ, ಮೀನುಗಳೊಂದಿಗೆ ಎಲ್ಲಾ ಪ್ರಾಣಿಗಳನ್ನು ಪ್ರೀತಿಸಿದರು, ರಕ್ಷಿಸಿದರು, ಕರುಣೆ, ದಯೆಯನ್ನು ತೋರಿಸಿದರು. ಎಲ್ಲವುಗಳೊಂದಿಗೆ ಸ್ನೇಹ ಮಾಡಿದರು. ಎಲ್ಲಾ ಒಂದೇ, ಎಲ್ಲವೂ ಸಮಾನವೇ ಎಂದು ಸಾರಿದರು. "ಎಲ್ಲಾ ನಾನೇ – ನಾನೇ ಎಲ್ಲಾ"ಎಂಬ ಸತ್ಯವನ್ನು ತಿಳಿದುಕೊಂಡರು.

ಆದ್ದರಿಂದ ಬಲಕ್ಕಿಂತ ಶಕ್ತಿ ಶ್ರೇಷ್ಠವೆಂದು ತಿಳಿದುಕೊಳ್ಳಿ. ಬಲವಂತರಲ್ಲ ಶಕ್ತಿವಂತರಾಗಿ, ಬಲವಂತರಿಗೆ ದುಃಖ ನಿವಾರಣೆ ಯಾಗುವುದಿಲ್ಲ – ಶಕ್ತಿವಂತರಿಗೆ ದುಃಖ ನಿವಾರಣೆಯಾಗುತ್ತದೆ.

ಬಲವಂತರಿಗೆ ಸಂಕಲ್ಪ ಶಕ್ತಿ ಇರುವುದಿಲ್ಲ, ಕೋರಿಕೆಗಳು ಇರುತ್ತವೆ – ಶಕ್ತಿವಂತರಿಗೆ ಅಪಾರವಾದ ಸಂಕಲ್ಪ ಶಕ್ತಿ ಇರುತ್ತದೆ, ಕೋರಿಕೆಗಳು ನಿಯಂತ್ರಣದಲ್ಲಿ ಇರುತ್ತವೆ. ಅಷ್ಟೇಅಲ್ಲ ಗಮನಿಸಿದರೆ ಸಾಮಾನ್ಯರು ಬಲವಂತರ ಕಾಲುಗಳ ಮೇಲೆ ಬೀಳುವುದಿಲ್ಲ, ಶಕ್ತಿವಂತರ ಕಾಲಗಳ ಮೇಲೆಯೇ ಬೀಳುತ್ತಾರೆ. ಆದ್ದರಿಂದ ಬಲವಂತರಾಗುವುದು ಮುಖ್ಯವಲ್ಲ. ಶಕ್ತಿ ಸಂಪಾದಿಸಿಕೊಂಡು ಶಕ್ತಿವಂತರಾಗಿ, ಯೋಗಿಗಳಾಗುವುದೇ ಮುಖ್ಯ.

ಅಷ್ಟೇ ಅಲ್ಲ ಧ್ಯಾನದ ಮೂಲಕ ಅಂದರೆ ಮನಸ್ಸನ್ನು ಶೂನ್ಯ ಮಾಡಿಕೊಳ್ಳುವುದರ ಮೂಲಕ ಮಾತ್ರವೇ ಶಕ್ತಿಯನ್ನು ಸಂಪಾದಿಸಿಕೊಳ್ಳಬಲ್ಲೆವು ಎಂದು, ಆತ್ಮ ಸ್ಥಿತಿಯನ್ನು ಹೊಂದಬಲ್ಲೆವು ಎಂದು, ಜ್ಞಾನವಂತರು ಆಗಬಲ್ಲವೆಂದು ಭಗವದ್ಗೀತೆಯ ಮೂಲಕ ಶ್ರೀ ಕೃಷ್ಣ ಭಗವಾನರು ಸಹ ಯಾವಾಗಲೋ ಹೇಳಿದ್ದಾರೆ.

ಶ್ಲೋ : ಧೂಮೇ ನಾವ್ರಿಯತೇ ವಹ್ನಿ ರ್ಯಥಾದರ್ಶೋ ಮಲೇನ ಚ /

ಯಥೋಲ್ಬೇ ನಾವೃತೋ ಗರ್ಭ ಸ್ತಥಾ ತೆನೇದ ಮಾವೃತಮ್// (ಭ. ಗೀ. 3–38)

ತಾ :– ಹೊಗೆಯಿಂದ ಅಗ್ನಿ ಯನ್ನು,, ಕೊಳೆಯಿಂದ ಕನ್ನಡಿಯನ್ನು,(ಮಾವಿ ಚೇತ) ಗರ್ಭದಲ್ಲಿರುವ ಶಿಶುವನ್ನು ಮುಚ್ಚಿರುವಂತೆ ಕಾಮದಿಂದ ಆತ್ಮಜ್ಞಾನವನ್ನು ಮುಚ್ಚಲ್ಪಟ್ಟಿದೆ.

ಮೇಲಿನ ಸಂದೇಶವನ್ನಾಧರಿಸಿ ಕಾಮ ಅಂದರೆ ಕೋರಿಕೆ ಅಂದರೆ ಮನಸ್ಸು ಆತ್ಮ ಜ್ಞಾನವನ್ನು ಅಂದರೆ, ಆತ್ಮವನ್ನು ಮುಚ್ಚಿದೆ(ಆವರಿಸಿದೆ) ಎಂದರ್ಥ. ಅಂದರೆ ಅನಂತ ಶಕ್ತಿಯನ್ನು ಹೊಂದಿರುವ ಆತ್ಮವನ್ನು ಮಲಿನವಾದ ಮನಸ್ಸು ಆವರಿಸಿರುವುದರಿಂದ, ಮುಚ್ಚಿರುವುದರಿಂದ ಮಾನವನು ಶಕ್ತಿಹೀನನಾಗಿ, ಅಜ್ಞಾನಿಯಾಗಿ ಪ್ರವರ್ತಿಸುತ್ತಿದ್ದಾನೆ ಎಂದು ಇದರ ಅರ್ಥ.

ಯಾವ ವಿಧದಲ್ಲಿ ಹೊಗೆಯಿಂದ ಅಗ್ನಿ, ಕೊಳೆಯಿಂದ ಕನ್ನಡಿ, (ಮಾಯದಲ್ಲಿ) ಮಗು ಆವರಿಸಲ್ಪಟ್ಟಿವೆಯೋ ಅದೇ ರೀತಿ ಮನಸ್ಸಿನಿಂದ ಆತ್ಮ ಆವರಿಸಲ್ಪಟ್ಟಿದೆ.

ಆದ್ದರಿಂದ ಹೊಗೆ ಹೊರಟು ಹೋದರೆ ಅಗ್ನಿ ಹೇಗೆ ಪ್ರಕಾಶಿಸುತ್ತದೆಯೋ, ಕೊಳೆಹೋದರೆ ಕನ್ನಡಿ ಹೇಗೆ ಸ್ಪಷ್ಟವಾಗಿ ಕಾಣಿಸುತ್ತದೆಯೋ ಆ ವಿಧವಾಗಿಯೇ ಮನಸ್ಸು ಇಲ್ಲದಿದ್ದರೆ ಅಂದರೆ ಶೂನ್ಯವಾದರೆ ಅಂದರೆ ಆಲೋಚನೆಗಳು ನಿಂತು ಹೋದರೆ ಮನುಷ್ಯರಲ್ಲಿ ಆತ್ಮಶಕ್ತಿ ಹೊರಬರುತ್ತದೆ ಎಂದು, ಅಂದರೆ ವ್ಯಕ್ತವಾಗುತ್ತದೆ ಎಂದು ಆತ್ಮಜ್ಞಾನ ಹೆಚ್ಚುತ್ತದೆ ಎಂದು ಶ್ರೀ ಕೃಷ್ಣ ಭಗವಾನರು ಮೇಲಿನ ಶ್ಲೋಕದ ಮೂಲಕ ತಿಳಿಸಿದ್ದಾರೆ.

ಆದ್ದರಿಂದ ಯಾರಾದರೆ ಧ್ಯಾನ ಮಾಡುತ್ತಾರೋ, ಮನಸ್ಸನ್ನು ಶೂನ್ಯಗೊಳಿಸಿಕೊಳ್ಳು ತ್ತಾರೋ, ಅವರಲ್ಲಿ ಅಪಾರವಾದ ಶಕ್ತಿ ಹೆಚ್ಚುತ್ತದೆ ಎಂದು ತಿಳಿದುಕೊಳ್ಳಬೇಕು. ಶಕ್ತಿಯನ್ನು ಹೆಚ್ಚಿಸಿಕೊಂಡವರಿಗೆ ಭೂಮಿಯ ಮೇಲೆ ಅಸಾಧ್ಯವಾದದ್ದು ಯಾವುದೂ ಇರುವುದಿಲ್ಲ. ಯಾವುದನ್ನಾದರೂ ಸುಲಭವಾಗಿ ಸಾಧಿಸುತ್ತಾರೆ.

ಆದ್ದರಿಂದ ತಿಳಿದುಕೊಳ್ಳಿ ಶಕ್ತಿವಂತರು ಯಾರನ್ನು ಪ್ರಾರ್ಥಿಸುವುದಿಲ್ಲ. ಯಾರನ್ನು ಕೇಳಿಕೊಳ್ಳುವುದಿಲ್ಲ. ಅಂದರೆ ದೈವವನಾಗಲೀ, ಪ್ರಕೃತಿಯನಾಗಲೀ, ವಿಶ್ವವನ್ನಾಗಲೀ, ಬಯಸಿದ್ದು ಆಗಬೇಕೆಂದು, ಬೇಕೆಂದು, ಅಂದುಕೊಂಡದ್ದು ನಡೆಯಬೇಕೆಂದು ಬಯಸುವುದಿಲ್ಲ. ಅಂದರೆ ಸಂಕಲ್ಪಗಳನ್ನು ಇಟ್ಟುಕೊಳ್ಳುವುದಿಲ್ಲ. ಅಂದುಕೊಂಡದ್ದನ್ನು ಸಾಧಿಸುವುದಕ್ಕೋಸ್ಕರ ಶ್ರಮ ಪಡುತ್ತಾರೆ. ಆದ್ದರಿಂದ ಯಾರಾದರೂ ಸರಿ ಶಕ್ತಿಯನ್ನು ಹೆಚ್ಚಿಸಿಕೊಂಡು ಶಕ್ತಿವಂತರಾಗಲು ಶ್ರಮ ಪಡಬೇಕು. ಅಷ್ಟೇ ವಿನಃ ಶಕ್ತಿ ಹೀನರಂತೆ ಪ್ರವರ್ತಿಸಬೇಡಿ. ಶಕ್ತಿಯನ್ನು ಕಳೆದುಕೊಳ್ಳುವ ಕೆಲಸಗಳನ್ನು ಮಾಡಬೇಡಿ.

ಸಂಪಾದಿಸಿದ ಶಕ್ತಿ ಹಾಗೆಯೇ ಇರುತ್ತದೆಯೇ?

ಧ್ಯಾನ ಮಾಡಿದರೆ ಶಕ್ತಿ ಹೆಚ್ಚುತ್ತದೆ ಎಂದು ತಿಳಿದುಕೊಂಡು ಪ್ರಸ್ತುತ ಬಹಳಷ್ಟು ಜನ ಧ್ಯಾನ ಮಾಡುತ್ತಿದ್ದಾರೆ. ಹಾಗೆ ಧ್ಯಾನ ಮಾಡುತ್ತಾ ಬಹಳಷ್ಟು ಜನ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಕೆಲವರು ಬಹಳ ಹೆಚ್ಚಾಗಿ ಧ್ಯಾನ ಮಾಡುತ್ತಿದ್ದಾರೆ. ಅವಕಾಶ ಇರುವಾಗಲೇ ಅಲ್ಲ. ಅವಕಾಶವನ್ನು ಕಲ್ಪಿಸಿಕೊಂಡು ಮತ್ತೇ ಧ್ಯಾನ ಮಾಡುತ್ತಿದ್ದಾರೆ. ಹಾಗೆ ಹುಣ್ಣಿಮೆಯ ರಾತ್ರಿಗಳು, ಅಮಾವಾಸ್ಯೆ ರಾತ್ರಿಗಳಲ್ಲಿ ಧ್ಯಾನ ಮಾಡುತ್ತಿದ್ದಾರೆ 40 ದಿನಗಳ ದೀಕ್ಷೆಗಳು, ಅಖಂಡ ಧ್ಯಾನಗಳನ್ನು ಸಹ ಮಾಡುತ್ತಿದ್ದಾರೆ.

ಹಾಗೆ ಮಾಡುತ್ತಾ ಬಹಳಷ್ಟು ಜನ ತಮಗೆ ಬಹಳಷ್ಟು ಶಕ್ತಿ ಹೆಚ್ಚಾಗಿದೆ ಎಂದು ಭಾವಿಸುತ್ತಿದ್ದಾರೆ. ಕೆಲವರು ಧ್ಯಾನ ಮಾಡುತ್ತಲೇ ತಮ್ಮೊಳಗೆ ಅಪಾರವಾದ ಶಕ್ತಿ ಪ್ರವೇಶಿಸಿದಂತೆ ಅನಿಸುತ್ತಿದೆ ಎನ್ನುತ್ತಿದ್ದಾರೆ. ಇನ್ನೂ ಕೆಲವರು ಆ ಶಕ್ತಿಯನ್ನು ಸಹಿಸಿಕೊಳ್ಳಲಾರದೇ ಹೋಗುತ್ತಿದ್ದೇವೆ, ಧ್ಯಾನದಲ್ಲಿ ಕುಳಿತುಕೊಳ್ಳಲಾರದೆ ಹೋಗುತ್ತಿದ್ದೇವೆ ಎಂದು ಸಹ ಹೇಳುತ್ತಾರೆ. ಹಾಗೆ ಹೆಚ್ಚಾಗಿ ಧ್ಯಾನ ಮಾಡುವುದರಿಂದ ಬಹಳಷ್ಟು ಶಕ್ತಿಯನ್ನು ಸಂಪಾದಿಸಿಕೊಂಡಿದ್ದೇವೆ ಎಂದುಕೊಳ್ಳುತ್ತಾರೆ.

ಆದರೆ ಇಲ್ಲಿ ಗಮನಿಸಿದರೆ ಬಹಳಷ್ಟು ಜನರಲ್ಲಿ ಎಷ್ಟು ದಿನಗಳ ಧ್ಯಾನ ಮಾಡಿದರೂ! ಎಷ್ಟು ಹೆಚ್ಚು ಧ್ಯಾನ ಮಾಡಿದರೂ! ಎಷ್ಟು ಶಕ್ತಿ ಸಂಪಾದಿಸಿದರೂ! ಅವರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಅವರ ಪ್ರವರ್ತನೆಯಲ್ಲಿ ಯಾವುದೇ ಬದಲಾವಣೆ ಕಾಣಿಸುವುದಿಲ್ಲ. ಏನೋ ತಕ್ಕಮಟ್ಟಿಗೆ ವ್ಯತ್ಯಾಸವನ್ನು ಹೊರತುಪಡಿಸಿ. ಕೆಲವರು ಧ್ಯಾನ ಮಾಡುವವರನ್ನು ನೋಡಿ ವಿಮರ್ಶಿಸುವವರು ಸಹ ಇದ್ದಾರೆ. ಎಷ್ಟು ದಿನಗಳಿಂದಲೋ ಧ್ಯಾನ ಮಾಡುತ್ತಿದ್ದೀಯಾ? ನಿನ್ನಲ್ಲಿ ಯಾವ ಬದಲಾವಣೆ ಬಂದಿದೆ? ನೀನು ಏನು ಬದಲಾಗಿದ್ದೀಯಾ? ಎಂದು ಹೇಳುತ್ತಿರುತ್ತಾರೆ. ಅದೇ ರೀತಿ ಯಾವಾಗಿನಿಂದಲೂ ಧ್ಯಾನ ಮಾಡುತ್ತಿರುವ ಮಾಸ್ಟರ್ಸ್ ಗಳ ಪ್ರವರ್ತನೆ ಸಹ ಸರಿಯಾಗಿರುವುದಿಲ್ಲ. ನೋಡುವವರು ಅಂದುಕೊಳ್ಳುತ್ತಿರುತ್ತಾರೆ. ಇವರು ಇಷ್ಟು ದಿನಗಳಿಂದ ಧ್ಯಾನ ಮಾಡುತ್ತಿದ್ದರೂ ಇವರ ಪ್ರವರ್ತನೆ ಹೀಗಿದೆಯಲ್ಲ?... ಎಂದು ಅಂದುಕೊಳ್ಳುತ್ತಾ ಇರುತ್ತಾರೆ, ಅನ್ನುತ್ತಾರೆ ಸಹ.

ಹೀಗೆ ಗಮನಿಸಿದರೆ ಬಹಳಷ್ಟು ಜನರಲ್ಲಿ ಧ್ಯಾನ ಮಾಡಿದರೆ ಬರಬೇಕಾದ ಬದಲಾವಣೆಗಳು ಬರುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಧ್ಯಾನದ ಮೂಲಕ ಇವರು ಶಕ್ತಿಯನ್ನು ಸಂಪಾದಿಸಿಕೊಳ್ಳುವುದಲ್ಲ. ಸಂಪಾದಿಸಿಕೊಳ್ಳುತ್ತಿದ್ದಾರೆ ಆದರೆ ಕೆಲವು ತಪ್ಪುಗಳನ್ನು ಮಾಡುತ್ತಿರುವುದರಿಂದ, ಇವರ ಸಂಪಾದಿಸಿಕೊಂಡ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಏಕೆಂದರೆ ಧ್ಯಾನ ಸಾಧನೆಯಿಂದ ಸಂದೇಹವಿಲ್ಲದೇ ಶಕ್ತಿ

ಹೆಚ್ಚುತ್ತದೆ. ಆದರೆ ಅವರು ಮಾಡುವ ತಪ್ಪುಗಳಿಂದ ಸಂಪಾದಿಸಿದ ಶಕ್ತಿಯನ್ನು ಕಳೆದುಕೊಳ್ಳುವುದಷ್ಟೇ ಅಲ್ಲ ಮತ್ತೇ ಸಹಜ ಸ್ಥಿತಿಗೆ ಬರುತ್ತಾರೆ, ಸಹಜವಾಗಿಯೇ ಪ್ರವರ್ತಿಸುತ್ತಾರೆ.

ಉದಾಹರಣೆಗೆ ಮೇಲೆ ಇರುವ ನೀರಿನ ಟ್ಯಾಂಕ್ ಒಳಗೆ ಮೋಟರ್ ನಿಂದ ನೀರನ್ನು ಹೊಡೆಯುತ್ತೇವೆ. ಆದರೆ ಟ್ಯಾಂಕಿನ ಕೆಳಗಡೆ ಇರುವ ರಂಧ್ರಗಳನ್ನು ಗಮನಿಸಲಿಲ್ಲ ಎಂದುಕೊಳ್ಳಿ. ಆಗ ಏನಾಗುತ್ತದೆ? ತುಂಬಿದ ನೀರೆಲ್ಲವೂ ಸೋರಿ ಹೋಗುತ್ತದೆ ಅಲ್ಲವೇ? ಎಷ್ಟು ತುಂಬಿದರೂ ಎಷ್ಟು ದಿನಗಳು ತುಂಬಿದರೂ ಟ್ಯಾಂಕು ತುಂಬುವುದಿಲ್ಲ ಅಲ್ಲವೇ? ತುಂಬಿದ ಶ್ರಮವೆಲ್ಲಾ ವ್ಯರ್ಥವಾಗುತ್ತದೆ ಅಲ್ಲವೇ? ಇದಕ್ಕೆ ಮುಖ್ಯ ಕಾರಣ ಟ್ಯಾಂಕ್ ನ ಕೆಳಗೆ ಇರುವ ರಂಧ್ರಗಳನ್ನು ನೋಡಿಕೊಳ್ಳದೇ ಇರುವುದು. ಒಂದು ವೇಳೆ ಆ ರಂಧ್ರಗಳನ್ನು ಮುಚ್ಚಿ ನೀರನ್ನು ತುಂಬಿದರೆ ಆಗ ಆ ಟ್ಯಾಂಕ್ ಎಷ್ಟು ಬೇಗ ತುಂಬುತ್ತದೆಯೋ ನೋಡಿ? ಇದನ್ನಾಧರಿಸಿ "ನೀರನ್ನು ತುಂಬುವುದೊಂದೇ ಮುಖ್ಯವಲ್ಲ. ಟ್ಯಾಂಕ್‌ನ ಕೆಳಗೆ ರಂದ್ರಗಳು ಇಲ್ಲದಂತೆ ನೋಡಿಕೊಳ್ಳುವುದು ಸಹ ಮುಖ್ಯವೇ ಎಂದು ಅರ್ಥವಾಗುತ್ತದೆ" ಅಂದರೆ ನಮ್ಮ ದೃಷ್ಟಿಯನ್ನು ನೀರು ತುಂಬುವುದರ ಮೇಲಷ್ಟೇ ಅಲ್ಲ, ಕೆಳಗಿನ ರಂದ್ರಗಳ ಮೇಲೆ ಸಹ ಇಡಬೇಕು.

ಅದೇ ರೀತಿ ಬಹಳಷ್ಟು ಜನ ಕಷ್ಟಪಟ್ಟು ಧ್ಯಾನ ಸಾಧನೆ ಮಾಡಿ ಶಕ್ತಿ ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ ಹೊರತು ಅವರಲ್ಲಿನ ಕೆಲವು ಲೋಪ ದೋಷಗಳಿಂದ, ತಪ್ಪುಗಳಿಂದ ಅವರ ಸಂಪಾದಿಸಿದ ಶಕ್ತಿಯನ್ನು ಪೂರ್ತಿಯಾಗಿ ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ "ಶಕ್ತಿಯನ್ನು ಸಂಪಾದಿಸಿಕೊಳ್ಳುವುದು ಮುಖ್ಯವಲ್ಲ. ಸಂಪಾದಿಸಿದ ಶಕ್ತಿಯನ್ನು ಕಳೆದುಕೊಳ್ಳದಂತೆ ನೋಡಿಕೊಳ್ಳುವುದೇ ಮುಖ್ಯ". ಅಂದರೆ "ಎಷ್ಟು ಸಾಧನೆ ಮಾಡಿದ್ದೇವೆ? ಎಷ್ಟು ಶಕ್ತಿ ಸಂಪಾದಿಸಿದ್ದೇವೆ? ಎಂಬುದು ಮುಖ್ಯವಲ್ಲ, ಸಂಪಾದಿಸಿದ ಶಕ್ತಿಯನ್ನು ಕಳೆದು ಕೊಳ್ಳದಂತೆ ಇದ್ದೇವೆಯೇ? ಇಲ್ಲವೇ? ಎಂಬುದೇ ಮುಖ್ಯ". ಅಂದರೆ "ಸಾಧನೆ ಮಾಡುವುದು ಮುಖ್ಯವಲ್ಲ, ತಪ್ಪುಗಳನ್ನು ಮಾಡದಂತೆ ಇರುವುದೇ ಮುಖ್ಯ"ಅಂದರೆ ತಪ್ಪುಗಳು, ಲೋಪದೋಷಗಳು ಇಲ್ಲದಂತೆ ಸಾಧನೆ ಮಾಡಬೇಕು. ಕಾರಣ ಸ್ವಲ್ಪ ಧ್ಯಾನ ಮಾಡಿದರು ಎಷ್ಟೋ ಲಾಭಗಳನ್ನು ಹೊಂದುತ್ತೇವೆ. ನಮ್ಮಲ್ಲಿ ಬಹಳಷ್ಟು ಬದಲಾವಣೆ ಬರುತ್ತದೆ. ಆದ್ದರಿಂದ ಲೋಪ ದೋಷಗಳು ಇಲ್ಲದಂತೆ ನೋಡಿಕೊಳ್ಳಬೇಕು.

ನೋಡಿ ಸಂಪಾದಿಸಿದ್ದನ್ನೆಲ್ಲಾ ಖರ್ಚು ಮಾಡಿದರೆ ಎಷ್ಟು ಲಕ್ಷಗಳನ್ನು ಸಂಪಾದಿಸಿ ಪ್ರಯೋಜನವೇನು? ಪ್ರಸ್ತುತ ಏನು ಇಲ್ಲದಂತೆಯೇ ಅಲ್ಲವೇ?... ಆದರೆ ಸಾವಿರ ಸಂಪಾದಿಸಿದರೂ ಖರ್ಚು ಮಾಡದೇ ಇದ್ದರೆ ಆ ಸಾವಿರಗಳಾದರೂ ಕಾಣಿಸುತ್ತವೆ.

ನಿಧಾನವಾಗಿ ಅವೇ ಲಕ್ಷಗಳಾಗುತ್ತವೆ. ಅಂದರೆ "ಇಲ್ಲಿ ಸಂಪಾದಿಸುವುದು ಮುಖ್ಯವಲ್ಲ. ಖರ್ಚಾಗದೇ ಇರುವುದು ಮುಖ್ಯ". ಅದೇ ರೀತಿ "ಧ್ಯಾನದ ಮೂಲಕ ಶಕ್ತಿಯನ್ನು ಸಂಪಾದಿಸುವುದು ಮುಖ್ಯವಲ್ಲ. ಸಂಪಾದಿಸಿದ ಶಕ್ತಿ ಖರ್ಚಾಗದಂತೆ ನೋಡಿಕೊಳ್ಳುವುದೇ ಮುಖ್ಯ"ಅಂದರೆ "ತಪ್ಪುಗಳನ್ನು ಮಾಡದೇ ಇರುವುದು ಮುಖ್ಯ. ಅಂದರೆ ಲೋಪ ದೋಷಗಳಿಲ್ಲದಂತೆ ಸಾಧನೆ ಮಾಡುವುದೇ ಮುಖ್ಯ".

ಹಾಗಾದರೆ ಯಾವ ಯಾವ ವಿಷಯಗಳಲ್ಲಿ ಸಾಧಕರು ನಷ್ಟ ಹೊಂದುತ್ತಿದ್ದಾರೆ? ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ? ಸಂಪಾದಿಸಿದ ಶಕ್ತಿಯನ್ನು ಹೇಗೆ ಕಳೆದುಕೊಳ್ಳುತ್ತಿದ್ದಾರೆ? ಏಕೆ ಎಷ್ಟು ಸಾಧನೆ ಮಾಡಿದರೂ ಅಭಿವೃದ್ಧಿಯನ್ನು ಸಾಧಿಸಲಾರದೇ ಹೋಗುತ್ತಿದ್ದಾರೆ? ಯಾವಾಗಲೂ ಹಾಗೆಯೇ ಇರುತ್ತಿದ್ದಾರೆ? ಅದೇರೀತಿ ಪ್ರವರ್ತಿಸುತ್ತಿದ್ದಾರೆ. ಏಕೆ ಶ್ರೇಷ್ಠ ರಾಗಲಾರದೇ ಹೋಗುತ್ತಿದ್ದಾರೆ? ಏಕೆ ಬದಲಾವಣೆ ಬರುತ್ತಿಲ್ಲ? ಲೋಪದೋಷ ಎಲ್ಲಿದೆ? ಈ ವಿಷಯಗಳಲ್ಲಿ ಕೆಲವನ್ನು ತಿಳಿದುಕೊಳ್ಳೋಣ.

ಮುಖ್ಯವಾಗಿ ಆಹಾರ ನಿಯಮಗಳನ್ನು ಪಾಲಿಸದೇ ಇರುವುದು ಒಂದು ಕಾರಣ. ಅದರಿಂದ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ, ಶಕ್ತಿಯನ್ನು ಹೆಚ್ಚಿಸಿಕೊಳ್ಳಲಾರದೇ ಹೋಗುತ್ತಿದ್ದಾರೆ. ಆದ್ದರಿಂದ ಧ್ಯಾನ ಸಾಧಕರು ಆಹಾರ ನಿಯಮಗಳನ್ನು ಪಾಲಿಸಬೇಕು. ಸಾತ್ವಿಕವಾದ ಸಸ್ಯಾಹಾರವನ್ನು ಮಾತ್ರವೇ ತೆಗೆದುಕೊಳ್ಳಬೇಕು. ಮಾಂಸಾಹಾರ, ಮೊಟ್ಟೆಗಳನ್ನು ತಿನ್ನಬಾರದು. ಅಷ್ಟೇಅಲ್ಲ ಶಕ್ತಿಯನ್ನು ಕಳೆದುಕೊಳ್ಳಲು ಮತ್ತೊಂದು ಕಾರಣವೂ ಸಹ ಇದೆ. ಬಹಳಷ್ಟು ಜನ ಸಂಕಲ್ಪ ಧ್ಯಾನಗಳನ್ನು ಮಾಡುತ್ತಿದ್ದಾರೆ. ಅಂದರೆ ಸಂಕಲ್ಪ ಇಟ್ಟುಕೊಂಡು ಧ್ಯಾನ ಮಾಡುತ್ತಿದ್ದಾರೆ. ಇದರಿಂದಲೂ ಸಹ ಬಹಳಷ್ಟು ಜನ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ.

ಏಕೆಂದರೆ ಬಹಳಷ್ಟು ಜನರಿಗೆ ವಾಸ್ತವವಾಗಿ ಸಂಕಲ್ಪವೆಂದರೆ ಏನೆಂದು ಸಹ ತಿಳಿದಿಲ್ಲ. ಸಂಕಲ್ಪಕ್ಕೆ, ಕೋರಿಕೆಗೆ ಇರುವ ವ್ಯತ್ಯಾಸ ಗೊತ್ತಿಲ್ಲ. ವಿಕಲ್ಪವೆಂದರೆ ಏನೆಂದು ತಿಳಿಯದು. ಸಂಕಲ್ಪ ಶುದ್ಧಿ ಅಂದರೆ ಏನೆಂದು? ಸಂಕಲ್ಪಶಕ್ತಿ ಹೇಗೆ ಹೆಚ್ಚಾಗುತ್ತದೆ ಎಂದು? ತಿಳಿಯದು. ಸಂಕಲ್ಪಶಕ್ತಿ ಹೆಚ್ಚಾಗಬೇಕೆಂದರೆ ಏನು ಮಾಡಬೇಕೆಂದು ತಿಳಿದಿಲ್ಲ. ಇವನ್ನೆಲ್ಲಾ ತಿಳಿದುಕೊಳ್ಳದೆ, ಆಲೋಚಿಸದಂತೆ ಯಾರು ಏನು ಹೇಳಿದರೆ, ಹೇಗೆ ಹೇಳಿದರೆ ಹಾಗೆ ಮಾಡುತ್ತಿದ್ದಾರೆ. ತಾವು ನಷ್ಟ ಹೊಂದುತ್ತಿದ್ದೇವೆಂಬ ವಿಷಯ ವನ್ನು ಸಹ ತಿಳಿದುಕೊಳ್ಳಲಾರದೇ ಹೋಗುತ್ತಿದ್ದಾರೆ. ಆದ್ದರಿಂದ ಮೊದಲಿಗೆ ಈ ವಿಷಯಗಳನ್ನೆಲ್ಲಾ ಆಲೋಚಿಸೋಣ, ತಿಳಿದುಕೊಳ್ಳೋಣ. ಮುಖ್ಯವಾಗಿ ಮೊದಲಿಗೆ ಕೋರಿಕೆ ಎಂದರೆ ಏನು? ಸಂಕಲ್ಪವೆಂದರೆ ಏನು? ಎಂಬುದನ್ನು ತಿಳಿದುಕೊಳ್ಳೋಣ.

ಕೋರಿಕೆ – ಸಂಕಲ್ಪ

ಮುಖ್ಯವಾಗಿ ಇದನ್ನು ಆಲೋಚಿಸಿ. ಯಾರಾದರೂ ದೇವಸ್ಥಾನಕ್ಕಾಗಲೀ, ಪ್ರಾರ್ಥನಾ ಮಂದಿರಕ್ಕಾಗಲೀ ಹೋದಾಗ ತಮ್ಮ ಕೋರಿಕೆಗಳನ್ನು ಆ ದೇವರಿಗೆ ಮನಸ್ಸಿನಲ್ಲಿ ಹೇಳಿಕೊಳ್ಳುತ್ತಾರೆ. ಅಂದರೆ ತಮಗೆ ಬೇಕಾದವುಗಳನ್ನು ಮನಸ್ಸಿನಲ್ಲಿ ಅಂದುಕೊಳ್ಳುತ್ತಾರೆ. ಹಾಗೆ ಮನಸ್ಸಿನಲ್ಲಿ ಅಂದುಕೊಂಡದ್ದನ್ನು ಕೋರಿಕೆ ಎನ್ನುತ್ತಾರೆ.

ಅದೇ ರೀತಿ ಪ್ರಸ್ತುತ ಸಂಕಲ್ಪವನ್ನು ಇಟ್ಟುಕೊಂಡವರು ಸಹ ತಮ್ಮ ಕಷ್ಟಗಳು ನಿವಾರಣೆಯಾಗಬೇಕೆಂದು, ರೋಗಗಳು ವಾಸಿಯಾಗಬೇಕೆಂದು, ಸಮಸ್ಯೆಗಳು ಹೋಗಬೇಕೆಂದು, ಅಂದುಕೊಂಡಂತಹವು ಆಗಬೇಕೆಂದು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಾರೆ. ನೋಡಿದರೆ ಅಲ್ಲಿ... ಇಲ್ಲಿ... ಎರಡೂ ಮನಸ್ಸಿನಲ್ಲಿ ಅಂದು ಕೊಳ್ಳುವಂತಹವೇ! ಆದ್ದರಿಂದ ಕೋರಿಕೆಗೂ ಸಂಕಲ್ಪಕ್ಕು ಇರುವ ವ್ಯತ್ಯಾಸ ಏನೆಂದು ತಿಳಿದುಕೊಳ್ಳೋಣ.

ಕೋರಿಕೆಗಳು ಮನಸ್ಸಿನಲ್ಲಿ ಅಂದುಕೊಳ್ಳುವಂತಹವು. ಸಹಜವಾಗಿಯೇ ಪ್ರತಿಯೊಬ್ಬರಿಗೂ ಸಮಸ್ಯೆಗಳು, ಕಷ್ಟಗಳು ಇರುತ್ತವೆ. ಒಂದು ವಿಧದಲ್ಲಿ ಸಮಸ್ಯೆಗಳು ಇಲ್ಲದವರೆಂದು ಯಾರೂ ಇರುವುದಿಲ್ಲ. ಅಷ್ಟೇ ಅಲ್ಲ ಸಮಸ್ಯೆಗಳು ನೋವಿನಿಂದ ಕೂಡಿರುತ್ತವೆ. ಆ ನೋವನ್ನು ಸಹಿಸಲಾರದೇ ಯಾರಾದರೂ ಆ ನೋವಿನಿಂದ ಹೊರಬರಬೇಕೆಂದು ನೋಡುತ್ತಾರೆ. ಸುಲಭವಾಗಿ, ಶೀಘ್ರವಾಗಿ ಹೊರಬರಬೇಕೆಂದು ಸಹ ನೋಡುತ್ತಾರೆ. ಆದ್ದರಿಂದ ತಮಗೆ ಇಷ್ಟವಾದ ದೈವವನ್ನು ತಮ್ಮ ಕಷ್ಟಗಳನ್ನು ತೊಲಗಿಸಬೇಕೆಂದು, ತಮ್ಮ ಕೋರಿಕೆಗಳನ್ನು ಈಡೇರಿಸಬೇಕೆಂದು ಮನಸ್ಸಿನಲ್ಲಿ ಪ್ರಾರ್ಥಿಸುತ್ತಾರೆ. ಆ ದೇವರೇ ಎಲ್ಲವನ್ನೂ ಕೊಡುತ್ತಾನೆಂದು, ಎಲ್ಲವನ್ನೂ ತೀರಿಸುತ್ತಾನೆಂದು,

ನೆರವೇರಿಸುತ್ತಾನೆ ಎಂದು ಆಸೆಯಿಂದ ಎದುರು ನೋಡುತ್ತಿರುತ್ತಾರೆ. ಈಡೇರಿದರೆ ದೈವ ಕೃಪೆ ಎನ್ನುತ್ತಾರೆ. ಈಡೇರದಿದ್ದರೆ ನನ್ನ ಕರ್ಮ ಎಂದುಕೊಳ್ಳುತ್ತಾರೆ. ಗಮನಿಸಿದರೆ ಎಲ್ಲಿಯೂ ಯಾವುದೇ ವಿಧವಾದ ಶ್ರಮ(ಪ್ರಯತ್ನ) ಕಾಣಿಸುವುದಿಲ್ಲ. ಹಾಗೆ ಪ್ರಯತ್ನ ಇಲ್ಲದೇ ಇರುವುದನ್ನೇ ಕೋರಿಕೆ ಎನ್ನುತ್ತಾರೆ

ತಿಳಿದುಕೊಳ್ಳಿ "ಅಂದುಕೊಂಡದ್ದು ಆಗಬೇಕೆಂದುಕೊಂಡು ಕುಳಿತುಕೊಂಡರೆ ಅದನ್ನು 'ಕೋರಿಕೆ' ಎನ್ನುತ್ತಾರೆ'. ಆದರೆ ಅಂದುಕೊಂಡದ್ದನ್ನು ಸಾಧಿಸುವುದಕ್ಕೋಸ್ಕರ ವಿಶೇಷವಾಗಿ ಪ್ರಯತ್ನ ಮಾಡಿದರೆ ಅದನ್ನ 'ಸಂಕಲ್ಪ' ಎನ್ನುತ್ತಾರೆ".

ಅಂದರೆ "ಕೋರಿಕೊಂಡವನು ಕುಳಿತುಕೊಳ್ಳುತ್ತಾನೆ. ಸಂಕಲ್ಪಿಸಿದವನು ಶ್ರಮಪಡುತ್ತಾನೆ". ಗಮನಿಸಿದರೆ ಈ ಎರಡಕ್ಕೂ ಇರುವ ವ್ಯತ್ಯಾಸ ಪ್ರಯತ್ನ ಒಂದೇ! ಏಕೆಂದರೆ ಎರಡು ಮನಸ್ಸಿನಲ್ಲಿ ಅಂದುಕೊಳ್ಳುವಂತಹವೇ. ಆದರೆ ಕೋರಿಕೆಯಲ್ಲಿ ಶ್ರಮ ಇರುವುದಿಲ್ಲ. ಸಂಕಲ್ಪದಲ್ಲಿ ಶ್ರಮ ಇರುತ್ತದೆ. ಅದಕ್ಕಾಗಿ ಸಂಕಲ್ಪಿಸಿದವನು ಶ್ರಮ ಪಡುತ್ತಾನೆ. ಆದ್ದರಿಂದ "ಶ್ರಮ ಇಲ್ಲದಿದ್ದರೆ ಕೋರಿಕೆ ಎನ್ನುತ್ತಾರೆ. ಶ್ರಮ ಇದ್ದರೆ ಸಂಕಲ್ಪವೆನ್ನುತ್ತಾರೆ".

ಒಂದು ವಿಧದಲ್ಲಿ "ಬೇಕು ಎಂದುಕೊಳ್ಳುವುದು ಕೋರಿಕೆ. ಮಾಡಬೇಕು ಎಂದುಕೊಳ್ಳುವುದು ಸಂಕಲ್ಪ". ಎರಡೂ ಅಂದುಕೊಳ್ಳುವಂತಹವೇ. ಆದರೆ ಇಲ್ಲಿ "ಕೋರಿಕೊಂಡವನು ಕುಳಿತುಕೊಳ್ಳುತ್ತಾನೆ. ಮಾಡಬೇಕೆಂದು ಸಂಕಲ್ಪಿಸಿಕೊಂಡವನು ಶ್ರಮಪಡುತ್ತಾನೆ". ಉದಾಹರಣೆಗೆ ನೋಡಿ ಯಾವುದಾದರೂ ದೇವಸ್ಥಾನಕ್ಕೆ ಹೋದಾಗಲೋ, ಪ್ರಾರ್ಥನಾ ಮಂದಿರಕ್ಕೆ ಹೋದಾಗಲೋ ಅವರ ಕೋರಿಕೆಗಳನ್ನು ಮನಸ್ಸಿನಲ್ಲಿ ಕೋರಿಕೊಳ್ಳುತ್ತಾರೆ. ಯಾವಾಗ ನೆರವೇರುತ್ತವೆಯೋ ಎಂದು ಆಸೆಯಿಂದ ಎದುರು ನೋಡುತ್ತಿರುತ್ತಾರೆ. ಆದರೆ ಸಂಕಲ್ಪಿಸಿಕೊಂಡವರು ಸಾಧಿಸಲು ಪ್ರಯತ್ನ ಪಡಲು ಪ್ರಾರಂಭಿಸುತ್ತಾರೆ. ಯಾವುದನ್ನು ಸಂಕಲ್ಪಿಸಿದರೆ ಆ ಪ್ರಯತ್ನವನ್ನೇ ಮಾಡುತ್ತಾರೆ. ಎಂತಹದ್ದನ್ನು ಸಂಕಲ್ಪಿಸಿದರೆ ಅಂತಹ ಪ್ರಯತ್ನವನ್ನೇ ಮಾಡುತ್ತಾರೆ.

ಉದಾಹರಣೆಗೆ ಪತ್ರೀಜಿಯವರನ್ನೇ ತೆಗೆದುಕೊಳ್ಳೋಣ. ಅವರು 20 – 30 ವರ್ಷಗಳ ಕೆಳಗೆ ಈ ಪ್ರಪಂಚಕ್ಕೆ 2012ಕ್ಕೆಲ್ಲ ಎಲ್ಲರಿಗೂ ಧ್ಯಾನವನ್ನು ತಿಳಿಯಪಡಿಸಬೇಕು ಎಂದುಕೊಂಡರು. ಅಂದರೆ ಸಂಕಲ್ಪ ಮಾಡಿಕೊಂಡರು. ಹಾಗೆ ಸಂಕಲ್ಪ ಮಾಡಿಕೊಂಡು ಅವರು ಮನೆಯಲ್ಲಿ ಧ್ಯಾನ ಮಾಡುತ್ತಾ ಕುಳಿತುಕೊಂಡರೆ? ಇಲ್ಲ ಅಲ್ಲವೇ? ಅವರು ಅಂದುಕೊಂಡದ್ದನ್ನು ಸಾಧಿಸುವುದಕ್ಕೋಸ್ಕರ ಆಗಿನಿಂದಲೇ ವಿಶೇಷವಾಗಿ ಪ್ರಯತ್ನ ಮಾಡಿದರು. ಗಮನಿಸಿದರೆ ಅವರು ಮಾಮೂಲಾಗಿ ಪ್ರಯತ್ನ ಮಾಡಲಿಲ್ಲ. ವಿಶ್ರಾಂತಿ ಇಲ್ಲದೇ, ಹಗಲುರಾತ್ರಿ, ಪ್ರಯತ್ನ ಪಟ್ಟರು. ಯಾರೂ ಮಾಡಲಾರದಷ್ಟು ಪ್ರಯತ್ನ ಮಾಡಿ ದರು. ಸುಂಟರಗಾಳಿಯಂತೆ ಪ್ರಪಂಚವೆಲ್ಲ ಪರ್ಯಟನೆ ಮಾಡಿದರು. ಇದನ್ನೇ ಸಂಕಲ್ಪ ಎನ್ನುತ್ತಾರೆ. ಅವರ ಸಂಕಲ್ಪ ಅಷ್ಟು ಶ್ರೇಷ್ಠವಾದದ್ದು. ಅವರಿಗೆ ಅಪಾರವಾದ 'ಸಂಕಲ್ಪ ಶಕ್ತಿ' ಇದೆ. ಅದಕ್ಕೆ ಅಷ್ಟೊಂದು ಶ್ರಮ ಪಡಲು ಸಾಧ್ಯವಾಯಿತು. ಅಸಾಧ್ಯವಾದದ್ದನ್ನು ಸುಸಾಧ್ಯ ಮಾಡಿದರು. ಅಷ್ಟೇ ಹೊರತು ಶ್ರಮ ಪಡೆದಂತೆ ಕುಳಿತುಕೊಂಡು ಧ್ಯಾನ ಮಾಡಿದರೆ ಅದು ಸಂಕಲ್ಪವಾಗುವುದಿಲ್ಲ. ಕೋರಿಕೆ ಆಗುತ್ತದೆ. ಅಂದರೆ ಎಲ್ಲರೂ ಸಂಕಲ್ಪ ಮಾಡಿಕೊಂಡು ಧ್ಯಾನ ಮಾಡುತ್ತಿಲ್ಲ. ಕೋರಿಕೊಂಡು ಧ್ಯಾನ ಮಾಡುತ್ತಿದ್ದಾರೆ. ನೆನಪಿನಲ್ಲಿಡಿ "ಮಾಡಬೇಕೆಂದು ಸಂಕಲ್ಪ ಮಾಡಿಕೊಂಡವನು ಕುಳಿತುಕೊಳ್ಳುವುದಿಲ್ಲ, ಶ್ರಮ ಪಡುತ್ತಾನೆ. ಕೋರಿಕೊಂಡವನು ಶ್ರಮಪಡುವುದಿಲ್ಲ ಕುಳಿತುಕೊಳ್ಳುತ್ತಾನೆ".

ಅಷ್ಟೇ ಅಲ್ಲ ಯಾವುದನ್ನು ಮಾಡಬೇಕೆಂದುಕೊಂಡರೆ ಅದಕ್ಕೆ ಸಂಬಂಧಿಸಿದ ಶ್ರಮ ಪಡುತ್ತಾರೆ. ಅಂದರೆ ಯಾವುದನ್ನು ಸಂಕಲ್ಪ ಮಾಡಿಕೊಂಡರೆ ಆ ಶ್ರಮವನ್ನೇ ಪಡುತ್ತಾರೆ. ಉದಾಹರಣೆಗೆ ನೀವು ಇಡ್ಲಿ ಸಾಂಬಾರ್ ತಿನ್ನಬೇಕೆಂದು ಸಂಕಲ್ಪ ಮಾಡಿಕೊಂಡರೆ ಬೇಳೆಯನ್ನು ನೆನೆಸುತ್ತೇವೆ, ನಂತರ ಸಿಪ್ಪೆಯನ್ನು ತೆಗೆಯುತ್ತೇವೆ, ಗ್ರೈಂಡರ್ ನಲ್ಲಿ ರುಬ್ಬುತ್ತೇವೆ, ನುಚ್ಚನ್ನು (ಮಿಶ್ರಣ ಮಾಡು) ಕಲಿಸುತ್ತೇವೆ. ಕುಕ್ಕರ್ ನಲ್ಲಿ ಕುದಿಸುತ್ತೇವೆ. ಹಾಗೆಯೇ ಸಾಂಬಾರ್ ಸಹ

ತಯಾರಿಸುತ್ತೇವೆ. ನಂತರ ಹಾಯಾಗಿ ತಿನ್ನುತ್ತೇವೆ. ಅಷ್ಟೇ ಹೊರತು ಇಡ್ಲಿ ಸಾಂಬಾರ್ ತಿನ್ನಬೇಕೆಂದುಕೊಂಡು ಏನೂ ಮಾಡದಂತೆ ಕುಳಿತುಕೊಂಡರೆ ಅದು ತಿನ್ನಬೇಕೆಂಬ ಕೋರಿಕೆ ಆಗುತ್ತದೆಯೇ ಹೊರತು ಸಂಕಲ್ಪವಾಗುವುದಿಲ್ಲ. ಅಷ್ಟೇ ಅಲ್ಲ ಇಡ್ಲಿ ಸಾಂಬಾರ್ ತಿನ್ನಬೇಕೆಂದು ಸಂಕಲ್ಪ ಇಟ್ಟುಕೊಂಡು ಪ್ರಯತ್ನ ಪಡದಂತೆ ಕುಳಿತುಕೊಂಡು ಧ್ಯಾನ ಮಾಡಿ. ತಿನ್ನಲು ಸಾಧ್ಯವೇ? ಎಂದಿಗೂ ತಿನ್ನಲು ಸಾಧ್ಯವಿಲ್ಲ? ಎಂದಿಗೂ ತಿನ್ನುವುದಿಲ್ಲ. ಎಂದಿಗೂ ನಿಮ್ಮ ಸಂಕಲ್ಪ ನೆರವೇರುವುದಿಲ್ಲ.

ತಿಳಿದುಕೊಳ್ಳಿ ಈ ಸೃಷ್ಟಿಯಲ್ಲಿ ಶ್ರಮ ಪಟ್ಟರೇನೇ ಯಾರಾದರೂ, ಯಾವುದನ್ನಾದರೂ ಸಾಧಿಸಬಲ್ಲರು. ಕಷ್ಟ ಪಟ್ಟರೇನೇ ಯಾವುದೇ ಫಲಿತಾಂಶವಾದರೂ ಬರುತ್ತದೆ. ಅದಕ್ಕಾಗಿಯೇ "ಕೃಷಿತೋ ನಾಸ್ತಿ ದುರ್ಭಿಕ್ಷಂ" ಎಂದು ಹೇಳುತ್ತಾರೆ. ಅಷ್ಟೇ ಅಲ್ಲ "ಕಷ್ಟೇಫಲಿ" ಎಂದು ಸಹ ಹೇಳುತ್ತಾರೆ. ಅಂದರೆ ಕಷ್ಟಪಟ್ಟವನಿಗೇ ಫಲಿತಾಂಶ ಇರುತ್ತದೆ.

ಆದ್ದರಿಂದ ಯಾರಾದರೂ ಅಂದುಕೊಂಡು ಶ್ರಮ ಪಡೆದಂತೆ ಕುಳಿತುಕೊಂಡರೆ ಅದನ್ನು ಸಂಕಲ್ಪ ಎನ್ನುವುದಿಲ್ಲ, ಕೋರಿಕೆ ಎನ್ನುತ್ತಾರೆ. ಅವರು ಕೋರಿಕೆಯನ್ನೇ ಸಂಕಲ್ಪವೆಂದು ಕರೆಯುತ್ತಿದ್ದಾರೆ. ಮತ್ತೊಮ್ಮೆ ತಿಳಿದುಕೊಳ್ಳಿ. "ಸಂಕಲ್ಪ ಮಾಡಿಕೊಂಡವರು ಶ್ರಮಪಡುತ್ತಾರೆ. ಯಾವುದನ್ನು ಸಂಕಲ್ಪ ಮಾಡಿಕೊಂಡರೆ ಆ ಶ್ರಮವನ್ನೇ ಪಡುತ್ತಾರೆ, ಯಾವುದನ್ನೂ ಸಂಕಲ್ಪ ಮಾಡಿಕೊಳ್ಳದಿದ್ದರೆ ಯಾವ ಶ್ರಮವನ್ನು ಪಡುವುದಿಲ್ಲ. ಅದೇ ರೀತಿ ಒಂದನ್ನು ಸಂಕಲ್ಪ ಮಾಡಿಕೊಂಡು ಇನ್ನೊಂದಕ್ಕೆ ಶ್ರಮ ಪಡುವುದಿಲ್ಲ.

ಶ್ರಮ ಪಡದಂತೆ

ಉದಾಹರಣೆಗೆ ಇಡ್ಲಿ ಸಾಂಬಾರ್ ತಿನ್ನಬೇಕೆಂದು ಸಂಕಲ್ಪ ಮಾಡಿ... ಪೂರಿ, ಸಾಗು ಮಾಡುವುದಿಲ್ಲ. ಕಾರಣ ಇಡ್ಲಿ ಸಾಂಬಾರು ಸಂಕಲ್ಪ ಮಾಡಿರುವುದರಿಂದ. ಅದೇ ರೀತಿ ಪುಸ್ತಕ ಓದಬೇಕೆಂದು ಸಂಕಲ್ಪ ಮಾಡಿಕೊಂಡರೆ ಟಿ.ವಿ. ನೋಡುವುದಿಲ್ಲ... ಪುಸ್ತಕವನ್ನೇ

ಓದುತ್ತಾರೆ. ಅದೇ ರೀತಿ ಯಾವ ಪುಸ್ತಕವನ್ನು ಓದಬೇಕೆಂದು ಸಂಕಲ್ಪ ಮಾಡಿದರೆ ಆ ಪುಸ್ತಕವನ್ನೇ ಓದುತ್ತಾರೆ. ಅದೇ ರೀತಿ ಹೊಸದಾಗಿ ಬಟ್ಟೆಗಳನ್ನು ಹೊಲಿಸಬೇಕೆಂದು ಸಂಕಲ್ಪ ಮಾಡಿದರೆ ಬಟ್ಟೆಗಳನ್ನು ಹೊಲಿಸಿಕೊಳ್ಳುತ್ತಾರೆ, ಬಂಗಾರದ ಬಳೆಗಳನ್ನು ಮಾಡಿಸಿಕೊಳ್ಳಬೇಕೆಂದು ಸಂಕಲ್ಪ ಮಾಡಿದರೆ ಬಂಗಾರದ ಬಳೆಗಳನ್ನು ಮಾಡಿಸಿಕೊಳ್ಳುತ್ತಾರೆ. ಮನೆಯಲ್ಲಿ ಫರ್ನಿಚರ್ ಮಾಡಿಸಿಕೊಳ್ಳಬೇಕೆಂದು ಸಂಕಲ್ಪ ಮಾಡಿದರೆ ಫರ್ನಿಚರ್ ಮಾಡಿಸಿಕೊಳ್ಳುತ್ತಾರೆ. ಯಾವುದನ್ನೂ ಸಂಕಲ್ಪ ಮಾಡಿಕೊಳ್ಳದಿದ್ದರೆ ಯಾವುದನ್ನೂ ಮಾಡಿಸುವುದಿಲ್ಲ.

ಒಂದು ವಿಧದಲ್ಲಿ ನೀವು ಮಾಡಲು ಸಾಧ್ಯವಾದವುಗಳನ್ನೇ ಸಂಕಲ್ಪ ಮಾಡುವಿರಿ. ಅಸಾಧ್ಯವಾದವುಗಳನ್ನು ಮಾಡಲು ಸಂಕಲ್ಪ ಮಾಡುವುದಿಲ್ಲ. ಒಂದು ವೇಳೆ ಸಂಕಲ್ಪ ಮಾಡಿದರು ಅದು ಈಡೇರದ ಕೋರಿಕೆಯಾಗಿಯೇ ಉಳಿದುಬಿಡುತ್ತದೆ. ಆಗ ನೀವು ಮಧ್ಯ ಮಧ್ಯದಲ್ಲಿ ಆಪ್ತರೊಂದಿಗೆ ಹೇಳುತ್ತಿರುತ್ತೀರ... ಕಾರನ್ನು ಕೊಂಡುಕೊಳ್ಳಬೇಕೆಂಬ ಕೋರಿಕೆ, ಮಹಡಿ ಮನೆಯನ್ನು ಕಟ್ಟಿಸಬೇಕೆಂಬ ಕೋರಿಕೆ, ಡೈಮಂಡ್ ನೆಕ್ಲೆಸ್ ಮಾಡಿಸಿಕೊಳ್ಳಬೇಕೆಂಬ ಕೋರಿಕೆ, ಅಮೆರಿಕಕ್ಕೆ ಹೋಗಬೇಕೆಂಬ ಕೋರಿಕೆ ಇನ್ನೂ ಈಡೇರಲಿಲ್ಲ... ಹೀಗೆ ಈಡೇರದ ಕೋರಿಕೆಗಳು ಬಹಳಷ್ಟು ಇವೆಯೆಂದು ಹೇಳುತ್ತಿರುತ್ತೀರ. ಅಷ್ಟೇ ಹೊರತು ಸಂಕಲ್ಪಗಳು ಇವೆ ಎಂದು ಹೇಳುವುದಿಲ್ಲ.

ಆದರೆ ಪ್ರಸ್ತುತ ಕೆಲವರು ನಿನಗೆ ಬೇಕಾದದ್ದು ಅಂದುಕೊಂಡು ಅಂದರೆ ಮನಸ್ಸಿನಲ್ಲಿ ಸಂಕಲ್ಪ ಇಟ್ಟುಕೊಂಡು ಧ್ಯಾನ ಮಾಡು ನಿನ್ನ ಸಮಸ್ಯೆ ಪರಿಹಾರವಾಗುತ್ತದೆ, ನಿನ್ನ ರೋಗಗಳು ವಾಸಿಯಾಗುತ್ತವೆ. ನೀನು ಅಂದುಕೊಂಡದ್ದು ಆಗುತ್ತದೆ ಎಂದು ಹೇಳಿದ ತಕ್ಷಣವೇ ಸಹಜವಾಗಿಯೇ ಯಾರಿಗಾದರೂ ಆಸೆ ಉಂಟಾಗುತ್ತದೆ, ಬಹಳ ಸುಲಭವೆನಿಸುತ್ತದೆ, ಬಹಳ ಇಷ್ಟವಾಗುತ್ತದೆ ಸಹ! ಏಕೆಂದರೆ ಅವರು ಸಮಸ್ಯೆಯಿಂದ ಹೊರಬರಬೇಕಲ್ಲವೇ? ಆದ್ದರಿಂದ ಇನ್ನೇನನ್ನು ಆಲೋಚಿಸುವುದಿಲ್ಲ, ಅದೇ ರೀತಿ ಮಾಡುತ್ತಿರುತ್ತಾರೆ. ಆದರೆ ಇಲ್ಲಿ ಕಡ್ಡಾಯವಾಗಿ ಆಲೋಚಿಸಬೇಕು. ಮೊದಲಿಗೆ ಕೋರಿಕೆ ಎಂದರೆ ಏನು? ಸಂಕಲ್ಪ ಎಂದರೆ ಏನು? ಎಂಬುದನ್ನು ತಿಳಿದುಕೊಳ್ಳಬೇಕು.

ಏಕೆಂದರೆ ಬಹಳಷ್ಟು ಜನರಿಗೆ ಈಡೇರದ ಕೋರಿಕೆಗಳು ಬಹಳಷ್ಟು ಇರುತ್ತವೆ. ಉದಾಹರಣೆಗೆ ಕೆಲವರಿಗೆ ತಮ್ಮ ಮಗನನ್ನು ಕಲೆಕ್ಟರ್ ಮಾಡಬೇಕೆಂಬ ಕೋರಿಕೆ ಇರುತ್ತದೆ. ಆದರೆ ಅವನು ಆಗುವುದಿಲ್ಲ. ವಯಸ್ಸು ಮೀರಿರುತ್ತದೆ. ಕಲೆಕ್ಟರ್ ಆಗುತ್ತಾನೆಯೇ? ಅಂದರೆ ಆಗುವುದಿಲ್ಲ ಅಲ್ಲವೇ? ಹಾಗೆ ಆಗಲಿಲ್ಲವೆಂದು ನಮ್ಮ ಮಗ ಕಲೆಕ್ಟರ್ ಆಗಬೇಕೆಂದು ಸಂಕಲ್ಪ ಮಾಡಿಕೊಂಡು ಧ್ಯಾನ ಮಾಡಿದರೆ ವಯಸ್ಸು ಮೀರಿದ

ನಿಮ್ಮ ಮಗ ಕಲೆಕ್ಟರ್ ಆಗಬಲ್ಲನೇ? ಎಂದಿಗೂ ಆಗುವುದಿಲ್ಲ. ಎಷ್ಟು ಜನರಿಂದ ಸಂಕಲ್ಪಗಳನ್ನು ಇಡಿಸಿ ಧ್ಯಾನ ಮಾಡಿಸಿದರು ಆಗುವುದಿಲ್ಲ ಅಲ್ಲವೇ? ಆದ್ದರಿಂದ ಅದು ನಿಮ್ಮ ಕೋರಿಕೆಯೇ ಆಗುತ್ತದೆ ಹೊರತು ನಿಮ್ಮ ಸಂಕಲ್ಪ ಆಗುವುದಿಲ್ಲ. ಅದೇ ಒಂದು ವೇಳೆ ಚಿಕ್ಕಂದಿನಿಂದ ಕಲೆಕ್ಟರ್ ಆಗಬೇಕೆಂದು ನಿಮ್ಮ ಮಗ ಸಂಕಲ್ಪ ಮಾಡಿಕೊಂಡು ಅದಕ್ಕೆ ತಕ್ಕ ಶ್ರಮ ಪಟ್ಟಿದ್ದರೆ, ಪ್ರಯತ್ನಪಟ್ಟಿದ್ದರೆ ಆದರೆ ಆಗಬಹುದು ಇಲ್ಲದಿದ್ದರೆ ಆಗುದೇ ಇರಬಹುದು ಅದು ಅವನ ಪ್ರಯತ್ನವನ್ನು ಆಧರಿಸಿರುತ್ತದೆ. ಅಷ್ಟೇ ಹೊರತು ಕನಿಷ್ಠಪಕ್ಷ ಡಿಗ್ರಿ (ಪದವಿ) ಪಾಸಾಗದೇ, ಶ್ರಮ ಪಡದೇ ಧ್ಯಾನ ಮಾಡಿದರೆ ನಿಮ್ಮ ಮಗ ಕಲೆಕ್ಟರ್ ಹೇಗೆ ಆಗುತ್ತಾನೆ?

ಅದೇ ರೀತಿ ಬಹಳಷ್ಟು ಜನ ಚಿಕ್ಕಂದಿನಿಂದಲೇ ಅವರಿಗೆ ಇಷ್ಟವಾದ ಮಾರ್ಗವನ್ನು ನಿರ್ಧರಿಸಿಕೊಂಡು ಸಾಧಿಸಬೇಕೆಂದು ಸಂಕಲ್ಪ ಮಾಡಿಕೊಂಡಿರುತ್ತಾರೆ, ವಿಶೇಷವಾಗಿ ಪ್ರಯತ್ನ ಪಡುತ್ತಾರೆ. ಕೊನೆಗೆ ಅಂದುಕೊಂಡದ್ದನ್ನು ಸಾಧಿಸುತ್ತಾರೆ. ಹಾಗೆ ಒಳ್ಳೆಯ ಡ್ಯಾನ್ಸರ್ ಆಗಬೇಕೆಂದು ಸಂಕಲ್ಪ ಮಾಡಿಕೊಂಡರೆ ಚಿಕ್ಕಂದಿನಿಂದ ಡ್ಯಾನ್ಸ್ ಪ್ರಾಕ್ಟೀಸ್ ಮಾಡುತ್ತಾರೆ, ಇನ್ನೊಂದರ ಮೇಲೆ ದೃಷ್ಟಿ ಇರಿಸುವುದಿಲ್ಲ, ಕೊನೆಗೆ ಡ್ಯಾನ್ಸರ್ ಆಗುತ್ತಾರೆ. ಅದೇ ರೀತಿ ಸಿಂಗರ್ ಆಗಬೇಕೆಂದು ಸಂಕಲ್ಪ ಮಾಡಿಕೊಂಡರೆ ಸಂಗೀತ ಕಲಿಯುತ್ತಾರೆ, ವಿಶೇಷವಾಗಿ ಸಾಧನೆ ಮಾಡುತ್ತಾರೆ, ಒಳ್ಳೆಯ ಸಿಂಗರ್ ಆಗುತ್ತಾರೆ. ಅದೇ ರೀತಿ ಕ್ರಿಕೆಟರ್ ಆಗಬೇಕೆಂದು ಸಂಕಲ್ಪ ಮಾಡಿಕೊಂಡರೆ ಚಿಕ್ಕಂದಿನಿಂದ ಕ್ರಿಕೆಟ್ ಪ್ರಾಕ್ಟೀಸ್ ಮಾಡುತ್ತಾರೆ. ಕೊನೆಗೆ ಚಾಂಪಿಯನ್ ಆಗುತ್ತಾರೆ.

ಹಾಗೆ ಕ್ರಿಕೆಟ್ ಚಾಂಪಿಯನ್ ಆಗಬೇಕೆಂದು ಸಂಕಲ್ಪ ಮಾಡಿಕೊಂಡವನು ಡ್ಯಾನ್ಸ್ ಪ್ರಾಕ್ಟೀಸ್ ಮಾಡುವುದಿಲ್ಲ. ಅದೇ ರೀತಿ ಡಾನ್ಸ್ ಪ್ರಾಕ್ಟೀಸ್ ಮಾಡುವವನು ಎಂದಿಗೂ ಕ್ರಿಕೆಟ್ ಚಾಂಪಿಯನ್ ಆಗುವುದಿಲ್ಲ. ಹಾಗೆ ಅಂದುಕೊಂಡಿದ್ದನ್ನು ಸಾಧಿಸುವುದು ಎಂಬುದು ಅವರ ಸಂಕಲ್ಪ ಬಲವನ್ನು ಆಧರಿಸಿರುತ್ತದೆ. ಅವರ ಸಂಕಲ್ಪ ಬಲವಾಗಿದ್ದರೆ ಅವರ ಪ್ರಯತ್ನ ತೀವ್ರವಾಗಿ ಇರುತ್ತದೆ. ಆದ್ದರಿಂದ ಅವರ ಸಂಕಲ್ಪ ಬಲವಾಗಿದೆಯೇ? ಇಲ್ಲವೇ? ಎಂಬುದು ಅವರು ಮಾಡುವ ಪ್ರಯತ್ನವನಾದರಿಸಿ ನಾವು ತಿಳಿದುಕೊಳ್ಳಬಹುದು. ಅವರ ಪ್ರಯತ್ನ ಸರಿಯಾಗಿ ಇಲ್ಲದಿದ್ದರೆ ಸಂಕಲ್ಪ ಬಲವಾಗಿ ಇಲ್ಲವೆಂದು ನಾವು ಅರ್ಥಮಾಡಿಕೊಳ್ಳಬಹುದು.

ಆದ್ದರಿಂದ ತಿಳಿದುಕೊಳ್ಳಿ **“ಗಟ್ಟಿಯಾಗಿ ಸಂಕಲ್ಪ ಇಟ್ಟುಕೊಂಡರೆ... ಪ್ರಯತ್ನ ಗಟ್ಟಿಯಾಗಿ ಮಾಡುವುದಿಲ್ಲ. ಅವನದು ಬಲವಾದ ಸಂಕಲ್ಪವಾದಾಗಲೇ ಪ್ರಯತ್ನ ತೀವ್ರವಾಗಿ ಇರುತ್ತದೆ”**. “ಪ್ರಯತ್ನ ತೀವ್ರವಾಗಿ ಇದೆ ಎಂದರೆ ಅವನ ಸಂಕಲ್ಪ ಬಲವಾಗಿದೆ ಎಂದು ನಾವು ಅರ್ಥಮಾಡಿಕೊಳ್ಳಬಹುದು”.

ಅದು ಒಬ್ಬರು ಹೇಳಿದರೆ ಇಟ್ಟುಕೊಳ್ಳುವುದಲ್ಲ, ಗಟ್ಟಿಯಾಗಿ ಅಂದುಕೊಳ್ಳುವುದಲ್ಲ. ಅದು ಸಹಜವಾಗಿಯೇ ಅವರಲ್ಲಿ ಬರಬೇಕು. ಒಬ್ಬರು ಹೇಳಿದರೆ ಬರುವಂತಹದ್ದಲ್ಲ. ಅದು ಅವರಲ್ಲಿ ಬಲವಾಗಿದ್ದರೆ ಇನ್ನೊಬ್ಬರು ಹೇಳಬೇಕಾದ ಅಗತ್ಯವಿಲ್ಲದೆಯೇ ಶ್ರಮ ಪಡುತ್ತಾರೆ, ಸಾಧಿಸುತ್ತಾರೆ. ಇಲ್ಲದಿರುವಾಗ ಸಂಕಲ್ಪ ಗಟ್ಟಿಯಾಗಿ ಇಟ್ಟುಕೊಳ್ಳಬೇಕೆಂದು ಎಷ್ಟು ಹೇಳಿದರೂ, ಸುಮ್ಮನೆ ಧ್ಯಾನ ಮಾಡಿದರೂ ಪ್ರಯೋಜನ ಇರುವುದಿಲ್ಲ.

ಮತ್ತೊಮ್ಮೆ ತಿಳಿದುಕೊಳ್ಳಿ **"ಸಂಕಲ್ಪ ಮಾಡಿಕೊಂಡವನು ಶ್ರಮ ಪಡುತ್ತಾನೆ. ಕೋರಿಕೊಂಡವನು ಕುಳಿತುಕೊಳ್ಳುತ್ತಾನೆ"**. ಅದೇ ರೀತಿ ಸಂಕಲ್ಪ ಬಲವನಾಧರಿಸಿಯೇ ಶ್ರಮ ಸಹ ಇರುತ್ತದೆ ಎಂದು ತಿಳಿದುಕೊಳ್ಳಬೇಕು. ಎಂತಹ ಸಂಕಲ್ಪವಾದರೆ ಅಂತಹ ಶ್ರಮ ಇರುತ್ತದೆ ಎಂದು ಸಹ ತಿಳಿದುಕೊಳ್ಳೋಣ. ಇಲ್ಲಿ ಕೆಲವು ಸಂದೇಹಗಳನ್ನು ನಿವಾರಣೆ ಮಾಡಿಕೊಳ್ಳೋಣ.

ಕೆಲವರು ಕೇಳಬಹುದು ನಾವು ಸಂಕಲ್ಪ ಇಟ್ಟುಕೊಂಡು ಧ್ಯಾನ ಮಾಡಿದರೆ ನಾವು ಅಂದುಕೊಂಡಂತಹವು ಕೆಲವು ನೆರವೇರಿವೆ, ಕೆಲವು ಸಂಭವಿಸಿವೆ, ಹಾಗಾದರೆ ಅವು ಹೇಗೆ ಸಂಭವಿಸಿದವು? ಎಂಬ ಸಂದೇಹ ವ್ಯಕ್ತಪಡಿಸಬಹುದು.

ಆದರೆ ಗಮನಿಸಿದರೆ ಬಹಳಷ್ಟು ಜನ ಹಾಗೆ ಅಂದುಕೊಂಡು ಧ್ಯಾನದಲ್ಲಿ ಕುಳಿತುಕೊಳ್ಳುತ್ತಾರೆ. ಸಹಜವಾಗಿಯೇ ಕೆಲವರಿಗೆ ಸಂಭವಿಸುತ್ತವೆ, ಅಂದು ಕೊಂಡಂತಹವು ನೆರವೇರುತ್ತವೆ. ಆದರೆ ಎಲ್ಲರಿಗೂ ಆಗುವುದಿಲ್ಲ, ಅಂದುಕೊಂಡ ಫಲಿತಾಂಶಗಳು ಬರುವುದಿಲ್ಲ. ಹಾಗಾದರೆ ಇದಕ್ಕೆ ಏನು ಕಾರಣ?

ಹಾಗೆ ಸಂಕಲ್ಪ ಇಟ್ಟುಕೊಂಡು ಧ್ಯಾನ ಮಾಡಿದರೆ ಎಲ್ಲರಿಗೂ ಆಗಬೇಕು ಅಲ್ಲವೇ? ಏಕೆ ಆಗಲಿಲ್ಲ? ಕೆಲವರಿಗೇ ಏಕೆ ಆಗಿವೆ? ಆಗ ಅವರಿಗೆ ಬೇಕಾದವರಿಗೆ ಆ ಮಾಸ್ಟರ್ ನೋಡಿದೆಯಾ ನಾನು ಹೇಳಿದ್ದು ಆಯಿತು ಎನ್ನುತ್ತಾನೆ. ಆಗದವರನ್ನು ಆ ಮಾಸ್ಟರ್ ಏನನ್ನುತ್ತಾನೆ ಎಂದರೆ ನೀನು **"ಸಂಕಲ್ಪವನ್ನು ಗಟ್ಟಿಯಾಗಿ ಇಟ್ಟುಕೊಂಡಿಲ್ಲ – ಗಟ್ಟಿಯಾಗಿ ಸಂಕಲ್ಪ ಮಾಡಿಕೋ!"** ಎಂದು ಹೇಳುತ್ತಾನೆ. ಒಂದು ವೇಳೆ ಯಾರಾದರೂ ನಾವು ಗಟ್ಟಿಯಾಗಿಯೇ ಇಟ್ಟುಕೊಂಡಿದ್ದೆವು ಆದರೂ ಅಂದುಕೊಂಡದ್ದು ಆಗಲಿಲ್ಲ ಎಂದು ಹೇಳಿದರೆ ಆಗ ಆ ಮಾಸ್ಟರ್ ನಿನ್ನ ಎನರ್ಜಿ ಲೆವೆಲ್ಸ್ ಸಾಕಾಗಿಲ್ಲ. ಅದಕ್ಕಾಗಿ ಆಗಿಲ್ಲ. ಆದ್ದರಿಂದ ಇನ್ನೂ ಚೆನ್ನಾಗಿ ಧ್ಯಾನ ಮಾಡು, ಎನರ್ಜಿ ಹೆಚ್ಚಿಸಿಕೋ... ಆಗ ನೀನು ಅಂದುಕೊಂಡಿದ್ದು ಆಗುತ್ತದೆ ಎಂದು ಹೇಳುತ್ತಾನೆ. ಆದರೆ ಇಲ್ಲಿ ಆಲೋಚಿಸಬೇಕಾದದ್ದು ಇದೆ. ಹಾಗೆ ಅಂದುಕೊಂಡು ಕುಳಿತುಕೊಂಡು ಧ್ಯಾನ ಮಾಡಿದರೆ ಅದನ್ನು ಸಂಕಲ್ಪ ಎನ್ನುವುದಿಲ್ಲ... ಕೋರಿಕೆಯನ್ನುತ್ತಾರೆ. ಅಂದರೆ ಕೋರಿಕೊಂಡು ಧ್ಯಾನ ಮಾಡುತ್ತಾರೆ

ಎಂಬ ಮಾತು. ಅಂದರೆ ಕೋರಿಕೊಂಡು ಧ್ಯಾನ ಮಾಡಿದರೆ ಕೆಲವರಿಗೆ ಆಗಿದೆ, ಕೆಲವರಿಗೆ ಆಗಿಲ್ಲ. ಇದಕ್ಕೆ ಕಾರಣವನ್ನು ತಿಳಿದುಕೊಳ್ಳಬೇಕು.

ತಿಳಿದುಕೊಳ್ಳಿ ಗಟ್ಟಿಯಾದ ಸಂಕಲ್ಪವೆಂದರೆ ಗಟ್ಟಿಯಾಗಿ ಅಂದುಕೊಳ್ಳುವುದಲ್ಲ. ವಿಕಲ್ಪವಿಲ್ಲದಂತೆ ಇರುವುದು. ಅಂದರೆ **"ವಿಕಲ್ಪವಿಲ್ಲದ ಸಂಕಲ್ಪವೇ ಗಟ್ಟಿಯಾದ ಸಂಕಲ್ಪ"**. ಅಂತಹ ಸಂಕಲ್ಪವೇ ಯಾರಿಗಾದರೂ ಸಿದ್ಧಿಸುತ್ತದೆ. ಆದ್ದರಿಂದ ಯಾರ ಸಂಕಲ್ಪವಾದರೂ ಸಿದ್ದಿಸಬೇಕೆಂದರೆ! ಅಂದರೆ ನೆರವೇರಬೇಕೆಂದರೆ! ವಿಕಲ್ಪ ಇರಬಾರದೆಂದು ತಿಳಿದುಕೊಳ್ಳಬೇಕು. ಆದ್ದರಿಂದ ವಿಕಲ್ಪವೆಂದರೆ ಏನು? ವಿಕಲ್ಪವಿಲ್ಲದ ಸಂಕಲ್ಪ ಹೇಗೆ ಸಾಧ್ಯವಾಗುತ್ತದೆ ಎಂಬುದನ್ನು ನಂತರ ತಿಳಿದುಕೊಳ್ಳೋಣ.

ಹಾಗಾದರೆ ಹಾಗೆ ಅಂದುಕೊಂಡು ಕುಳಿತುಕೊಂಡು ಧ್ಯಾನ ಮಾಡಿದಾಗ ಕೆಲವರಿಗೆ ಏಕೆ ಆಯಿತು? ಕೆಲವರಿಗೆ ಏಕೆ ಆಗಲಿಲ್ಲ? ಅಷ್ಟೇ ಅಲ್ಲ ಹಾಗೆ ಆದವರಿಗೆ ಮತ್ತೊಂದು ಸಾರಿ ಆಗುವುದಿಲ್ಲ. ವಾಸ್ತವವಾಗಿ ಇವುಗಳಿಗೆ ಕಾರಣವೇನು? ಇದನ್ನು ನಾವು ಮುಖ್ಯವಾಗಿ ತಿಳಿದುಕೊಳ್ಳಬೇಕು.

ಮುಖ್ಯವಾಗಿ ಧ್ಯಾನ ಮಾಡುತ್ತಾ ಹೋದಂತೆ ಪ್ರತಿಯೊಬ್ಬರಲ್ಲೂ ಶಕ್ತಿ ಹೆಚ್ಚು ತಲೆ ಇರುತ್ತದೆ. ವಿಶೇಷವಾಗಿ ಧ್ಯಾನ ಮಾಡಿದಾಗ ವಿಶೇಷವಾಗಿ ಶಕ್ತಿ ಹೆಚ್ಚುತ್ತದೆ. ಹಾಗೆ ವಿಶೇಷವಾದ ಧ್ಯಾನವನ್ನು ಮಾಡಿ ವಿಶೇಷವಾಗಿ ಶಕ್ತಿಯನ್ನು ಸಂಪಾದಿಸಿಕೊಂಡವರು ಏನನ್ನಾದರೂ ಕೋರಿಕೊಂಡರೆ ಆ ಕೋರಿಕೆ ನೆರವೇರುತ್ತದೆ. ಕಾರಣ ಅವರು ಕೋರಿ ಕೊಂಡ ಕೋರಿಕೆಗೆ ತಕ್ಕ ಶಕ್ತಿ ಅವರಿಗೆ ಇರುವುದರಿಂದ. ಅದೇ ರೀತಿ ಅವರ ಕೋರಿಕೆಗೆ ತಕ್ಕ ಶಕ್ತಿ ಇಲ್ಲದಿದ್ದರೆ ಅವರ ಕೋರಿಕೆ ನೆರವೇರುವುದಿಲ್ಲ.

ಇಲ್ಲಿಯೇ ಒಂದು ವಿಷಯ ತಿಳಿದುಕೊಳ್ಳಬೇಕು. ಶಕ್ತಿ ಇರುವವರ ಕೋರಿಕೆ ನೆರವೇರುತ್ತದೆ. ಆದರೆ ಅಲ್ಲಿಯವರೆಗೂ ಅವರು ಧ್ಯಾನದ ಮೂಲಕ ಸಂಪಾದಿಸಿಕೊಂಡ ಶಕ್ತಿಯನ್ನೆಲ್ಲಾ ಕಳೆದುಕೊಳ್ಳುತ್ತಾರೆ ಪುನಃ ಸಾಧನೆಯಲ್ಲಿ ಸಹಜ ಸ್ಥಿತಿಗೆ ಬರುತ್ತಾರೆ. ಅಂದರೆ ಕೋರಿಕೆ ನೆರವೇರುತ್ತದೆ ಆದರೆ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ಇಂತಹವರು ಮತ್ತೊಮ್ಮೆ ಇನ್ನೊಂದು ಸಂಕಲ್ಪವನ್ನು ಮಾಡಿಕೊಂಡರೆ, ಅಂದರೆ ಕೋರಿಕೊಂಡರೆ, ಆ ಸಂಕಲ್ಪ ನೆರವೇರುವುದಿಲ್ಲ. ಕಾರಣ ಅವರು ಶಕ್ತಿಯನ್ನು ಕಳೆದುಕೊಳ್ಳುವುದೇ. ಒಂದು ಸಂಕಲ್ಪ ನೆರವೇರಿ, ಇನ್ನೊಂದು ಸಂಕಲ್ಪ ನೆರವೇರದೇ ಇರುವುದಕ್ಕೆ ಇದೇ ಕಾರಣ. ಹಾಗೆಯೇ ಎಷ್ಟು ಧ್ಯಾನ ಮಾಡಿದರೂ ಸಂಕಲ್ಪಗಳು, ಅಂದರೆ ಕೋರಿಕೆಗಳು ನೆರವೇರದೇ ಇರುವುದಕ್ಕೆ ಕಾರಣ ಅವರಲ್ಲಿ ಬೇಕಾದಷ್ಟು ಶಕ್ತಿ ಇಲ್ಲದೇ ಇರುವುದು.

ಇಂತಹ ಪರಿಸ್ಥಿತಿಗಳಲ್ಲಿ ಕೆಲವರು ಹಾಗಾದರೆ ನಾವು ಸಂಕಲ್ಪ ಮಾಡಿಕೊಳ್ಳದೇ ಹೋದರೆ ನಮ್ಮ ಸಮಸ್ಯೆಗಳು ಹೇಗೆ ಪರಿಹಾರವಾಗುತ್ತವೆ? ನಮ್ಮ ಸಂಕಟಗಳು ಹೇಗೆ ಹೋಗುತ್ತವೆ? ಎಂದು ಕೇಳಬಹುದು. ಆದರೆ ತಿಳಿದುಕೊಳ್ಳಿ ಕೋರಿಕೊಳ್ಳದೆ ಅಂದರೆ ಸಂಕಲ್ಪ ಇಟ್ಟುಕೊಳ್ಳದಂತೆ ಧ್ಯಾನ ಮಾಡಿದರೂ... ಅವರ ಕೋರಿಕೆಗಳಿಗೆ ತಕ್ಕಷ್ಟು ಧ್ಯಾನ ಸಾಧನೆ ಮಾಡಿ, ಶಕ್ತಿಯನ್ನು ಸಂಪಾದನೆ ಮಾಡಿಕೊಂಡರೆ ಸಾಕು ಅವರ ಕೋರಿಕೆ ಸಹಜವಾಗಿಯೇ ನೆರವೇರುತ್ತದೆ. ಆದರೆ ಇಲ್ಲಿ ಮತ್ತೊಂದು ಲಾಭವೇನೆಂದರೆ ಅವರ ಶಕ್ತಿ ಖರ್ಚಾಗುವುದಿಲ್ಲ. ಆದರೆ ಕೋರಿ ಕೊಂಡರೆ ಮಾತ್ರ ಶಕ್ತಿ ಖರ್ಚಾಗುತ್ತದೆ. ಆದ್ದರಿಂದ ಕೋರಿಕೊಳ್ಳದಂತೆ ಧ್ಯಾನ ಮಾಡುವುದೇ ಯಾರಿಗಾದರೂ ಉತ್ತಮ. ಕಾರಣ ಸಮಸ್ಯೆಯು ಪರಿಹಾರವಾಗುತ್ತದೆ; ಶಕ್ತಿಯು ಖರ್ಚಾಗುವುದಿಲ್ಲ. ಆದ್ದರಿಂದ **"ನೀವು ಶ್ರಮಪಡಿ. ಫಲಿತಾಂಶವನ್ನು ಪ್ರಕೃತಿಗೆ ಬಿಟ್ಟುಬಿಡಿ". ಕಾರಣ "ಕರ್ಮ ಮಾಡುವುದಕ್ಕಾಗಿಯೇ ನಮಗೆ ಅಧಿಕಾರವಿದೆ ಹೊರತು, ನಾವು ಮಾಡಿದ್ದಕ್ಕೆ ಫಲಿತಾಂಶವನ್ನು ಕೋರುವ ಅಧಿಕಾರ ನಮಗಿಲ್ಲ".**

ಆದ್ದರಿಂದ ತಿಳಿದುಕೊಳ್ಳಿ ಭಗವಂತನ ಸೃಷ್ಟಿಯಲ್ಲಿ ಕೋರದಂತೆ ಸಾಧನೆ ಮಾಡುವವರು ಎರಡು ವಿಧಗಳಲ್ಲಿ ಲಾಭ ಹೊಂದುತ್ತಾರೆ. ಆದರೆ ಕೋರಿಕೊಂಡವರು ಎರಡು ವಿಧಗಳಲ್ಲಿ ನಷ್ಟ ಹೊಂದುತ್ತಾರೆ. ಏಕೆಂದರೆ ಅವರು ಶಕ್ತಿಯನ್ನು ಕಳೆದುಕೊಳ್ಳುವುದಷ್ಟೇ ಅಲ್ಲ, ಒಂದು ಸಮಸ್ಯೆ ಪರಿಹಾರವಾದರೂ ಪುನಃ ಸಮಸ್ಯೆಗಳು ಬರುತ್ತಲೇ ಇರುತ್ತವೆ. ಆಗ ಅವರು ಏನು ಮಾಡಲು ಆಗುವುದಿಲ್ಲ. ಕನಿಷ್ಠ ಪಕ್ಷ ಸಮಸ್ಯೆಯನ್ನು ಸಹಿಸಿಕೊಳ್ಳುವ ಶಕ್ತಿಯು ಸಹ ಅವರಿಗೆ ಇರುವುದಿಲ್ಲ. ಕಾರಣ ಶಕ್ತಿಯನ್ನು ಕಳೆದುಕೊಂಡಿರುವುದರಿಂದ. ಅದಕ್ಕಾಗಿಯೇ ಶಾಸ್ತ್ರಗಳಲ್ಲಿ **"ಶ್ರಮಪಡಲು ಹೇಳಿದ್ದಾರೆಯೇ ಹೊರತು ಕೋರಿಕೊಳ್ಳಲು ಹೇಳಿಲ್ಲ".**

ಇದೇ ವಿಷಯವನ್ನು ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅದಕ್ಕಾಗಿಯೇ ಶಾಸ್ತ್ರಗಳಲ್ಲಿ **"ಮಾಡಿಕೊಂಡವನಿಗೆ ಮಾಡಿಕೊಂಡಷ್ಟು ಮಹಾದೇವ"** ಎಂದಿದ್ದಾರೆ ಹೊರತು **"ಕೋರಿಕೊಂಡವನಿಗೆ ಕೋರಿಕೊಂಡಷ್ಟು ಮಹಾದೇವ"** ಎಂದು ಹೇಳಿಲ್ಲ.

ಮುಖ್ಯವಾಗಿ ಶ್ರೀ ಕೃಷ್ಣ ಭಗವಾನರು **"ನಿಷ್ಕಾಮ ಕರ್ಮ"** ಮಾಡಲು ಹೇಳಿದ್ದಾರೆ ಅಂದರೆ ಯಾವುದೇ ಕರ್ಮ ಮಾಡಿದರು ಅಂದರೆ ಯಾವುದೇ ಕೆಲಸ ಮಾಡಿದರು ಪ್ರತಿಫಲವನ್ನು ನಿರೀಕ್ಷಿಸಬೇಡ ಎಂದಿದ್ದಾರೆ". ಅವರು ಇನ್ನೂ **'ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನ!'** ಎಂದಿದ್ದಾರೆ. ಅಂದರೆ ಕರ್ಮ ಮಾಡುವುದಕ್ಕಷ್ಟೇ ನಿನಗೆ ಅಧಿಕಾರವಿದೆಯೇ ಹೊರತು, ಫಲಿತಾಂಶವನ್ನು ನಿರೀಕ್ಷಿಸಲು ನಿನಗೆ ಅಧಿಕಾರವಿಲ್ಲ" ಎಂದಿದ್ದಾರೆ. ಅಂದರೆ ಕೋರಿಕೊಳ್ಳುವುದಕ್ಕೆ ಅಧಿಕಾರವೇ ಇಲ್ಲ ಎಂದು ಹೇಳಿದ್ದಾರೆ.

ಅವರು ಇನ್ನು ಏನು ಹೇಳಿದ್ದಾರೆಂದರೆ **"ಕರ್ತೃತ್ವ ಭಾವವಿಲ್ಲದೇ ಮಾಡಲು ಹೇಳಿದ್ದಾರೆ". ಅಂದರೆ "ನಾನು ಮಾಡುತ್ತಿದ್ದೇನೆ ಎಂಬ ಭಾವನೆಯನ್ನು ಸಹ ಬಿಟ್ಟುಬಿಡಲು ಹೇಳಿದ್ದಾರೆ".** ಅಂದರೆ ನಾನು ಎಂಬುದೇ ಇಲ್ಲದಿರುವಾಗ ವಾಸ್ತವವಾಗಿ ಕೋರಿಕೊಳ್ಳುವುದು ಎಲ್ಲಿರುತ್ತದೆ?

ಅಷ್ಟೇ ಅಲ್ಲ ಅವರು ಇನ್ನೂ ಎಲ್ಲಿಯವರೆಗೆ ಹೇಳಿದ್ದಾರೆಂದರೆ **"ಎಲ್ಲದಕ್ಕಿಂತಲೂ ಕರ್ಮಫಲದ ತ್ಯಾಗ ಉನ್ನತವಾದದ್ದು"** ಎಂದಿದ್ದಾರೆ. ಅಂದರೆ ನಾವು ಮಾಡುವ ಯಾವುದೇ ಕರ್ಮಕ್ಕಾದರೂ ಫಲಿತಾಂಶವನ್ನು ನಿರೀಕ್ಷಿಸಬೇಡ ಬಿಟ್ಟುಬಿಡು ಎಂದಿದ್ದಾರೆ. ಅದೇ ಎಲ್ಲದಕ್ಕಿಂತಲೂ ಉನ್ನತವಾದದ್ದು ಎಂದಿದ್ದಾರೆ. ಅಂದರೆ ಧ್ಯಾನ ಮಾಡಿದರು ಫಲಿತಾಂಶವನ್ನು ಆಶಿಸಬಾರದು ಎಂಬುದೇ ಅದರ ಅರ್ಥ. ಆದರೆ ನಾವು ಧ್ಯಾನಕ್ಕಿಂತಲೂ ಮುಂಚೆಯೇ ಸಂಕಲ್ಪ ಮಾಡಿಕೊಳ್ಳುತ್ತಿದ್ದೇವೆ, ಅಂದರೆ ಕೋರಿಕೊಳ್ಳುತ್ತಿದ್ದೇವೆ, ಅಂದರೆ ಭಾವಿಸುತ್ತಿದ್ದೇವೆ, ಅಂದರೆ ಭಗವಂತನು ಹೇಳಿರುವುದಕ್ಕೆ ವಿರುದ್ಧವಾಗಿ ಮಾಡುತ್ತಿದ್ದೇವೆ. ಹಾಗೆ ಮಾಡಿದರೆ ನಷ್ಟ ಹೊಂದುವುದು ನಾವೇ ಅಲ್ಲವೇ? ಆದ್ದರಿಂದ ನಮ್ಮನ್ನು ಶಕ್ತಿವಂತರನ್ನಾಗಿ ಮಾಡುವ ಧ್ಯಾನ ಸಾಧನೆ ಮಾಡುವಾಗ ಸಂಕಲ್ಪಗಳು ಅಂದರೆ ಕೋರಿ ಕೊಳ್ಳಬೇಕಾದ ಅವಶ್ಯಕತೆ ಇಲ್ಲವೆಂದು ತಿಳಿದುಕೊಳ್ಳಬೇಕು.

ಭಗವದ್ಗೀತೆಯಲ್ಲಿನ ಈ ಕೆಳಗಿನ ಶ್ಲೋಕವನ್ನು ನೋಡಿ.

ಶ್ಲೋ: ಯಸ್ಯ ಸರ್ವೇ ಸಮಾರಂಭಾಹ ಕಾಮ ಸಂಕಲ್ಪ ವರ್ಜಿತಾಹ |

ಜ್ಞಾನಾಗ್ನಿದಗ್ಧಕರ್ಮಾಣಂ ತಾ ಮಾಹು: ಪಂಡಿತಂ ಬುಧಾ: || (ಭ. ಗೀ. 4–19)

ತಾ:–ಯಾರ ಸಮಸ್ತ ಕರ್ಮಗಳು ಕೋರಿಕೆ, ಸಂಕಲ್ಪಗಳು ಇಲ್ಲದಂತೆ ಪ್ರಾರಂಭ ವಾಗುತ್ತವೆಯೋ; ಯಾರ ಕರ್ಮಗಳೆಲ್ಲವೂ ಜ್ಞಾನಾಗ್ನಿ ಯಿಂದ ಭಸ್ಮವಾಗುತ್ತವೆಯೋ! ಅಂತಹವರನ್ನು ಬುದ್ಧಿವಂತರು, ಪಂಡಿತರೆಂದು ಕರೆಯುತ್ತಾರೆ.

ಮೇಲಿನ ಶ್ಲೋಕವನ್ನಾಧರಿಸಿ ಕರ್ಮಗಳನ್ನು ಮಾಡುವಾಗ ಕೋರಿಕೆಗಳಾಗಲೀ, ಸಂಕಲ್ಪಗಳಾಗಲೀ ಇಲ್ಲದಂತೆ ಮಾಡಬೇಕೆಂದು, ಅವನೇ ಶ್ರೇಷ್ಠವಾದವನೆಂದು ಶ್ರೀಕೃಷ್ಣ ಭಗವಾನರು ಹೇಳಿದ್ದಾರೆ. ಆದ್ದರಿಂದ ಕೊನೆಗೆ ಧ್ಯಾನ ಮಾಡಿದರೂ, ಕೋರಿಕೆಗಳಾಗಲೀ, ಸಂಕಲ್ಪಗಳಾಗಲೀ ಇಲ್ಲದಂತೆ ಮಾಡಬೇಕೆಂದು ಇದನ್ನಾದರಿಸಿ ನಾವು ತಿಳಿಯಬಹುದು.

ಏಕೆಂದರೆ ಈ ಸೃಷ್ಟಿಯಲ್ಲಿ **"ಮಾಡಬೇಕಾದದ್ದನ್ನು ಮಾಡಿದರೆ ಹೊಂದ ಬೇಕಾದದ್ದನ್ನು ಖಚಿವಾಗಿ ಹೊಂದುತ್ತಾರೆ".** ತಿಳಿದುಕೊಳ್ಳಿ ಮಾಡಿಕೊಂಡವನು ಕೋರಿ ಕೊಳ್ಳದೇ ಇದ್ದರೂ ಹೊಂದಬೇಕಾದದ್ದನ್ನು ಹೊಂದುತ್ತಾನೆ. ಅದೇ ರೀತಿ ಮಾಡಿಕೊಳ್ಳ

ದವನು ಕೋರಿಕೊಂಡರು ಹೊಂದುವುದಿಲ್ಲ". ಇದೇ ಈ ಸೃಷ್ಟಿಯಲ್ಲಿನ ಒಂದು ಶ್ರೇಷ್ಠ ಸಿದ್ಧಾಂತ. ಆದ್ದರಿಂದ ತಿಳಿದುಕೊಳ್ಳಿ! ಕೋರಿಕೊಂಡು ಅಂದರೆ ಸಂಕಲ್ಪ ಮಾಡಿಕೊಂಡು ಧ್ಯಾನ ಮಾಡಿದವರು ನಷ್ಟ ಹೊಂದುತ್ತಾರೆ. ಆದರೆ ಕೋರಿಕೊಳ್ಳದಂತೆ ಅಂದರೆ ಸಂಕಲ್ಪ ಮಾಡಿಕೊಳ್ಳದಂತೆ ಧ್ಯಾನ ಮಾಡಿದವರು ಎಲ್ಲಾ ವಿಧಗಳಲ್ಲಿಯೂ ಲಾಭ ಹೊಂದುತ್ತಾರೆ.

ಕೋರಿಕೊಂಡು ಧ್ಯಾನ ಮಾಡಿದರೆ ಸಂಪಾದಿಸಿಕೊಂಡ ಶಕ್ತಿಯನ್ನು ಹೇಗೆ ಕಳೆದುಕೊಳ್ಳುತ್ತೇವೆಯೋ ಬ್ರಹ್ಮರ್ಷಿ ವಿಶ್ವಾಮಿತ್ರನ ಕಥೆಯ ಮೂಲಕ ತಿಳಿದುಕೊಳ್ಳೋಣ.

ವಿಶ್ವಾಮಿತ್ರನು ಸಾವಿರ ವರ್ಷಗಳು ತಪಸ್ಸು ಮಾಡಿದನು ಅಂದರೆ ಧ್ಯಾನ ಮಾಡಿದನು. ಆತ ಅಪಾರವಾದ ಶಕ್ತಿಯನ್ನು ಸಂಪಾದಿಸಿಕೊಂಡನು. ಎಷ್ಟು ಶಕ್ತಿಯನ್ನು ಸಂಪಾದಿಸಿದನೆಂದರೆ ಸೃಷ್ಟಿಗೆ ಪ್ರತಿಸೃಷ್ಟಿಯನ್ನು ಮಾಡಬಲ್ಲಂತಹ ಶಕ್ತಿಯನ್ನು ಸಂಪಾದಿಸಿದನು. ಹೀಗೆ ಅಪಾರವಾದ ಶಕ್ತಿಯನ್ನು ಸಂಪಾದಿಸಿದ ವಿಶ್ವಾಮಿತ್ರನನ್ನು ನೋಡಿ ಇಂದ್ರನು ಭಯ ಪಟ್ಟನು. ಅಂತಹ ಶಕ್ತಿಯನ್ನು ಸಂಪಾದಿಸಿದ ವಿಶ್ವಾಮಿತ್ರನು ಲೋಕಕ್ಕೆ ಒಳಿತನ್ನು ಮಾಡುತ್ತಾನೆಯೇ? ಕೆಡುಕನ್ನು ಮಾಡುತ್ತಾನೆಯೇ? ಎಂಬ ಸಂದೇಹದಿಂದ ವಿಶ್ವಾಮಿತ್ರನನ್ನು ಪರೀಕ್ಷೆ ಮಾಡಬೇಕೆಂದುಕೊಂಡನು.

ಮೇನಕೆಯನ್ನು ಕಳುಹಿಸಿದನು. ಮೇನಕೆಯ ಸೌಂದರ್ಯವನ್ನು ನೋಡಿ ವಿಶ್ವಾಮಿತ್ರನು ಮೋಹಿಸಿದನು. ನನ್ನನ್ನು ವಿವಾಹ ಮಾಡಿಕೋ ಎಂದು ಕೋರಿದನು. ಆಗ ಮೇಲಕ್ಕೆ ಒಂದು ಷರತ್ತನ್ನು ಇಟ್ಟಳು. ಏನೆಂದು? ಯಾವಾಗಲಾದರೆ ನನ್ನ ಕೋರಿಕೆಯನ್ನು ನಿರಾಕರಿಸುತ್ತಿಯೋ... ಆಗ ನಿನ್ನನ್ನು ಬಿಟ್ಟು ಹೊರಟು ಹೋಗುತ್ತೇನೆ ಎಂದಳು. ಅದಕ್ಕೆ ವಿಶ್ವಮಿತ್ರನು ಅಂಗೀಕರಿಸಿದನು. ಇಬ್ಬರೂ ವಿವಾಹ ಮಾಡಿಕೊಂಡರು. ಸಂಸಾರ ಮಾಡುತ್ತಿದ್ದರು. ಆದರೆ ಮೇನಕೆ ವಿಚಿತ್ರವಾದ ಕೋರಿಕೆಗಳನ್ನು ಕೋರುತ್ತಿದ್ದಳು. ಮಲ್ಲಿಗೆ ಹೂಗಳು ಇಲ್ಲದ ಕಾಲದಲ್ಲಿ ಮಲ್ಲಿಗೆ ಹೂಗಳನ್ನು ಕೋರುತ್ತಿದ್ದಳು. ಮಾವಿನ ಹಣ್ಣುಗಳು ಇಲ್ಲದ ಕಾಲದಲ್ಲಿ ಮಾವಿನ ಹಣ್ಣುಗಳನ್ನು ಕೋರುತ್ತಿದ್ದಳು. ಆಕೆಯ ಮಾತುಗಳನ್ನು ನಿರಾಕರಿಸಲಾರದ ವಿಶ್ವಾಮಿತ್ರನು ಆಕೆಯ ಕೋರಿಕೆಯನ್ನು ತೀರಿಸಲು ತಾನು ಸಂಪಾದಿಸಿದ ಶಕ್ತಿಯನ್ನು ಸ್ವಲ್ಪ ಖರ್ಚು ಮಾಡಿ ಮಲ್ಲಿಗೆ ಹೂಗಳನ್ನು ಸೃಷ್ಟಿಸುತ್ತಿದ್ದನು, ಮಾವಿನ ಹಣ್ಣುಗಳನ್ನು ಸೃಷ್ಟಿಸುತ್ತಿದ್ದನು, ಒಮ್ಮೊಮ್ಮೆ ನಿನ್ನೊಂದಿಗೆ ಒಟ್ಟಾಗಿ ಆಕಾಶದಲ್ಲಿ ವಿಹಾರ ಮಾಡಬೇಕೆಂದು ಅನಿಸುತ್ತಿದೆ ಎಂದು ಹೇಳುತ್ತಿದ್ದಳು ಅದೇ ರೀತಿ ಇನ್ನು ಸ್ವಲ್ಪ ಶಕ್ತಿಯನ್ನು ಖರ್ಚು ಮಾಡಿ ಆಕೆಯ ಕೋರಿಕೆಗಳನ್ನು ಈಡೇರಿಸುತ್ತಿದ್ದನು. ಹೀಗೆ ವಿವಿದ ರೀತಿಯ ವಿಚಿತ್ರವಾದ ಕೋರಿಕೆಗಳನ್ನು ಮೇನಕೆ ಕೋರುತ್ತಿದ್ದಳು. ಆಕೆಯ ಕೋರಿಕೆಗಳನ್ನು ಈಡೇರಿಸುತ್ತೇನೆ ಎಂದು ಮಾತು ಕೊಟ್ಟ

ವಿಶ್ವಾಮಿತ್ರನು ತನ್ನ ಶಕ್ತಿಯನ್ನು ಖರ್ಚು ಮಾಡುತ್ತಾ ಆಕೆಯ ಕೋರಿಕೆಗಳನ್ನು ಈಡೇರಿಸುತ್ತಿದ್ದನು.

ಹಾಗೆ ಇರುತ್ತಿರುವಾಗ ಮತ್ತೊಂದು ಸಾರಿ ಆಕಾಶವಿಹಾರ ಮಾಡೋಣವೆಂದು ಮೇನಕೆ ಕೇಳಿದಳು. ಆಗ ವಿಶ್ವಾಮಿತ್ರನು ಸರಿ ಎಂದು ಕೈಗಳನ್ನು ಮೇಲಕ್ಕೆತ್ತಿ... ಮೇಲೆ ಹೋಗೋಣವೆಂದುಕೊಂಡನು. ಆದರೆ ಈ ಬಾರಿ ಮೇಲೇಳಲಾರದೇ ಹೋದನು. ಎಷ್ಟು ಪ್ರಯತ್ನಿಸಿದರೂ ಅಲುಗಾಡಲು ಸಾಧ್ಯವಾಗಲಿಲ್ಲ. ಆಗ ವಿಶ್ವಾಮಿತ್ರನಿಗೆ ಅರ್ಥವಾಯಿತು. ತಾನು ತಪಸ್ಸು ಅಂದರೆ ಧ್ಯಾನದ ಮೂಲಕ ಸಂಪಾದಿಸಿದ ಶಕ್ತಿಯೆಲ್ಲಾ ಖರ್ಚಾಯಿತು ಎಂದು ತಿಳಿದುಕೊಂಡನು. ಆಗ ಮೇನಕೆಗೆ ನನ್ನ ಶಕ್ತಿಯೆಲ್ಲ ಖರ್ಚಾಗಿ ಹೋಗಿದೆ. ನಾನು ಮೇಲೆ ಹೇಳಲಾರದೇ ಹೋಗುತ್ತಿದ್ದೇನೆ ಎಂದನು. ಆಗ ಮೇನಕೆ ತಾನು ಇಟ್ಟ ಷರತ್ತನ್ನು ನೆನಪು ಮಾಡಿ ವಿಶ್ವಾಮಿತ್ರನನ್ನು ಬಿಟ್ಟು ಆಕೆ ಸ್ವರ್ಗಕ್ಕೆ ಹೊರಟು ಹೋದಳು. ಆಗ ವಿಶ್ವಾಮಿತ್ರನು ಬಹಳಷ್ಟು ನೊಂದುಕೊಂಡನು. ತಾನು ಬಹಳಷ್ಟು ಕಷ್ಟಪಟ್ಟು ಸಾವಿರ ವರ್ಷಗಳು ಮಾಡಿದ ತಪಶಕ್ತಿಯೆಲ್ಲಾ ಖರ್ಚಾಗಿ ಹೋಯಿತೇ! ಕಾಮಕೋಸ್ಕರ ಅಂದರೆ ಮೇನಕೆಯ ಕೋರಿಕೆಗಳನ್ನು ಈಡೇರಿಸುವುದಕ್ಕೋಸ್ಕರ ಎಷ್ಟು ಶಕ್ತಿಯನ್ನು ನಾನು ಕಳೆದುಕೊಂಡೆನು ಎಂದು ನೊಂದುಕೊಂಡು ಪುನಹ ತಪಸ್ಸನ್ನು ಪ್ರಾರಂಭಿಸಿದನು. ಪುನಹ ಸಾವಿರ ವರ್ಷಗಳು ತಪಸ್ಸು ಮಾಡಿದನು. ಮತ್ತೇ ಅಪಾರವಾದ ಶಕ್ತಿಯನ್ನು ಸಂಪಾದಿಸಿದನು.

ಈ ಬಾರಿ ಇಂದ್ರನು ರಂಭೆಯನ್ನು ಕಳಿಸಿದನು. ರಂಬೆಯನ್ನು ನೋಡಿದ ತಕ್ಷಣವೇ ವಿಶ್ವಾಮಿತ್ರನಿಗೆ ಅಪಾರವಾದ ಕೋಪ ಬಂತು. ಇಂದ್ರನು ನನ್ನನ್ನು ಬುದ್ಧಿ ಇಲ್ಲದವನು ಎಂದುಕೊಂಡಿದ್ದಾನೆ. ಅವನಿಗೆ ಸರಿಯಾಗಿ ಬುದ್ಧಿ ಕಲಿಸುತ್ತೇನೆ ಎಂದು ಆಗ್ರಹಿಸಿ ರಂಬೆಯನ್ನು ಶಿಲೆಯಾಗುವಂತೆ ಶಪಿಸಿದನು.

ಆದರೆ ಹಾಗೆ ಶಪಿಸಿದ್ದರಿಂದ ಪುನಃ ಶಕ್ತಿಯನ್ನೆಲ್ಲಾ ಕಳೆದುಕೊಂಡನು. ಪುನಹ ಸಾಧಾರಣ ಮನುಷ್ಯನಾದನು. ಮತ್ತೇ ಬಹಳಷ್ಟು ನೊಂದುಕೊಂಡನು. ಏನೂ ಮಾಡಲಾರದೇ ಪುನಹ ಛಲದಿಂದ ತಪಸ್ಸು ಮಾಡಿ ಅಪಾರವಾದ ಶಕ್ತಿಯನ್ನು ಸಂಪಾದಿಸಿದನು. ಹೀಗೆ ನಾಲ್ಕು ಬಾರಿ ಶಕ್ತಿಯನ್ನು ಸಂಪಾದಿಸಿ ಶಕ್ತಿಯನ್ನು ಕಳೆದುಕೊಂಡನು. ಅಂತಿಮವಾಗಿ ಕೊನೆಯ ಬಾರಿ ಶಕ್ತಿಯನ್ನು ಸಂಪಾದಿಸಿಕೊಂಡು ಎಲ್ಲಾ ಪರೀಕ್ಷೆಗಳನ್ನು ಜಯಿಸಿ ಬ್ರಹ್ಮರ್ಷಿಯಾದನು. ಬಹಳ ಶ್ರೇಷ್ಠ ವ್ಯಕ್ತಿಯಾದನು.

ಹೀಗೆ ವಿಶ್ವಾಮಿತ್ರನ ಜೀವನವನ್ನು ನಾವು ತೆಗೆದುಕೊಂಡರೆ ಆತ ತಪಸ್ಸಿನ ಮೂಲಕ

ಅಂದರೆ ಧ್ಯಾನದ ಮೂಲಕ ಸಂಪಾದಿಸಿದ ಶಕ್ತಿಯನ್ನು ಕೋರಿಕೆಗಳಿಗೋಸ್ಕರ ಖರ್ಚು ಮಾಡುವುದು ಪುನಹ ಸಾಧನೆ ಮಾಡಿದ್ದನ್ನು ನಾವು ಗಮನಿಸಬಹುದು. ಆದ್ದರಿಂದ ಯಾರಾದರೂ ಸರಿ ಧ್ಯಾನ ಮಾಡಿ ಸಂಪಾದಿಸಿದ ಶಕ್ತಿಯನ್ನು ಕೋರಿಕೆಗಳಿಗೆ ಉಪಯೋಗಿಸಿಕೊಂಡರೆ ಅಂದರೆ ಸಂಕಲ್ಪಗಳನ್ನು ಇಟ್ಟುಕೊಂಡರೆ ಕಳೆದುಕೊಳ್ಳುತ್ತಾರೆಂದು ತಿಳಿದುಕೊಳ್ಳಬೇಕು. ಆದ್ದರಿಂದ ಸಂಕಲ್ಪ ಇಟ್ಟುಕೊಂಡು ಧ್ಯಾನ ಮಾಡುವವರು ತಾವು ಸಂಪಾದಿಸಿದ ಶಕ್ತಿಯನ್ನು ಕಳೆದುಕೊಳ್ಳುತ್ತಾರೆಂದು ತಿಳಿಯಬೇಕು. ಅಂದರೆ ಅವರು ಪುನಃ ಮೊದಲಿಗೆ ಬರುತ್ತಾರೆಂದು ತಿಳಿಯಬೇಕು. ಅವರು ಎಷ್ಟು ವರ್ಷಗಳು ಧ್ಯಾನ ಮಾಡಿದರೂ! ಎಷ್ಟು ಕಡಿಮೆ ಧ್ಯಾನ ಮಾಡಿದರು, ಪುನಃ ಸಾಧಾರಣಾ ಸ್ಥಿತಿಯಲ್ಲಿಯೇ ಇರುತ್ತಾರೆ. ಸಾಮಾನ್ಯರಂತೆ ಜೀವಿಸುತ್ತಾರೆ. ಶಕ್ತಿ ಇಲ್ಲದವರಂತೆ ಪ್ರವರ್ತಿಸುತ್ತಾರೆ.

ಆದ್ದರಿಂದ ಶಕ್ತಿಯನ್ನು ಕಳೆದುಕೊಳ್ಳಬಾರದೆಂದು ತಿಳಿಯಬೇಕು. ಅಷ್ಟೇಅಲ್ಲ ಶಕ್ತಿ ಹೆಚ್ಚುತ್ತಾ ಹೋದಂತೆ ಜೀವನದಲ್ಲಿ ಬರುವ ಲಾಭಗಳನ್ನು ತಿಳಿದುಕೊಳ್ಳಬೇಕು. ಕಷ್ಟಪಟ್ಟು ಮಾಡುವ ಧ್ಯಾನ ಸಾಧನೆ, ಸಂಪಾದಿಸಿದ ಶಕ್ತಿಯನ್ನು ಚಿಕ್ಕ ಚಿಕ್ಕ ಕೋರಿಕೆಗಳಿಗೋಸ್ಕರ ವ್ಯರ್ಥ ಮಾಡಿಕೊಳ್ಳಬಾರದು, ನಷ್ಟ ಹೊಂದಬಾರದು. ಧ್ಯಾನ ಶಕ್ತಿಯ ಬೆಲೆ, ಶ್ರೇಷ್ಠತೆಯನ್ನು ತಿಳಿದುಕೊಳ್ಳಬೇಕು. ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಕಾರಣ ಪ್ರಪಂಚಕ ಜೀವನದಲ್ಲಿ ಮಾನವನಿಗೆ ಎಷ್ಟೋ ಸಮಸ್ಯೆಗಳು ಇರುತ್ತವೆ. ಒಂದು ವೇಳೆ ಶಕ್ತಿಯನ್ನು ಖರ್ಚು ಮಾಡಿ ಯಾವುದೋ ಒಂದು ಸಮಸ್ಯೆಯನ್ನು ಪರಿಹಾರ ಮಾಡಿಕೊಂಡರೂ ಪುನಃ ಮತ್ತೊಂದು ಸಮಸ್ಯೆ ಬರುತ್ತದೆ. ಮಾನವನ ಜೀವನದಲ್ಲಿ ಸಮಸ್ಯೆಗಳಿಗೆ ಕೊನೆಯಿಲ್ಲ. ಆದ್ದರಿಂದ ಶಕ್ತಿಯನ್ನು ಕಳೆದುಕೊಳ್ಳದಂತೆ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು. ಅಂದರೆ ಸಂಕಲ್ಪವಿಲ್ಲದಂತೆ ಧ್ಯಾನ ಮಾಡಬೇಕು. ಆಗ ಸಮಸ್ಯೆಗಳು ಪರಿಹಾರವಾಗುತ್ತವೆ... ಶಕ್ತಿಯನ್ನು ಕಳೆದುಕೊಳ್ಳುವುದಿಲ್ಲ. ಆದ್ದರಿಂದ ಧ್ಯಾನ ಮಾಡಿ. ಫಲಿತಾಂಶವನ್ನು ಪ್ರಕೃತಿಗೆ ಬಿಟ್ಟುಬಿಡಿ. ಎಲ್ಲಾ ಲಾಭವೇ ಆಗುತ್ತದೆ.

ಅಷ್ಟೇ ಅಲ್ಲ ವಾಸ್ತವವಾಗಿ ಕಷ್ಟಗಳು ಏಕೆ ಬರುತ್ತಿವೆ ಎಂದು ತಿಳಿದುಕೊಳ್ಳಿ. ಕಷ್ಟಗಳು ಬರುವುದಕ್ಕೆ ಕಾರಣ ನಾವು ಮಾಡುವ ಪಾಪ ಕರ್ಮಗಳು ಅಂದರೆ ಜೀವಹಿಂಸೆ, ಅಧರ್ಮದ ಪ್ರವರ್ತನೆ. ಆದ್ದರಿಂದ ಜೀವ ಹಿಂಸೆ ಮಾಡಬೇಡಿ ಅಂದರೆ ಮಾಂಸ ತಿನ್ನಬೇಡಿ, ಧರ್ಮವೆಂದರೆ ಏನೆಂದು ತಿಳಿದುಕೊಂಡು ಧರ್ಮದಿಂದ ಜೀವಿಸಿ. ಜೀವನದಲ್ಲಿ ಸಮಸ್ಯೆಗಳೇ ಬರುವುದಿಲ್ಲ. ಆನಂದವಾಗಿ ಜೀವಿಸುವಿರಿ. ವಿಶೇಷವಾಗಿ ಧ್ಯಾನ ಮಾಡಿ. ಜೀವನವೇ ಇಲ್ಲದ ಮೋಕ್ಷವನ್ನು ಹೊಂದುವಿರಿ.

ಕೆಲವರು ಕೇಳುತ್ತಿರುತ್ತಾರೆ. ಹಾಗಾದರೆ ನಾನು ಎಂತಹ ಸಂಕಲ್ಪಗಳನ್ನು ಇಟ್ಟುಕೊಳ್ಳ

ಬೇಕು? ಅವರಿಗೆ ಮಾಸ್ಟರ್ ಸಲಹೆಗಳನ್ನು ಕೊಡುತ್ತಿರುತ್ತಾರೆ. ಸತ್ಸಂಕಲ್ಪಗಳನ್ನು ಇಟ್ಟುಕೊಳ್ಳಬೇಕು. ಅಂದರೆ ಲೋಕಕಲ್ಯಾಣಕರವಾದಂತಹವನ್ನೇ ಸಂಕಲ್ಪ ಮಾಡಿಕೊಳ್ಳಬೇಕು. ಅಂತಹ ಸಂಕಲ್ಪಗಳನ್ನು ಇಟ್ಟುಕೊಂಡರೆ ಅವು ನೆರವೇರುತ್ತವೆ ಎಂದು ಕೆಲವರು... ನಿಮ್ಮ ಶಕ್ತಿ ಹೆಚ್ಚುತ್ತದೆ ಎಂದು ಕೆಲವರು ಮಾಸ್ಟರ್ಸ್ ಸಲಹೆಗಳನ್ನು ನೀಡುತ್ತಿರುತ್ತಾರೆ. ಇವುಗಳ ಬಗ್ಗೆ ಸಹ ತಿಳಿದುಕೊಳ್ಳೋಣ.

ನೆನಪಿನಲ್ಲಿಡಿ ಲೋಕಕಲ್ಯಾಣ ಕರವಾದ ಸಂಕಲ್ಪಗಳು ಎಂದರೆ ಸತ್ಸಂಕಲ್ಪಗಳನ್ನು ಇಟ್ಟುಕೊಂಡರೆ ಅಂದುಕೊಂಡದ್ದು ಆಗುವುದಿಲ್ಲ. ನಿಮ್ಮ ಶಕ್ತಿ ಹೆಚ್ಚುವುದಿಲ್ಲ. ಇಲ್ಲಿ ಏನು ನಡೆಯುತ್ತದೆ ಎಂದರೆ ಒಳ್ಳೆಯ ಸಂಕಲ್ಪಗಳು ಇರುವವರು ಲೋಕಕಲ್ಯಾಣಕರವಾದ ಕೆಲಸಗಳನ್ನು, ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ, ಅಂದರೆ ಅವರು ಮಾಡುವ ಪ್ರಯತ್ನ ಲೋಕಕಲ್ಯಾಣ ಕರವಾಗಿ ಇರುತ್ತದೆ. ಎಲ್ಲರಿಗೂ ಲಾಭವನ್ನು ಉಂಟು ಮಾಡುವ ವಿಧದಲ್ಲಿ ಇರುತ್ತದೆ. ಅಂತಹ ಪ್ರಯತ್ನಕ್ಕೆ ಸಹಜವಾಗಿಯೇ ಪ್ರಕೃತಿ ಸಹಕರಿಸುತ್ತದೆ. ಅಂದರೆ ಅವರು ಮಾಡುವ ಪ್ರಯತ್ನಕ್ಕೆ ಊಹಿಸದ ರೀತಿಯಲ್ಲಿ ಸಹಕಾರ ಲಭಿಸುತ್ತದೆ, ಅನುಕೂಲವಾಗುತ್ತದೆ. ಅಂತಿಮವಾಗಿ ಅವರು ಅಂದುಕೊಂಡದ್ದು ಸುಲಭವಾಗಿ ಸಾಧಿಸುತ್ತಾರೆ. ಅಂದರೆ ಸಂಕಲ್ಪ ನೆರವೇರುತ್ತದೆ. ಅಂದರೆ ಸಂಕಲ್ಪ ಸಿದ್ಧಿಯಾಯಿತು ಎನ್ನುತ್ತಾರೆ.

ಆದ್ದರಿಂದ ಮತ್ತೊಮ್ಮೆ ನೆನಪಿನಲ್ಲಿಡಿ, ಒಳ್ಳೆಯ ಕೆಲಸಗಳನ್ನು ಸಂಕಲ್ಪ ಮಾಡಿಕೊಂಡು ಪ್ರಯತ್ನ ಪ್ರಾರಂಭಿಸಿದರೆ ಅದು ಎಂತಹ ಶ್ರೇಷ್ಠ ಕೆಲಸವಾದರೂ ಸಾಧಿಸಬಲ್ಲರು. ಮಾಡಬಲ್ಲರು.

ಅಷ್ಟೇಹೊರತು ಏನೋ ನಾನು ಒಳ್ಳೆಯ ಸಂಕಲ್ಪ ಮಾಡಿಕೊಂಡಿದ್ದೇನೆ ಎಂದು ಕುಳಿತುಕೊಂಡು ಧ್ಯಾನ ಮಾಡುತ್ತಾ ಪ್ರಯತ್ನಪಡದೆ ಹೋದರೆ ಏನನ್ನೂ ಸಾಧಿಸಲು ಆಗುವುದಿಲ್ಲ. ಅಷ್ಟೇಅಲ್ಲ ಅವರ ಸಂಕಲ್ಪದಲ್ಲಿ ವಿಕಲ್ಪವಿದ್ದರೂ, ಸಂಕಲ್ಪ ಶುದ್ಧವಾಗಿ ಇಲ್ಲದಿದ್ದರೂ ಅದು ಸತ್ಸಂಕಲ್ಪವಾದರೂ ಸಿದ್ಧಿಯಾಗುವುದಿಲ್ಲ.

ಅಷ್ಟೇಅಲ್ಲ ನೀನು ಒಳ್ಳೆಯ ಸಂಕಲ್ಪ ಇಟ್ಟುಕೊಂಡ ಮಾತ್ರಕ್ಕೆ ನೀನು ಶಕ್ತಿವಂತನಾಗುವುದಿಲ್ಲ, ನಿನ್ನ ಶಕ್ತಿ ಹೆಚ್ಚುವುದಿಲ್ಲ. ಧ್ಯಾನ ಮಾಡಿದರೆ ಯಾರ ಶಕ್ತಿಯಾದರೂ ಹೆಚ್ಚುತ್ತದೆ.

ಆದ್ದರಿಂದ ಸಂಕಲ್ಪವೆಂದರೆ ಏನು? ವಿಕಲ್ಪವೆಂದರೆ ಏನು? ಸಂಕಲ್ಪ ಶುದ್ಧಿ ಎಂದರೆ ಏನು? ಸಂಕಲ್ಪ ಶಕ್ತಿ ಎಂದರೆ ಏನು? ಸಂಕಲ್ಪ ಸಿದ್ಧಿ ಹೇಗೆ ಉಂಟಾಗುತ್ತದೆ? ಎಂಬ ವಿಷಯಗಳನ್ನು ಮೊದಲು ತಿಳಿದುಕೊಳ್ಳಬೇಕು. ಬ್ರಹ್ಮರ್ಷಿ ಪತ್ರೀಜಿ ಇವೆಲ್ಲವುಗಳ ಬಗ್ಗೆ

ಹೇರಳವಾಗಿ ಸಂಕಲ್ಪ ಶಕ್ತಿ ಎಂಬ ಪುಸ್ತಕದಲ್ಲಿ ನೀಡಿದ್ದಾರೆ. ಚೆನ್ನಾಗಿ ಅಧ್ಯಯನ ಮಾಡಿ.

ಸಂಕಲ್ಪ ಎಂದರೆ?

ಸಂಕಲ್ಪದ ಬಗ್ಗೆ ಮತ್ತಷ್ಟು ವಿವರವಾಗಿ ತಿಳಿದುಕೊಳ್ಳೋಣ. ಸಂಕಲ್ಪವೆಂದರೆ ಅಂದುಕೊಂಡದ್ದನ್ನು ಸಾಧಿಸುವುದಕ್ಕೋಸ್ಕರ ಪ್ರಯತ್ನಿಸುವುದು. ಅಂದರೆ ಸಂಕಲ್ಪ ಮಾಡಿಕೊಂಡವರು, ಅವರು ಯಾವುದನ್ನು ಸಂಕಲ್ಪ ಮಾಡಿದರೆ ಅದನ್ನು ಸಾಧಿಸುವುದಕ್ಕೋಸ್ಕರ ಅಂದರೆ ಸಿದ್ಧಿಸಿಕೊಳ್ಳುವುದಕ್ಕೋಸ್ಕರ ಪ್ರಯತ್ನ ಮಾಡುತ್ತಾರೆ.

ಉದಾಹರಣೆಗೆ ಮಂಗಳಂಪಲ್ಲಿ ಬಾಲಮುರಳಿಕೃಷ್ಣ ಸಂಗೀತ ವಿದ್ವಾಂಸರಾಗಬೇಕೆಂದು ಚಿಕ್ಕ ವಯಸ್ಸಿನಲ್ಲಿಯೇ ಸಂಕಲ್ಪ ಮಾಡಿಕೊಂಡರು. ಸಂಗೀತ ಸಾಧನೆಯಲ್ಲಿ ವಿಶೇಷವಾದ ಸಾಧನೆ ಮಾಡಿದರು. ಸಂಗೀತದಲ್ಲಿ ಶ್ರೇಷ್ಠ ವಿದ್ವಾಂಸರಾದರು. ಅವರು ಸಂಗೀತ ವಿದ್ವಾಂಸ ರಾಗಬೇಕೆಂದು ಮನೆಯಲ್ಲಿ ಕುಳಿತುಕೊಂಡು ಸಂಗೀತ ಸಾಧನೆಯನ್ನು ಬಿಟ್ಟು ಧ್ಯಾನ ಮಾಡಲಿಲ್ಲ. ಅದೇ ರೀತಿ ಸಚಿನ್ ತೆಂಡೂಲ್ಕರ್ ಕ್ರಿಕೆಟ್ ಚಾಂಪಿಯನ್ ಆಗಬೇಕೆಂದು ಸಂಕಲ್ಪ ಮಾಡಿಕೊಂಡರು. ಕ್ರಿಕೆಟ್ ನಲ್ಲಿ ಚಿಕ್ಕಂದಿನಿಂದಲೂ ವಿಶೇಷವಾಗಿ ಪ್ರಾಕ್ಟೀಸ್ ಮಾಡಿದರು. ಅಂದರೆ ಪ್ರಯತ್ನ ಮಾಡಿದರು. ಕ್ರಿಕೆಟ್ ನಲ್ಲಿ ಚಾಂಪಿಯನ್ ಆದರು. ಅಷ್ಟೇ ಹೊರತು ಪ್ರಾಕ್ಟೀಸ್ ಮಾಡದಂತೆ ಚಾಂಪಿಯನ್ ಆಗಬೇಕೆಂದು ಸಂಕಲ್ಪ ಮಾಡಿಕೊಂಡು, ಮನೆಯಲ್ಲಿ ಕುಳಿತು ಧ್ಯಾನ ಮಾಡಲಿಲ್ಲ. ಆದ್ದರಿಂದ ಸಂಕಲ್ಪ ಇಟ್ಟುಕೊಂಡು ಅಂದರೆ ಕೋರಿಕೊಂಡು ಧ್ಯಾನ ಮಾಡಿದರೆ ಅಂದುಕೊಂಡದ್ದು ಆಗುವುದಿಲ್ಲ. ಧ್ಯಾನವೆಂಬುದು ನಿನ್ನ ಸಂಕಲ್ಪ ಶಕ್ತಿಯನ್ನು ಹೆಚ್ಚಿಸುತ್ತದೆ, ಅಂದರೆ ಸಂಕಲ್ಪ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕಾದರೆ ಧ್ಯಾನವೆಂಬುದು ತುಂಬಾ ಅತ್ಯಗತ್ಯ. ಹೀಗೆ ಸಂಕಲ್ಪ ಶಕ್ತಿ ಇರುವವರೇ ವಿಶೇಷವಾದ ಪ್ರಯತ್ನ ಮಾಡುತ್ತಾರೆ. ವಿಶೇಷವಾದ ಪ್ರಯತ್ನ ಮಾಡಿದವರೇ ಅಂದುಕೊಂಡದ್ದನ್ನು ಸಾಧಿಸುತ್ತಾರೆ.

ವಿಕಲ್ಪವೆಂದರೆ?

ಒಂದು ಕೆಲಸವನ್ನು ಮಾಡಬೇಕು ಎಂದು ಕೊಂಡಾಗ ತಕ್ಷಣವೇ ಎರಡು ಆಲೋಚನೆಗಳು ಬರುತ್ತವೆ. "ಆ..! ನಾನೇನು ಮಾಡುತ್ತೇನೆ? ನನ್ನಿಂದ ಆಗುತ್ತದೆ ಏನು? ಅದು ನನಗೆ ಸಾಧ್ಯವೇ? ನಾನೇನು ಮಾಡಬಲ್ಲೆನು? ನನ್ನಿಂದ ಆಗುವುದಿಲ್ಲವೇನೋ? ಎಂಬ ಆಲೋಚನೆಗಳು ಬರುತ್ತವೆ. ಅಂತಹ ಆಲೋಚನೆಗಳನ್ನು "ವಿಕಲ್ಪ" ಎನ್ನುತ್ತಾರೆ.

ನನ್ನಿಂದ ಆಗುತ್ತದೆ. "ನಾನು ಮಾಡುತ್ತೇನೆ"ಎಂಬ ಆಲೋಚನೆಗಳನ್ನೇ "ಸಂಕಲ್ಪ ಎನ್ನುತ್ತಾರೆ. "ಆ ನನ್ನಿಂದ ಆಗುತ್ತದೆಯೇನು? ಅವರು ನಾನು ಹೇಳಿದಂತೆ ಕೇಳುತ್ತಾರೆಯೇ? ನನ್ನ ಹಣೆಬರಹ ಹೇಗಿದ್ದರೆ ಹಾಗೆ ಆಗುತ್ತದೆ! ಮನುಷ್ಯ ಒಂದು ಬಗೆದರೆ ದೈವ ಇನ್ನೊಂದನ್ನು ಬಗೆಯುತ್ತದೆ ಅಲ್ಲವೇ? ಇಂತಹ ಆಲೋಚನೆಗಳನ್ನು ವಿಕಲ್ಪಗಳು ಎನ್ನುತ್ತಾರೆ.

ಒಂದು ವಿಧದಲ್ಲಿ 'ಸಂಕಲ್ಪ' ಎಂದರೆ ಪಾಜಿಟಿವ್ ಥಾಟ್! ಅಂದರೆ ಸಕಾರಾತ್ಮಕ ಆಲೋಚನೆಗಳು... ನಾನು ಮಾಡುತ್ತೇನೆ, ನಾನು ಸಾಧಿಸುತ್ತೇನೆ, ನಾನು ಮಾಡಬಲ್ಲೆನು, ಖಂಡಿತವಾಗಿ ನನ್ನಿಂದ ಆಗುತ್ತದೆ. ನಾನು ಹೋಗಬಲ್ಲೆನು, ನಾನು ಮಾತನಾಡಬಲ್ಲೆನು, ನಾನು ಹತ್ತಬಲ್ಲೆನು ಇಂತಹ ಆಲೋಚನೆಗಳು.

ಅದೇ ರೀತಿ ವಿಕಲ್ಪ ಎಂದರೆ ನೆಗೆಟಿವ್ ಥಾಟ್! ಅಂದರೆ "ನಕಾರಾತ್ಮಕ ಆಲೋಚನೆಗಳು" ನನ್ನಿಂದ ಆಗುವುದಿಲ್ಲ ಎಂಬ ಆಲೋಚನೆಗಳು.

ವಿರುದ್ಧ ಸಂಕಲ್ಪಗಳು

ನಾವು ಪರಸ್ಪರ ವಿರುದ್ಧವಾದ ಸಂಕಲ್ಪಗಳನ್ನು ಮಾಡಿದರೆ ಯಾವುದನ್ನೂ ಸಾಧಿಸಲಾರೆವು. ಅಂದರೆ ಸಂಕಲ್ಪ ನೆರವೇರುವುದಿಲ್ಲ. ನಾನು ಕ್ರಿಕೆಟ್ ಚಾಂಪಿಯನ್ ಆಗಬೇಕು. ನಾನು ಸಿನಿಮಾದಲ್ಲಿ ಹೀರೋ ಸಹ ಆಗಬೇಕು. ಈ ಎರಡೂ ಪರಸ್ಪರ ವಿರುದ್ಧವಾದ ಸಂಕಲ್ಪಗಳು ಈ ಎರಡೂ ಹೇಗೆ ಸಾಧ್ಯವಾಗುತ್ತವೆ? ನಾವು ಕ್ರಿಕೆಟ್ ಚಾಂಪಿಯನ್ ಆಗಬೇಕೆಂದುಕೊಂಡರೆ ಸಿನಿಮಾ ಹೀರೋ ಬಗ್ಗೆ ಆಲೋಚಿಸುವುದನ್ನು ಮರೆತುಬಿಡಬೇಕು. ಸಿನಿಮಾ ಹೀರೋ ಆಗಬೇಕೆಂದುಕೊಂಡರೆ ಕ್ರಿಕೆಟ್ ಚಾಂಪಿಯನ್ ಬಗ್ಗೆ ಆಲೋಚಿಸುವುದನ್ನು ಮರೆತು ಬಿಡಬೇಕು. ಇವೆರಡೂ ಪರಸ್ಪರ ವಿರುದ್ಧ.

ಆದ್ದರಿಂದ ಯಾವುದೋ ಒಂದನ್ನು ಸಂಕಲ್ಪ ಮಾಡಿಕೊಳ್ಳಬೇಕು. ಅದರ ಬಗ್ಗೆಯೇ ಪ್ರಯತ್ನ ಪಡಬೇಕು. ಅದನ್ನೇ ಸಾಧಿಸಬೇಕು. ಅಷ್ಟೇ ಹೊರತು ವಾಸ್ತವವಾಗಿ ಏನೂ ಮಾಡದಂತೆ ಮನೆಯಲ್ಲಿ ಕುಳಿತು ಧ್ಯಾನ ಮಾಡಿದರೆ ಎರಡೂ ಬರುವುದಿಲ್ಲ. ಏಕೆಂದರೆ ಧ್ಯಾನ ಮಾಡಿದವನು ಬುದ್ಧನಾಗುತ್ತಾನೆ. ಅದು ಸಹ ವಿಶೇಷವಾಗಿ ಧ್ಯಾನದಲ್ಲಿ ಬುದ್ಧನಂತೆ ಪ್ರಯತ್ನ ಮಾಡಿದರೇನೇ!

ಆದ್ದರಿಂದ ಜೀವನದಲ್ಲಿ ಪರಸ್ಪರ ವಿರುದ್ಧವಾದ ಸಂಕಲ್ಪಗಳು ಇರಬಾರದು. ಏಕೆಂದರೆ ಪರಸ್ಪರ ವಿರುದ್ಧವಾದ ಸಂಕಲ್ಪಗಳು ನಮ್ಮ ಮನಸ್ಸಿನಲ್ಲಿದ್ದರೆ ನಾವು ಏನೂ ಮಾಡಲಾರೆವು... ಯಾವುದನ್ನೂ ಸಾಧಿಸಲಾರೆವು. ಇಲ್ಲಿರುವ ಚಾಪೆ ಅಲ್ಲೇ ಇರುವಂತೆ

ಇರುತ್ತದೆ ಜೀವನ! "ಈ ನನ್ನ ಜೀವನ ಕ್ರಿಕೆಟ್ ಚಾಂಪಿಯನ್ ಆಗುವುದಕ್ಕಾಗಿಯೇ" "ಈ ನನ್ನ ಜೀವನ ಸಿನಿಮಾ ಹೀರೋ ಆಗುವುದಕ್ಕಾಗಿಯೇ" "ಈ ನನ್ನ ಜೀವನ ಹಣ ಸಂಪಾದನೆಗಾಗಿಯೇ" "ಈ ನನ್ನ ಜೀವನ ಎಂ. ಎಲ್. ಎ. ಆಗುವುದಕ್ಕಾಗಿಯೇ" "ಈ ನನ್ನ ಜೀವನ ಕಲೆಕ್ಟರ್ ಆಗುವುದಕ್ಕಾಗಿಯೇ" ಎಂದು ಯಾವುದೋ ಒಂದನ್ನು ಧ್ಯೇಯವಾಗಿ ಇಟ್ಟುಕೊಳ್ಳಬೇಕು. ಆಗ ಅದು ಆಗುತ್ತದೆ. ಅಷ್ಟೇಹೊರತು ಎರಡು ಮೂರು ಗುರಿಗಳನ್ನು ಇಟ್ಟುಕೊಂಡರೆ ಅದೆಲ್ಲಾ ಗೊಂದಲಮಯವಾಗಿ ಯಾವುದನ್ನೂ ಸಾಧಿಸಲಾರೆವು.

ಆದ್ದರಿಂದ ಪರಸ್ಪರ ವಿರುದ್ಧವಾದ ಸಂಕಲ್ಪಗಳು ಇರಬಾರದೆಂದು ತಿಳಿದುಕೊಳ್ಳಬೇಕು.

ಸಂಕಲ್ಪ ಶುದ್ಧಿ

ಪ್ರತಿ ಮನುಷ್ಯ ತನ್ನ ಗುರಿಗಳನ್ನು ನೆರವೇರಿಸಿಕೊಳ್ಳಬೇಕಾದರೆ ಮುಖ್ಯವಾಗಿ "ಏಕ ಸಂಕಲ್ಪ"ಅದರೊಂದಿಗೆ "ಸಂಕಲ್ಪ ಶುದ್ಧಿ" ಸಹ ಅವಶ್ಯಕವೇ!

ಬತ್ತದ ಪೈರಿನೊಂದಿಗೆ ಕಳೆ ಸಸಿಗಳು ಇಲ್ಲದೇ ಹೋದರೆ ಅದು ಶುದ್ಧವಾದ ಬೆಳೆ ಆಗುತ್ತದೆ. ಅದೇರೀತಿ ಸಂಕಲ್ಪಗಳಲ್ಲಿ ವಿಕಲ್ಪ ಇಲ್ಲದೇ ಹೋದರೆ ಅದನ್ನು "ಶುದ್ಧ ಸಂಕಲ್ಪ" ಎನ್ನುತ್ತಾರೆ ವಿಕಲ್ಪ ಇದ್ದರೆ ಸಂಕಲ್ಪ ಅಶುದ್ಧವಾಗುತ್ತದೆ.

ಅಂತಹವರು ಸಹ ಅಂದುಕೊಂಡದ್ದನ್ನು ಸಾಧಿಸಲಾರರು. ಆದ್ದರಿಂದ ವಿಕಲ್ಪವಿಲ್ಲದ "ಶುದ್ಧ ಸಂಕಲ್ಪ"ದಿಂದ ಮಾತ್ರವೇ, ಜೀವನದಲ್ಲಿ ಅಂದುಕೊಂಡದ್ದನ್ನು ಸಾಧಿಸಬಲ್ಲರು. ಇದುವೇ ಸೇತ್ ಮಹಾಶಯ ನೀಡಿದ ಸಂದೇಶ.

ಸಂಕಲ್ಪ ಶಕ್ತಿ

ಎಲ್ಲಿ ಒಂದು ಸಂಕಲ್ಪಕ್ಕೆ ಎರಡು–ಮೂರು ವಿಕಲ್ಪಗಳು ಜೊತೆಯಾಗುತ್ತವೆಯೋ... ಅಲ್ಲಿ... ಆ ಸಂಕಲ್ಪಕ್ಕೆ ಶಕ್ತಿ ಇರುವುದಿಲ್ಲ. ಆ ಸಂಕಲ್ಪ ನಿರ್ವೀರ್ಯವಾಗಿ ಇರುತ್ತದೆ. ಆದ್ದರಿಂದ ಸಂಕಲ್ಪಕ್ಕೆ ಶಕ್ತಿ ಬೇಕೆಂದರೆ "ಸಂಕಲ್ಪ ಶುದ್ಧಿ" ಇರಬೇಕು. ಅಂದರೆ ವಿಕಲ್ಪ ಇರಬಾರದು. ಮಾಡುವ ಪ್ರಯತ್ನ ಒಂದೇ ರೀತಿಯಲ್ಲಿ ಇರಬೇಕು.

ಆದ್ದರಿಂದ ಪ್ರತಿಯೊಬ್ಬರೂ ಈ ಜೀವನದಲ್ಲಿ ಏನು ಮಾಡಬೇಕು? ಎಂಬುದನ್ನು ನಿರ್ಧರಿಸಿಕೊಳ್ಳಬೇಕು. ಅಟಲ್ ಬಿಹಾರಿ ವಾಜಪೇಯಿಯವರು ಪ್ರೈಮ್ ಮಿನಿಸ್ಟರ್ ಆಗಬೇಕೆಂದು, ಎಸ್. ಪಿ. ಬಾಲಸುಬ್ರಮಣ್ಯಂ ರವರು ಒಳ್ಳೆಯ ಸಂಗೀತ ವಿದ್ವಾಂಸರಾಗಬೇಕೆಂದು, ತೆಂಡೂಲ್ಕರ್ ರವರು ಕ್ರಿಕೆಟ್ ಚಾಂಪಿಯನ್ ಆಗಬೇಕೆಂದು....

ಯಾವುದೋ ಒಂದರ ಮೇಲೆ ಸಂಪೂರ್ಣ ಶ್ರದ್ಧೆ, ಏಕಾಗ್ರತೆಯನ್ನು ಕೇಂದ್ರೀಕರಿಸಿದರು. ಉಳಿದವುಗಳನ್ನೆಲ್ಲ ಪಕ್ಕಕ್ಕೆ ಇಟ್ಟರು. ಅಂದುಕೊಂಡದ್ದನ್ನು ಸಾಧಿಸಿದರು.

ಏಕೆಂದರೆ ಮಾವಿನ ಸಸಿಯನ್ನೇ ತೆಗೆದುಕೊಳ್ಳೋಣ. ಮಾವಿನ ಸಸಿ ಮಾವಿನ ಹೂಗಳನ್ನೇ ಬಿಡುತ್ತದೆ. ಮಾವಿನ ಕಾಯಿಗಳನ್ನೇ ಬಿಡುತ್ತದೆ. ಅಷ್ಟೇ ಹೊರತು ಮಾವಿನ ಸಸಿ ವಿಧವಿಧವಾದ ಹೂಗಳನ್ನು ಬಿಡುವುದಿಲ್ಲ. ವಿಧವಿಧವಾದ ಕಾಯಿಗಳನ್ನು ಕೊಡುವುದಿಲ್ಲ ಅಲ್ಲವೇ? ಆದ್ದರಿಂದ ಒಂದು ಬೀಜ, ಒಂದು ಸಸಿ ಒಂದೇ ರೀತಿಯಲ್ಲಿ ಇರುತ್ತವೆ. ಯಾವುದೋ ಒಂದು ರೀತಿಯನ್ನು ಆಯ್ದುಕೊಳ್ಳಬೇಕು. ಆ ರೀತಿಗೆ ನಮ್ಮ ಜೀವನವನ್ನು ಅರ್ಪಣೆ ಮಾಡಬೇಕು.

ಸಿತಾರ್ ನುಡಿಸಿದರೂ, ಫುಟ್ ಬಾಲ್ ಆಡಿದರೂ, ಧ್ಯಾನ ಕಲಿಸಿದರೂ, ಜೀವನಪರ್ಯಂತ ಅದನ್ನೇ ಮಾಡಬೇಕು. ಯಾವುದೋ ಒಂದಕ್ಕೆ ಮಾತ್ರ ನಾವು ಸಮರ್ಪಣೆಯಾಗಬೇಕು.

ಆದ್ದರಿಂದ ಸಂಕಲ್ಪ ಶುದ್ಧಿ ಇದ್ದರೇನೇ ಸಂಕಲ್ಪ ಶಕ್ತಿ ಬರುತ್ತದೆ. ಸಂಕಲ್ಪ ಶಕ್ತಿ ಇದ್ದರೇನೇ ಸಂಕಲ್ಪ ಸಿದ್ಧಿ ಉಂಟಾಗುತ್ತದೆ. ಅಂದರೆ ಸಂಕಲ್ಪ ಮಾಡಿದ್ದು ಸಿದ್ದಿಸುತ್ತದೆ. ಅಂದರೆ ಅಂದುಕೊಂಡಿದ್ದನ್ನು ಸಾಧಿಸುತ್ತೇವೆ.

ಯಾವುದು ಏನಾದರೂ ಮುಖ್ಯವಾಗಿ ಸಂಕಲ್ಪ ಶುದ್ದಿ ಇರಬೇಕಾದರೂ, ಅದರ ಮೂಲಕ ಸಂಕಲ್ಪ ಶಕ್ತಿ ಹೆಚ್ಚಾಗಬೇಕಾದರೂ ಯಾರಾದರೂ ಮನಸ್ಸನ್ನು ಶುದ್ಧ ಮಾಡಿಕೊಳ್ಳಬೇಕು. ಮನಸ್ಸನ್ನು ಶೂನ್ಯ ಮಾಡಿಕೊಳ್ಳಬೇಕು. ಅದಕ್ಕೆ ಏಕೈಕ ಮಾರ್ಗ "ಶ್ವಾಸದ ಮೇಲೆ ಗಮನ" ಧ್ಯಾನ. ಆದ್ದರಿಂದ ಚೆನ್ನಾಗಿ ಧ್ಯಾನ ಮಾಡಿ. ಸಂಕಲ್ಪ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ. ಅಂದುಕೊಂಡಿದ್ದಕ್ಕೋಸ್ಕರ ವಿಶೇಷವಾದ ಪ್ರಯತ್ನ ಮಾಡಿ. ಅಂದುಕೊಂಡದ್ದನ್ನು ಸಾಧಿಸಿ ಕೊಳ್ಳಿ.

ಯೋಗಿಗಳೆಲ್ಲಾ ಹೇಳಿದ್ದೂ ಧ್ಯಾನವನ್ನೇ – ಮಾಡಿದ್ದೂ ಧ್ಯಾನವನ್ನೇ

ಧ್ಯಾನವೆಂದರೆ ಶ್ವಾಸದ ಮೇಲೆ ಗಮನ.

ಅನುಬಂಧ

ಸಂಕಲ್ಪ ಶಕ್ತಿ!

ಬ್ರಹ್ಮರ್ಷಿ ಪತ್ರೀಜಿ

ಸಂಕಲ್ಪ ಶಕ್ತಿ!

ಪತ್ರೀಜಿ ಇಲ್ಲಿಯವರೆಗೂ ಎಷ್ಟೋ ಕಾನ್ಸೆಪ್ಟ್ ಗಳನ್ನು ಹೇಳಿದ್ದಾರೆ. ಎಷ್ಟು ಕ್ಯಾಸೆಟ್ಗಳನ್ನು ರೆಕಾರ್ಡಿಂಗ್ ಮಾಡಿಕೊಟ್ಟಿದ್ದಾರೆ. ಇವೆಲ್ಲವನ್ನು ಹೇಳುವುದಕ್ಕೂ, ಇವೆಲ್ಲವನ್ನು ಮಾಡುವುದಕ್ಕೂ ಒಂದು ಸಂಕಲ್ಪ.... ದೃಢವಾದ ಸಂಕಲ್ಪ.... ಈ ಸಂಕಲ್ಪದಿಂದಲೇ ಎಲ್ಲವನ್ನು ಮಾಡುತ್ತಿದ್ದಾರೆ. ಮಾಡಲು ಸಾಧ್ಯವಾಗುತ್ತಿದೆ. ಕೆಲವು ನಡೆಯುತ್ತಿಲ್ಲ. ಏತಕ್ಕಾಗಿ? ಕಾರಣವೇನು? ವಾಸ್ತವವಾಗಿ ಈ ಸಂಕಲ್ಪ ಎಂದರೇನು? ವಿಕಲ್ಪ ಎಂದರೇನು? ಈ ವಿಷಯಗಳು ತುಂಬಾ ಮುಖ್ಯವಾದವು... ನಮ್ಮ ಧ್ಯಾನಿಗಳೂ, ಯೋಗ ಮಿತ್ರರೂ ಎಲ್ಲರೂ ಕ್ರಮವಾಗಿ ತಿಳಿದುಕೊಳ್ಳಬೇಕಾದ ಮುಖ್ಯವಾದ ವಿಷಯಗಳು! ಸಂಕಲ್ಪ ಶಕ್ತಿ ಆಡಿಯೋ ಕ್ಯಾಸೆಟ್ ಗೆ ಅಕ್ಷರ ರೂಪವೇ ಈ ಪ್ರಕಟಣೆ.

ಪಿರಮಿಡ್ ಧ್ಯಾನ ಪ್ರಪಂಚಕ್ಕೆ ಈ ದಿನ ನಾವು ಮತ್ತೊಂದು ಸುಂದರವಾದ ಅಂಶವನ್ನು ತೆಗೆದುಕೊಂಡು ಅದನ್ನು ವಿವರವಾಗಿ ತಿಳಿದುಕೊಳ್ಳೋಣ!

ಮೈ ಡಿಯರ್ ಮಾಸ್ಟರ್ಸ್! ಮೈ ಡಿಯರ್ ಫ್ರೆಂಡ್ಸ್! ಅಂಡ್ ಮೈ ಡಿಯರ್ ಗಾಡ್ಸ್ ಆಫ್ ಆಂಧ್ರ ಪ್ರದೇಶ್! ಈ ದಿನ ನಾವು ಸಂಕಲ್ಪ ಶಕ್ತಿ ಎಂಬ ವಿಷಯದ ಬಗ್ಗೆ ವಿಸ್ತಾರವಾಗಿ ತಿಳಿದುಕೊಳ್ಳೋಣ.

ಈ ಒಂದು ಅಂಶ ಎಂಬುದು ಜೀವನದಲ್ಲಿ ಅತ್ಯಮೂಲ್ಯವಾದ ವಿಷಯ. ಮನುಷ್ಯ ತನ್ನ ಸಂಕಲ್ಪ ಶಕ್ತಿಯಿಂದಲೇ ಸೃಷ್ಟಿಕರ್ತನಾಗಿ ರಾರಾಜಿಸುತ್ತಿದ್ದಾನೆ. ಮನುಷ್ಯನಷ್ಟೇ ಅಲ್ಲ ಯಾವ ಪ್ರಾಣಿ ಆದರೂ ಸರಿಯೇ ತನ್ನ ಸಂಕಲ್ಪ ಶಕ್ತಿಯಿಂದಲೇ ಕರ್ತನಾಗಿ, ಸೃಷ್ಟಿಕರ್ತನಾಗಿ ರಾರಾಜಿಸುತ್ತಿದೆ.

ನಾವೆಲ್ಲಾ ಸೃಷ್ಟಿಕರ್ತರು

ಪ್ರತಿಯೊಂದು ಪ್ರಾಣಿಯು ಸಹ ಒಂದಾನೊಂದು ಸೃಷ್ಟಿಕರ್ತ! ಕ್ರಿಯೇಟರ್! ಪ್ರಸ್ತುತ ನಾನು ಈ ಪದಗಳನ್ನು ಸೃಷ್ಟಿಸುತ್ತಿದ್ದೇನೆ. ಯಾವ ವಿಧವಾಗಿ? ನನ್ನ ಗಮನವನ್ನು ಕೇಂದ್ರೀಕೃತ ಮಾಡಿ, ಏಕೀಕರಣ ಮಾಡಿ, ನಾನು ಈ ಒಂದು ಸಂಕಲ್ಪ ಶಕ್ತಿ ಎಂಬ ಅಂಶದ ಬಗ್ಗೆ ವಿಸ್ತಾರವಾಗಿ ತಿಳಿಸುವುದಕ್ಕೆ, ಈ ಒಂದು ಸೃಷ್ಟಿಯನ್ನು ಸೃಷ್ಟಿಸುವುದಕ್ಕೆ, ಪ್ರಸ್ತುತ ಸೃಷ್ಟಿಕರ್ತನಾಗಿ ವ್ಯವಹರಿಸುತ್ತಿದ್ದೇನೆ.

ಸೃಷ್ಟಿ ಎಂಬುದು ಗಮನದಿಂದ ಸೃಷ್ಟಿಸಲ್ಪಡುತ್ತದೆ. ಮತ್ತಷ್ಟು ಗಮನದಿಂದ ಮುಂದಕ್ಕೆ ತೆಗೆದುಕೊಂಡು ಹೋಗಲ್ಪಡುತ್ತದೆ. ಆ ಗಮನವೆಂಬುದನ್ನು ತೆಗೆದು ಹಾಕಿದಾಗ ಈ

ಒಂದು ಸೃಷ್ಟಿಯ ಲಯವಾಗುತ್ತದೆ. 'ಗಮನದ ಮೂಲಕ ಸೃಷ್ಟಿ! ಗಮನದ ಮೂಲಕ ಸ್ಥಿತಿ!'ಗಮನವನ್ನು ಉಪಸಂಹಾರ ಮಾಡಿದಾಗ ಅದು 'ಲಯ'!

ಗಮನಧಾರೆ! ಪ್ರತಿ ಪ್ರಾಣಿಯ ಮೂಲಭೂತ ಪ್ರಕೃತಿ ಗಮನಧಾರೆ! ಆ ಗಮನಧಾರೆ ಯಾವ ಕಡೆ ಪ್ರಸರಿಸಲ್ಪಟ್ಟರೆ ಆ ಕಡೆ ಸೃಷ್ಟಿ ಕಾರ್ಯಕ್ರಮ ನಡೆಯುತ್ತಿರುತ್ತದೆ. ಆ ಗಮನಧಾರೆ ಎಂಬುದು ಎಷ್ಟು ಹೊತ್ತು ಇದ್ದರೆ.... ಆ ಒಂದು ದೃಷ್ಟಿಕೋನದಲ್ಲಿ... ಅಷ್ಟು ಹೊತ್ತು ಅಲ್ಲಿ ಸ್ಥಿತಿ ಇರುತ್ತದೆ. ಯಾವಾಗಲಾದರೂ ಆ ಗಮನಧಾರೆ ಉಪಸಂಹಾರ ಮಾಡಲ್ಪಡುತ್ತದೆಯೋ ಅಲ್ಲಿಯವರೆಗೆ ಅಲ್ಲಿ ಸೃಷ್ಟಿಸಲ್ಪಟ್ಟ ಸೃಷ್ಟಿ ಇನ್ನು 'ಲಯ'ವಾಗುತ್ತದೆ.

ಗಮನದ ಮೂಲಕ ಸೃಷ್ಟಿ

"ಸೃಷ್ಟಿ, ಸ್ಥಿತಿ, ಲಯ!"ಮಿತ್ರರೇ, ಗಮನದ ಮೂಲಕ ಸೃಷ್ಟಿ! ಗಮನದ ಮೂಲಕ ಸ್ಥಿತಿ! ಗಮನ ಉಪಸಂಹಾರದ ಮೂಲಕ ಲಯ! ಆದ್ದರಿಂದ ಈ ದಿನ, ಈ ಒಂದು ಸಂಕಲ್ಪ ಶಕ್ತಿ... ಅಂದರೆ ಗಮನಧಾರೆಯನ್ನು ಬಲಿಷ್ಠಗೊಳಿಸುವ ವಿಧಾನ... ಬಗ್ಗೆ ವಿಸ್ತಾರವಾಗಿ ತಿಳಿದುಕೊಳ್ಳುತ್ತಿದ್ದೇವೆ!

ನಮ್ಮ ಜೀವನದಲ್ಲಿ ಪ್ರತಿಯೊಂದನ್ನೂ ನಮಗಾಗಿ ನಾವು ಸೃಷ್ಟಿಸಿಕೊಂಡು ನಮಗೆ ಇಷ್ಟಇರುವವರೆಗೆ ಅದನ್ನು ಸ್ಥಿತಿಯಲ್ಲಿ ಇಟ್ಟುಕೊಂಡು, ಪರಿಣಾಮ ಕ್ರಮದಲ್ಲಿ, ನಮಗೆ ಸಾಕಾದಾಗ (ಇಷ್ಟ ತೀರಿದಾಗ) ಅದನ್ನು ಲಯ ಮಾಡುತ್ತಿರುತ್ತೇವೆ. ನಮ್ಮ ಗಮನಧಾರೆಯನ್ನು ಉಪಸಂಹಾರ ಮಾಡಿಕೊಳ್ಳುವುದರ ಮೂಲಕ!

ಆದ್ದರಿಂದ ಈ ಒಂದು ಸೃಷ್ಟಿ, ಸ್ಥಿತಿ, ಲಯಗಳ ಹಿಂದೆ ಇರುವ ಈ ಒಂದು ತೆರೆಯ ಹಿಂದಿನ ಭಾಗವತವೇ "ಗಮನ (ಧ್ಯಾಸ) ಶಾಸ್ತ್ರ".

ಗಮನ ಶಾಸ್ತ್ರ

'ಶ್ವಾಸ ಶಾಸ್ತ್ರವೇ – ಧ್ಯಾಸ ಶಾಸ್ತ್ರ!'ಧ್ಯಾಸ ಶಾಸ್ತ್ರವೇ ಸೃಷ್ಟಿ ಶಾಸ್ತ್ರ!'

ಸಂಗೀತದ ಮೇಲೆ ಧ್ಯಾಸ ನಮಗಿದ್ದರೆ ಆ ಸಂಗೀತ ಅಲ್ಲಿ ಸೃಷ್ಟಿಯಾಗುತ್ತದೆ. ಧ್ಯಾನದ ಮೇಲೆ ಧ್ಯಾಸ ನಮಗಿದ್ದರೆ ಧ್ಯಾನ ಸೃಷ್ಟಿಸಲ್ಪಡುತ್ತದೆ. ಮನೆ ಕಟ್ಟುವುದರ ಮೇಲೆ ನಮಗೆ ಧ್ಯಾಸವಿದ್ದರೆ ಮನೆ ಸೃಷ್ಟಿಸಲ್ಪಡುತ್ತದೆ. "ಮದುವೆ ಮಾಡಿಕೊಳ್ಳಬೇಕು" ಎಂಬ ಧ್ಯಾಸ ನಮಗಿದ್ದರೆ ಅಲ್ಲಿ ಕಲ್ಯಾಣ ಸೃಷ್ಟಿಸಲ್ಪಡುತ್ತದೆ. "ಮಕ್ಕಳು ಬೇಕು" ಎಂಬ ಧ್ಯಾಸ ನಮಗಿದ್ದರೆ ಮಕ್ಕಳು ಸೃಷ್ಟಿಸಲ್ಪಡುತ್ತಾರೆ. "ಇನ್ನು ಬೇಡ" ಎಂದುಕೊಂಡಾಗ ಈ ಜೀವನಾ ನಮಗೆ ಬೇಡ ಅಂದುಕೊಂಡಾಗ, ಆ ಧ್ಯಾಸವನ್ನು ಉಪಸಂಹಾರ ಮಾಡಿದಾಗ, ರಸ್ತೆಯ ಮೇಲೆ ಹೋಗುತ್ತಿರುವಾಗ ಆಕ್ಸಿಡೆಂಟ್ ಆಗುತ್ತದೆ! ಸತ್ತು ಹೋಗುತ್ತೇವೆ! "ಯಾಕೆ

ಬಂತಪ್ಪಾ ದೇವರೇ! ಈ ಜೀವನ ಚೆನ್ನಾಗಿಲ್ಲ ನನಗೆ! "ಈ ಲೋಕದಿಂದ ಹೊರಟು ಹೋದರೆ ಚೆನ್ನಾಗಿರುತ್ತದೆ"ಎಂದು ನಮ್ಮ ಧ್ಯಾಸವನ್ನು ಬದಲಾಯಿಸಿಕೊಂಡಾಗ.... ಆಗ ಏನಾಗುತ್ತದೆ ಎಂದರೆ.... ಆಕ್ಸಿಡೆಂಟ್ಸ್ ಆಗುತ್ತವೆ.! ಇಲ್ಲದಿದ್ದರೆ ಶರೀರದಲ್ಲಿ ಯಾವುದೋ ಒಂದು ಕ್ಯಾನ್ಸರ್ ಬರುತ್ತದೆ, ಒಂದು ಲಿವರ್, ಪ್ಯಾಂಕ್ರಿಯಾಸ್... ಯಾವುದೋ ಒಂದಕ್ಕೆ... ಹಾನಿಯಾಗುತ್ತದೆ. ಅದಕ್ಕೆ ಕಾರಣ ನಮ್ಮ ಅಭ್ಯಾಸವನ್ನು ಉಪಸಂಹಾರ ಮಾಡಿಕೊಳ್ಳುವುದೇ. ಜೀವನದ ಮಾಧುರ್ಯದ ಬಗ್ಗೆ ಧ್ಯಾಸವನ್ನು ಉಪಸಂಹಾರ ಮಾಡಿಕೊಂಡಾಗ ಜೀವನ ನಿರ್ಗಮಿಸುತ್ತದೆ! ದೇಹ ಜೀವನ ನಿರ್ಗಮಿಸುತ್ತದೆ! ಯಾರಾದರೆ, ಜೀವನದ ಮಾಧುರ್ಯದ ಬಗ್ಗೆ ವಿಕಲ್ಪ ರಹಿತ ಸಂಕಲ್ಪ ಧ್ಯಾಸಧಾರೆಯನ್ನು ಇರಿಸುತ್ತಾರೋ ಅಲ್ಲಿ ಆ ಜೀವನಕ್ಕೆ..... ದೇಹದ ಜೀವನಕ್ಕೆ..... ಶರೀರದ ಜೀವನಕ್ಕೆ..... ಅಂತ್ಯವಿರುವುದಿಲ್ಲ!

ಸಂಕಲ್ಪ ಶಕ್ತಿ

ಈ ದಿನ ಈ ಒಂದು ಸಂಕಲ್ಪ ಶಕ್ತಿ ಎಂಬ ಈ ಒಂದು ಅಂಶದ ಬಗ್ಗೆ ವಿವರವಾಗಿ ತಿಳಿದುಕೊಳ್ಳುತ್ತಿದ್ದೇವೆ. ಇಂಗ್ಲೀಷ್ ಭಾಷೆಯಲ್ಲಿ ಇದನ್ನು intent ಎನ್ನುತ್ತಾರೆ. 'ಸಂಕಲ್ಪ ಶಕ್ತಿ' ಎಂದರೆ ದಿ ಪವರ್ ಆಫ್ ಇಂಟೆಂಟ್ ಎಂದು!

Power ಎಂದರೆ ಶಕ್ತಿ, ಸಂಕಲ್ಪವೆಂದರೆ intent. ದಿ ಪವರ್ ಇಂಟೆಂಟ್, ಸಂಕಲ್ಪಶಕ್ತಿ. ಏನು ನೀವು ಕಾರ್ಲೋಸ್ ಕಾಸ್ಟನೆಡಾರವರ ಪುಸ್ತಕಗಳನ್ನು ಓದಿದರೆ ಅಲ್ಲಿ ವಿಶೇಷವಾಗಿ ನೋಡುವಿರಿ. ಯಾರಾದರೇ ಇಂಗ್ಲೀಷ್ ಬಂದರೂ ಸಹ ಕಾರ್ಲೋಸ್ ಕಾಸ್ಟನೆಡಾ ಪುಸ್ತಕಗಳನ್ನು ಓದಲೇಬೇಕು. ಅಲ್ಲಿ ಈ ಇಂಟೆಂಟ್..... ದಿ ಪವರ್ ಆಫ್ ಇಂಟೆಂಟ್ – ಎಂಬುದು.... ಅದರ ಒಂದು ವಿಶ್ವರೂಪವನ್ನು ಸಂದರ್ಶಿಸುತ್ತಾರೆ. ಇದನ್ನೇ, ಪವರ್ ಆಫ್ ಇಂಟೆಂಟನ್ನೇ 'ಸಂಕಲ್ಪಶಕ್ತಿ' ಎನ್ನುತ್ತೇವೆ.

"ಒಂದು ಕೆಲಸ ಮಾಡೋಣ"ಎಂದುಕೊಂಡಾಗ ತಕ್ಷಣವೇ ಎರಡು ಆಲೋಚನೆ ಗಳು, "ಆ....! ನಾನೇನು ಮಾಡುತ್ತೇನೆ! ನನ್ನಿಂದ ಆಗುತ್ತದೆಯೇನು'? ಎಂಬ ಆಲೋಚನೆ ಗಳು ಬರುತ್ತವೆ. ಅಂತಹ ಆಲೋಚನೆಗಳನ್ನು ಏನೆನ್ನುತ್ತೇವೆ ಎಂದರೆ ವಿಕಲ್ಪ ಎನ್ನುತ್ತೇವೆ.

"ಸಂಕಲ್ಪವೆಂದರೆ ಪಾಸಿಟಿವ್ ಥಾಟ್!" "ವಿಕಲ್ಪವೆಂದರೆ ನೆಗೆಟಿವ್ ಥಾಟ್"! ಅಂದರೆ ನಕಾರಾತ್ಮಕ ಆಲೋಚನೆಗಳು! "ನನ್ನಿಂದ ಆಗುವುದಿಲ್ಲ"ಎಂಬ ಆಲೋಚನೆಗಳು!

"ನನ್ನಿಂದ ಆಗುತ್ತದೆ", "ನಾನು ಮಾಡುತ್ತೇನೆ" – ಎಂಬ ಆಲೋಚನೆಗಳನ್ನೇ ಸಂಕಲ್ಪಗಳು ಎನ್ನುತ್ತೇವೆ! "ಆ.... ನನ್ನಿಂದ ಏನಾಗುತ್ತದೆ ಬಿಡು?", ಈ ಪ್ರಪಂಚ ನಾನು ಹೇಳಿದಂತೆ ಕೇಳುತ್ತದೆಯೇ?, "ನನ್ನ ಹಣೆಬರಹ ಹೇಗಿದ್ದರೆ ಹಾಗಾಗುತ್ತದೆ!", ಮನುಷ್ಯ ತಾನೊಂದು ಬಗೆದರೆ ದೈವ ಮತ್ತೊಂದನ್ನು ಬಗೆಯುತ್ತದೆ ಅಲ್ಲವೇ!"..... ಇಂತಹ ಆಲೋಚನೆಗಳನ್ನು ವಿಕಲ್ಪಗಳು.... ಎನ್ನುತ್ತೇವೆ!

ವಿಕಲ್ಪ ಶಕ್ತಿ

ಮಾನವ ಜೀವನವನ್ನು ತನ್ನಷ್ಟಕ್ಕೆ ತಾನೇ ನರಕವನ್ನಾಗಿ ಮಾಡಿಕೊಳ್ಳುತ್ತಿದ್ದಾನೆ, ನರಕ ಸದೃಶ ಮಾಡಿಕೊಳ್ಳುತ್ತಿದ್ದಾನೆ! ತನ್ನಯ ವಿಶೇಷ ವಿಕಲ್ಪ ಶಕ್ತಿಯ ಮೂಲಕ ಸರ್ವಸ್ವವನ್ನು ನಿರ್ವೀರ್ಯ ಮಾಡಿಕೊಳ್ಳುತ್ತಿದ್ದಾನೆ. ತನ್ನ ಶರೀರವನ್ನು, ಜೀವನದಲ್ಲಿನ ಮಾಧುರ್ಯವನ್ನು.... ಎಲ್ಲವನ್ನೂ ಕಳೆದುಕೊಳ್ಳುತ್ತಿದ್ದಾನೆ! ಜೀವನದಲ್ಲಿನ ಮಕರಂದ ವನ್ನು ಕಳೆದುಕೊಳ್ಳುತ್ತಿದ್ದಾನೆ! ಜೀವನದಲ್ಲಿ ವಿಷಾದವನ್ನು ಸೃಷ್ಟಿಸಿಕೊಳ್ಳುತ್ತಿದ್ದಾನೆ! ತನ್ನ ಒಂದು ವಿಕಲ್ಪ ಶಕ್ತಿಯ ಮೂಲಕ! ನಿರ್ವೀರ್ಯ ಭಾವನೆಗಳೇ ವಿಕಲ್ಪ ತಾಂಡವ!"ಪ್ರತಿಯೊಂದಕ್ಕೂ, ಹೆಜ್ಜೆ ಹೆಜ್ಜೆಗೂ,, "ಆ ನನ್ನಿಂದ ಏನಾಗುತ್ತದೆ ಬಿಡು!" "ನನ್ನ ಮಾತುಗಳನ್ನು ಯಾರು ಕೇಳುತ್ತಾರೆ ಬಿಡು?" "ನಾನು ನೀಚನಲ್ಲವೇ!","ಅಲ್ಪನಲ್ಲವೇ!", "!ಯಾವುದಕ್ಕೂ ಕೆಲಸಕ್ಕೆ ಬಾರದವನಲ್ಲವೇ!",... ನೋಡಿದಿರಾ! ದಿ ಟ್ರಮಂಡಸ್ ಇನ್ ಫೀರಿಯಾರಿಟಿ ಕಾಂಪ್ಲೆಕ್ಸ್!

ಮೈ ಡಿಯರ್ ಫ್ರೆಂಡ್ಸ್! ಈ ಒಂದು ಮಾನವನ ಜೀವನ ಶೋಚನೀಯವಾಗಲೂ, ರೋಗಗ್ರಸ್ತವಾಗಲೂ, ದುರಂತವಾಗಲೂ ಕಾರಣ ನಮ್ಮಯ ವಿಸ್ತಾರವಾದ ವಿಕಲ್ಪ ತಾಂಡವವೇ! ನಮ್ಮ ದೌರ್ಭಾಗ್ಯವನ್ನೂ, ನಮ್ಮ ದರಿದ್ರವನ್ನೂ ನಾವೇ ಸೃಷ್ಟಿಸಿಕೊಳ್ಳುತ್ತಿದ್ದೇವೆ! ಅದಕ್ಕೆ ಸೃಷ್ಟಿಕರ್ತರು ನಾವೇ! We create our own reality... All the time... Not 'some' of the time ! All the time! In all the situations! Not in 'some' situations! ನಮ್ಮ ವಾಸ್ತವಗಳನ್ನು ನಾವೇ ಸೃಷ್ಟಿಸಿಕೊಳ್ಳುತ್ತಿದ್ದೇವೆ.... ಎಲ್ಲಾ ಸಮಯಗಳಲ್ಲಿಯೂ.... ಎಲ್ಲಾ ಪರಿಸ್ಥಿತಿಗಳಲ್ಲಿಯೂ, ನಾವು ಅನುಭವಿಸುತ್ತಿರುವುದೆಲ್ಲವೂ ನಾವು ಸೃಷ್ಟಿಸಿಕೊಂಡದ್ದೇ! ಯಾವುದು ನಾವು ನಮಗಾಗಿ ಸೃಷ್ಟಿಸಿಕೊಳ್ಳುವುದಿಲ್ಲವೋ ಅದನ್ನು ನಾವು ಅನುಭವಿಸುವುದಿಲ್ಲ! ಈ ಒಂದು ಸೃಷ್ಟಿ ಎಂದರೆ ಕ್ರಿಯೇಟಿವಿಟೀ, ಇದು ನಮ್ಮ ಗಮನದಿಂದ..... ನಮ್ಮ ಸಂಕಲ್ಪದಿಂದ ಉದ್ಭವಿಸುತ್ತದೆ!...

ಈಗ ಈ ಕ್ಷಣದಲ್ಲಿ, ನನ್ನ ಗಮನವೆಲ್ಲ ಎಲ್ಲರಿಗೂ ಗಮನದ ಬಗ್ಗೆ ಹೇಳಬೇಕೆಂದು! ಆದ್ದರಿಂದ ಹೇಳುತ್ತಿದ್ದೇನೆ. ನೋಡಿದಿರಾ! ಇದು ಈಗ ಸೃಷ್ಟಿಸಲ್ಪಡುತ್ತದೆ, ಈ ಕ್ಷಣದಲ್ಲಿ, ಈ

ಸೃಷ್ಟಿ ಕಾರ್ಯ ನಡೆಯುತ್ತದೆ! ಆ ರೀತಿಯಲ್ಲಿ ನಾನು ಅದಕ್ಕೆ ನಿರ್ಧರಿಸಿಕೊಂಡಿದ್ದೇನೆ. ಆದ್ದರಿಂದ! ಆ ನಿರ್ಧಾರವನ್ನು ನಾನು ತೆಗೆದುಕೊಂಡಿದ್ದೇನೆ.

ಈ ನಿರ್ಧಾರವನ್ನು ನಾನು ತೆಗೆದುಕೊಳ್ಳದೇ ಇದ್ದಿದ್ದರೆ ಈ ಮಾತುಗಳು ವಾಸ್ತವವಾಗಿ ರೆಕಾರ್ಡ್ ಆಗುತ್ತಿದ್ದವೇ? ಈ ರೆಕಾರ್ಡ್ ಆಗುತ್ತಿರುವ ಮಾತುಗಳನ್ನು ನೀವು ಕೇಳಲು ಸಾಧ್ಯವಿತ್ತೇ? ಯಾವುದೂ ನಡೆಯುತ್ತಿರಲಿಲ್ಲ! ಪ್ರತಿಯೊಂದು ಅಷ್ಟೇ!

ನನಗೆ ಬದನೆಕಾಯಿ ಸಾರು ಅಂದರೆ ಇಷ್ಟ. ನಾನು ಮಾರ್ಕೆಟ್ಗೆ ಹೋಗಿ ಬದನೆಕಾಯಿಗಳನ್ನು ಕೊಂಡುಕೊಳ್ಳುತ್ತೇನೆ; ಮನೆಗೆ ಬಂದು ತೊಳೆಯುತ್ತೇನೆ; ಕೊಯ್ಯುತ್ತೇನೆ; ಶುಭ್ರವಾಗಿ ತಯಾರಿಸಿಕೊಳ್ಳುತ್ತೇನೆ; ತಿನ್ನುತ್ತೇನೆ. ನಾನು ತಯಾರಿಸಿಕೊಂಡದ್ದೇ ನನಗೆ ಲಭಿಸುತ್ತದೆ. "ಪಕ್ಕದ ಮನೆಗೆ ಹೋಗಿ ತಿನ್ನಬೇಕು" ಎಂದುಕೊಳ್ಳುತ್ತೇನೆ. ಅವರ ಮನೆಗೆ ಹೋಗುತ್ತೇನೆ; ಅವರ ಮನೆಯಲ್ಲಿ ಏನಿದ್ದರೆ ಅದನ್ನು ನಾನು ತಿನ್ನುತ್ತೇನೆ. ಆದ್ದರಿಂದ, ಆ ಪಕ್ಕದ ಮನೆಗೆ ಹೋಗುವುದು ಎಂಬುದು, "ಪಕ್ಕದ ಮನೆಗೆ ಹೋಗಬೇಕು" ಎಂಬ ಆ ಒಂದು ಥಾಟ್ ಮೇಲೆ ಆಧಾರಪಟ್ಟಿರುತ್ತದೆ.

ವಿಚಿತ್ರ ಸಂಯೋಜನೆ

ಮನುಷ್ಯನ ಸಂಕಲ್ಪ ಅಥವಾ ವಿಕಲ್ಪ.... ಇವೆರಡರ ವಿಚಿತ್ರ ಸಂಯೋಜನೆ! ವಿಚಿತ್ರ ಸಮ್ಮೇಳನ! ಒಂದು ಹೆಜ್ಜೆ ಮುಂದಕ್ಕೆ, ಎರಡು ಹೆಜ್ಜೆ ಹಿಂದಕ್ಕೆ ಇಡುವಂತೆ.... ಒಂದು ಸಂಕಲ್ಪಕ್ಕೆ ಎರಡು ವಿಕಲ್ಪಗಳು ಜೊತೆಯಾಗಿ.... ಪ್ರತಿಯೊಬ್ಬ ಮನುಷ್ಯ ಚಿನ್ನಾಭಿನ್ನವಾಗಿ, ಅಸ್ತವ್ಯಸ್ತವಾಗಿ, ಶೋಕ ಸಹಿತವಾಗಿ (ದುಃಖದಿಂದ), "ಜೀವನವೇ ಶೋಚನೀಯ"ಎಂಬ ನಿರ್ವಚನಕ್ಕೆ ತೆಗೆದುಕೊಂಡು ಬರುವಂತೆ ಮಾಡುತ್ತದೆ!

ಜೀವನ ಶೋಚನೀಯವಲ್ಲ! ಮಾನವನ ಗಮನ ಶೋಚನೀಯವಾಗಿದೆ! ಜೀವನ ಗಮನಕ್ಕೆ ದರ್ಪಣ. ನಮ್ಮ ಗಮನ ಹೇಗಿರುತ್ತದೆಯೋ, ನಮ್ಮ ಜೀವನ ಹಾಗಿರುತ್ತದೆ. ನಮ್ಮ ಗಮನ ಸರಿಯಲ್ಲದ್ದಾದರೆ ನಮ್ಮ ಜೀವನ ಸರಿಯಾದದ್ದಲ್ಲ. ನಮ್ಮ ಗಮನ ಸರಿಯಾದದ್ದೇ ಆದರೆ ನಮ್ಮ ಜೀವನ ಸರಿಯಾದದ್ದು. ಜೀವನವೆಂಬುದು ಗಮನದ ದರ್ಪಣ; ಪ್ರತಿರೂಪ! "ಎಂತಹ ಜೀವನ ನನಗಿರುತ್ತದೆ?"ಎಂದರೆ ಎಂತಹ ಗಮನ ನನ್ನೊಳಗೆ ಇದೆ?.... ನೋಡಿದಿರಾ!

ನನ್ನ ಹತ್ತಿರ ಶಕ್ತಿ ಇದೆ

ಉದಾಹರಣೆಗೆ ಅಟಲ್ ಬಿಹಾರಿ ವಾಜಪೇಯಿ ಅವರನ್ನೇ ತೆಗೆದುಕೊಳ್ಳೋಣ. 30 ವರ್ಷಗಳ ಕೆಳಗೆ, 40 ವರ್ಷಗಳ ಕೆಳಗೆ, ಅವರು ಮಾತನಾಡಿದಾಗ "ಅರೇ! ಇವರೇ

ಪ್ರೈಮ್ ಮಿನಿಸ್ಟರ್ ಆಗುತ್ತಾರೆ! ಯಾವುದೋ ಒಂದು ದಿನ ಭಾರತದೇಶಕ್ಕೆ!" ಅನಿಸಿತು. ಎಲ್ಲರಿಗೂ ಅನಿಸಿತು. ನನ್ನೊಬ್ಬನಿಗೇ ಅಲ್ಲ! ಏಕೆಂದರೆ ಅವರಿಗೂ ಸಹ, "ನಾನು ಪ್ರೈಮ್ ಮಿನಿಸ್ಟರ್ ಆಗಬೇಕು!ನನ್ನ ಹತ್ತಿರ ಅಷ್ಟು ಶಕ್ತಿ ಇದೆ! ಈ ಭಾರತ ದೇಶಕ್ಕೆ ನಾನು ಪ್ರೈಮ್ ಮಿನಿಸ್ಟರ್ ಆಗಬೇಕು!" ಅನಿಸಿತು! ಅಖಂಡವಾದ ಸಂಕಲ್ಪ ಶಕ್ತಿ ಇತ್ತು ಅವರ ಹತ್ತಿರ! ಆದರು! ಆ ದಿನಗಳಲ್ಲಿ ಅವರೊಬ್ಬರೇ ಬಿ.ಜೆ.ಪಿ.ಯ ಪರವಾಗಿ ಮೆಂಬರ್ ಆಫ್ ಪಾರ್ಲಿಮೆಂಟ್, ಹಾಗಾದರೆ ಅಂತಹ ವ್ಯಕ್ತಿ ಭಾರತ ದೇಶಕ್ಕೆ ಪ್ರೈಮ್ ಮಿನಿಸ್ಟರ್ ಆದರು ಅಲ್ಲವೇ? ಹೇಗೆ ಆದರು? ದೊಡ್ಡ ಮೇರುಪರ್ವತದಂತಹ ಕಾಂಗ್ರೆಸ್ ಪಾರ್ಟಿಗೆ ಎದುರಾಳಿಯಾಗಿ ನಿಂತರು! ಇದೇನಾದರೂ ಸಾಮಾನ್ಯವಾದ ವಿಷಯವೇ? ಎಂತಹ ಅಚಂಚಲವಾದ ಸಂಕಲ್ಪ ಶಕ್ತಿ.... ವಿಕಲ್ಪ ರಹಿತವಾದ ಸಂಕಲ್ಪ ಶಕ್ತಿ...! ಆದ್ದರಿಂದಲೇ ಪ್ರಧಾನಮಂತ್ರಿಯಾದರು ಭಾರತದೇಶಕ್ಕೆ!

ಕ್ವಿಟ್ ಇಂಡಿಯಾ

ಮೈಡಿಯರ್ ಫ್ರೆಂಡ್ಸ್! ಮೈ ಡಿಯರ್ ಮಾಸ್ಟರ್ಸ್! ಮೈ ಡಿಯರ್ ಗಾಡ್ಸ್ ಆಫ್ ಆಂಧ್ರಪ್ರದೇಶ್! ಗಾಂಧೀಜಿಯವರಿಗೆ ಎಂತಹ ಸಂಕಲ್ಪ ಶಕ್ತಿ ಇದೆ! ಹಾಗಾದರೆ ಬ್ರಿಟಿಷ್ ಸಾಮ್ರಾಜ್ಯವನ್ನು.... ಸೂರ್ಯ ಮುಳುಗದ ಆ ಒಂದು ಸಾಮ್ರಾಜ್ಯವನ್ನು.... ಮುಳುಗುವಂತೆ ಮಾಡಿದರು! ಎಂತಹ ಸಂಕಲ್ಪ ಶಕ್ತಿ! "ಕ್ವಿಟ್ ಇಂಡಿಯಾ! ಭಾರತ ದೇಶವನ್ನು ಬಿಟ್ಟು ತೊಲಗಿ!"ಅಂದರೆ ಹೊರಟು ಹೋದರು! ಖಚಿತವಾಗಿ! ಅಂದರೆ ಎಂತಹ ಅಖಂಡವಾದ ಸಂಕಲ್ಪ ಶಕ್ತಿ.... ವಿಕಲ್ಪರಹಿತವಾದ ಸಂಕಲ್ಪ ಶಕ್ತಿ....! ನೋಡಿದಿರಾ? "ನನ್ನ ಪ್ರಾಣ ಹೋಗುವಂತಾಗಲಿ! ನೀನು ಮಾತ್ರ ಹೋಗುವಂತಾಗಲಿ! ನನ್ನ ಪ್ರಾಣಕ್ಕೆ ನಾನು ಚಿಂತೆ ಮಾಡುತ್ತಿಲ್ಲ! "ನೀನು ಇಲ್ಲಿದ್ದೀಯೇ ಎಂದು ಚಿಂತಿಸುತ್ತಿದ್ದೇನೆ,"ಎಂದರು! ನೋಡಿದಿರಾ!

ಸ್ತ್ರೀ ಶಕ್ತಿ

ಮದರ್ ತೆರೇಸಾಗೆ ಎಂತಹ ಸಂಕಲ್ಪ ಶಕ್ತಿ ಇದೆಯೋ! ದೀನರ ಉದ್ಧಾರಕ್ಕಾಗಿ ಯಾವ ವಿಧವಾಗಿ ಪಣತೊಟ್ಟರು! ಒಬ್ಬ ಸ್ತ್ರೀ ಹೇಗೆ ಪಣತೊಟ್ಟರು! ಹಾಗಾದರೆ ಎಂತಹ ಸಂಕಲ್ಪ ಶಕ್ತಿ ಇದೆ!

ಮೇಡಂ ಕ್ಯೂರೀ ಆ ಒಂದು ಹೊಸ ಎಲಿಮೆಂಟ್ ರಾಸಾಯನಿಕ ದೊಳಗೆ ಒಂದು ಯುರೇನಿಯಂ ಎಂಬುದು ಇದೆ., "ಯಾವುದೋ ಒಂದು ಹೊಸದು ಇದೆ. ನಾನು ಅದನ್ನು ಬೆಳಕಿಗೆ ತರಬೇಕು"ಎಂದು ಜೀವನ ಪರ್ಯಂತ ಪ್ರಯೋಗಗಳನ್ನು ಮಾಡಿ...

ಪ್ರಾಣವನ್ನು ಪಣಕ್ಕಿಟ್ಟು... ಕಂಡುಕೊಂಡರು ಮೇಡಂ ಕ್ಯೂರೀ! ಎಂತಹ ಸಂಕಲ್ಪ ಶಕ್ತಿಯೋ!

ಕೊಲಂಬಸ್

ಕೊಲಂಬಸ್ ಒಂದು ಚಿಕ್ಕ ಹಡಗಿನ ಮೇಲೆ ಅಟ್ಲಾಂಟಿಕ್ ಮಹಾಸಮುದ್ರವನ್ನು ಲಂಘನ ಮಾಡಿದನು! ಅಮೆರಿಕಾವನ್ನು ದರ್ಶಿಸಿದನು! ಎಂತಹ ಸಂಕಲ್ಪ ಶಕ್ತಿಯೋ! ಸ್ವಲ್ಪವಾದರೂ ಒಂದು ವಿಕಲ್ಪ ಬಂದಿದ್ದರೆ 'ದಡಕ್' ಎಂದು! ಆ ಹಡಗು ಮುಳುಗಿ ಹೋಗಿರುತ್ತಿತ್ತು!

ಕೆಲವರ ಜೀವನವೇ ಅಸ್ತವ್ಯಸ್ತವಾಗಿಯೂ, ಇನ್ನು ಕೆಲವರ ಜೀವನವು ಸಫಲವಾಗಿಯೂ, ವಿಜಯವಂತವಾಗಿಯೂ ಏಕೆ ಇವೆ? ಒಬ್ಬರ ಜೀವನ ಅಶಾಂತಿಮಯವಾಗಿ, ಇನ್ನೊಬ್ಬರ ಜೀವನ ಶಾಂತಿಮಯವಾಗಿ ಏಕೆ ಇದೆ?

ಅವರವರ ಗಮನಗಳಿಗೆ ಅನುಕೂಲವಾಗಿ ಅವರವರ ಜೀವನಗಳು! ಗಮನವನ್ನು ಬದಲಾಯಿಸಿದರೆ ಜೀವನದ ದಿಕ್ಕು ಬದಲಾಗುತ್ತದೆ! ದೆಸೆ ಬದಲಾಗುತ್ತದೆ! ಗಮನದ ದಿಕ್ಕನ್ನು, ಗಮನದ ದೆಸೆಯನ್ನು ಬದಲಿಸಬೇಕು! ಗಮನದ ದೆಸೆ ಸತ್ಯವಾಗಿ ಇರಬೇಕು! ಗಮನದ ದೆಸೆ ಮತ್ತಷ್ಟು ಬಲಿಷ್ಠವಾಗಿ ಇರಬೇಕು.

ಪರಸ್ಪರ ವಿರುದ್ಧ ಸಂಕಲ್ಪಗಳು

ಯಾರಾದರೇ ಪರಸ್ಪರ ವಿರುದ್ಧವಾದ ಸಂಕಲ್ಪಗಳನ್ನು ಮಾಡುತ್ತಾರೋ... ಪುನಹಜೀವನ ಅಸ್ತವ್ಯಸ್ತವಾಗುತ್ತದೆ! "ನಾನು ಪ್ರೈಮ್ ಮಿನಿಸ್ಟರ್ ಆಗಬೇಕು", "ನಾನು ಬುದ್ಧನಂತೆ ಸಹ ಆಗಬೇಕು"... ಎರಡೂ ಪರಸ್ಪರ ವಿರುದ್ಧ. ಹೇಗೆ ಸಾಧ್ಯವಾಗುತ್ತದೆ ಎರಡೂ? ನೀನು ಪ್ರೈಮ್ ಮಿನಿಸ್ಟರ್ ಆದರೆ ಬುದ್ಧನ ಬಗ್ಗೆ ಆಲೋಚಿಸುವುದನ್ನು ಮರೆತುಬಿಡಬೇಕು. ಬುದ್ಧನಾಗಬೇಕೆಂದರೆ ಪ್ರೈಮ್ ಮಿನಿಸ್ಟರ್ ಅಂತೆ ಆಲೋಚಿಸುವುದನ್ನು ಮರೆತುಬಿಡಬೇಕು. ಎರಡೂ ಪರಸ್ಪರ ವಿರುದ್ಧ.

ಆದ್ದರಿಂದ ಜೀವನದಲ್ಲಿ ಪರಸ್ಪರ ವಿರುದ್ಧವಾದ ಸಂಕಲ್ಪಗಳು ಇರಬಾರದು! ಯಾವಾಗಲಾದರೆ ಪರಸ್ಪರ ವಿರುದ್ಧವಾದ ಸಂಕಲ್ಪಗಳು ನಮ್ಮ ಮನಸ್ಸಿನಲ್ಲಿ ಇರುತ್ತವೆಯೋ, ಏನೂ ಮಾಡಲಾರೆವು! ಜೀವನದಲ್ಲಿ ಎಲ್ಲಿರುವ ಚಾಪೆ ಅಲ್ಲಿಯೇ ಇರುತ್ತದೆ! "ಈ ನನ್ನ ಜೀವನ ಸಂಗೀತಕ್ಕಾಗಿಯೇ!" "ಈ ನನ್ನ ಜೀವನ ಪಾಲಿಟಿಕ್ಸ್‌ಗಾಗಿಯೇ"! "ಈ ನನ್ನ ಜೀವನ ಬುದ್ಧತ್ವಕ್ಕಾಗಿಯೇ"! "ಈ ನನ್ನ ಜೀವನ ಹಣ ಸಂಪಾದನೆಗಾಗಿಯೇ"! ... ಯಾವುದೋ ಒಂದನ್ನು ಧ್ಯೇಯವಾಗಿ ಇಟ್ಟುಕೊಳ್ಳಬೇಕು.

ಆಗ ಅದು ಆಗುತ್ತದೆ. ಎರಡು ಮೂರು ಇಟ್ಟುಕೊಂಡರೆ, ಎಲ್ಲವೂ ಮಿಶ್ರಣವಾಗಿ ಯಾವುದನ್ನೂ ಸಾಧಿಸುವುದಿಲ್ಲ! ಬಹಳಷ್ಟು ಜೀವನಗಳಿವೆ! ಆತುರವೇಕೆ? ಒಂದೊಂದು ಜೀವನ ಒಂದೊಂದುಕ್ಕಾಗಿ ಅರ್ಪಣೆ ಮಾಡಬೇಕು! ಇದನ್ನು 'ಸಂಕಲ್ಪ ಶುದ್ಧಿ' ಎನ್ನುತ್ತಾರೆ. ನೋಡಿದಿರಾ!

ಪ್ರತಿಯೊಬ್ಬ ಮನುಷ್ಯನಿಗೆ ಎಲ್ಲಾ ಬೇಕು! ಹೆಂಡತಿ ಬೇಕು! ಹೆಂಡತಿ ಬೇಡ! ವೈರಾಗ್ಯ ಬೇಕು! ಸಂಸಾರ ಬೇಕು! ಹೆಸರು, ಪ್ರಖ್ಯಾತಿ ಬೇಕು! ಮತ್ತೆ ದುಃಖರಹಿತ್ಯವೂ ಬೇಕು!

ಎಲ್ಲವೂ ಬರುತ್ತವೆ

ಹೆಸರು ಪ್ರಖ್ಯಾತಿಗಳು ಬೇಕೆಂದರೆ, ದುಃಖರಹಿತ್ಯ ಹೇಗೆ ಬರುತ್ತದೆ? ಆದರೆ ಎಲ್ಲಾ ಬರುತ್ತವೆ! ಅದಕ್ಕೂ ಮಾರ್ಗವಿದೆ. ಆದರೆ ಆತ ಅಖಂಡವಾದ ಧ್ಯಾನ ಯೋಗಿ ಆಗಿರಬೇಕು! ಅಖಂಡವಾದ ಜ್ಞಾನಯೋಗಿ ಆಗಿರಬೇಕು! ಆಗ ಎಲ್ಲವೂ ಸಂಕಲ್ಪಗಳೇ ಇರುತ್ತವೆ! ಆಗ ಪರಸ್ಪರ ವಿರುದ್ಧವಾದ ಸಂಕಲ್ಪಗಳೇ ಇರುವುದಿಲ್ಲ.! ಆದರೆ ಎಲ್ಲಿ ಧ್ಯಾನ, ಜ್ಞಾನ, ಆಧ್ಯಾತ್ಮಿಕತೆಗಳು ಐಕ್ಯವಾಗುತ್ತವೆಯೋ, ಐಕ್ಯವಾಗಿರುತ್ತವೆಯೋ... ಅಲ್ಲಿ ಏಕ ಸಂಕಲ್ಪ, ಏಕದೆಸೆ ಇರಬೇಕು! ಇದನ್ನೇ ಸಂಕಲ್ಪ ಶುದ್ಧಿ ಎನ್ನುತ್ತೇವೆ! ಸಂಕಲ್ಪ ಶುದ್ಧಿಯ ಮೂಲಕವೇ ಸಂಕಲ್ಪ ಸಿದ್ಧಿ"! ನೋಡಿದಿರಾ!

ಉದಾಹರಣೆಗೆ ನನ್ನ ಹೆಸರು ಸುಭಾಷ್ ಪತ್ರಿ. ನಾನು ಯಾವ ಸಂಕಲ್ಪ ಇಟ್ಟುಕೊಂಡಿದ್ದೇನೆ? ಈ ಆಂಧ್ರಪ್ರದೇಶ ಧ್ಯಾನಾಂಧ್ರ ಪ್ರದೇಶ ಆಗಬೇಕು 2004ಕ್ಕೆಲ್ಲಾ"!....ಧ್ಯಾನ ಭಾರತವಾಗಬೇಕು 2008ಕ್ಕೆಲ್ಲಾ!"...... ಧ್ಯಾನ ಜಗತ್ ಆಗಬೇಕು 2012ಕ್ಕೆಲ್ಲಾ!"

ನನಗೆ ನನ್ನ ಹೆಂಡತಿ ಏನಾದರೂ ಪರವಾಗಿಲ್ಲ. ನನ್ನ ಹೆಣ್ಣು ಮಕ್ಕಳಿಬ್ಬರೂ ಸತ್ತು ಹೋದರೂ ಪರವಾಗಿಲ್ಲ! ಈ ರೆಕಾರ್ಡಿಂಗ್ ಮಾಡುತ್ತಿರುವ ಸಂಜಯ್ ಏನಾದರೂ ಪರವಾಗಿಲ್ಲ. ನನಗೆ ಒಬ್ಬ ಸಂಜಯ್ ಹೋದರೆ ಇನ್ನು ಹತ್ತು ಜನ ಸಂಜಯ್‌ಗಳು ಬರುತ್ತಾರೆ. ಯಾರೇನಾದರೂ ಆಗಲೀ, ನನ್ನ ಒಂದು ಗುರಿಯ ಮೇಲೆಯೇ ದೃಷ್ಟಿ. ಇನ್ನೊಂದು ಯಾವುದೂ ನನಗೆ ಆಗುವುದಿಲ್ಲ! ಅಂದರೆ "ಇನ್ನೇನಾದರೂ ಪರವಾಗಿಲ್ಲ. ನನಗೆ ಇದೊಂದೇ ಬೇಕು" ಅಂದಾಗ ನೋಡಿದಿರಾ.... ಆಗುತ್ತದೆ. ಇದನ್ನೇ "ಸಂಕಲ್ಪ ಶುದ್ಧಿ" ಎನ್ನುತ್ತೇವೆ!

ಸಂಕಲ್ಪ ಶುದ್ಧಿ

ಪ್ರತಿಯೊಬ್ಬ ಮನುಷ್ಯನು ಸಹ ತನ್ನ ಗುರಿಗಳನ್ನು ನೆರವೇರಿಸಿಕೊಳ್ಳಬೇಕಾದರೆ

“ಸಂಕಲ್ಪ ಶುದ್ಧಿ” ಕಡ್ಡಾಯ. “ಜೀವನ ಒಂದೇ”ಎಂದುಕೊಂಡಾಗ ಅವನಿಗೆ ಎಲ್ಲಾ ಬೇಕು. ಹಾಗಾದರೆ ಅದರೊಂದಿಗೆ ಪರಸ್ಪರ ವಿರುದ್ಧವಾದ ಅನೇಕ ಸಂಕಲ್ಪಗಳೊಂದಿಗೆ ಯಾವುದನ್ನು ಮಾಡದಂತೆ ನಿಶ್ಚೇಷ್ಟನಾಗಿ ಇದ್ದಾನೆ ಮನುಷ್ಯ. ಆದರೆ ಆಧ್ಯಾತ್ಮಿಕತೆಯನ್ನು ಸ್ವಾಧೀನ ಪಡಿಸಿಕೊಂಡ ಮಾನವನು “ಅನೇಕ ಜನ್ಮಗಳು ಇವೆ” ಎಂದೂ, “ತಾನು ಶಾಶ್ವತವಾಗಿ ಇರುವ ಪ್ರಾಣಿ” ಎಂದೂ ತಿಳಿದುಕೊಂಡು ಇರುವ ಸಮಯದಲ್ಲಿ, ಇರುವ ಶರೀರದಲ್ಲಿ, ಏಕ ಸಂಕಲ್ಪವನ್ನು ಹೊಂದಿದ್ದು ಅಖಂಡವಾದ ಸಂಕಲ್ಪ ಶುದ್ಧಿಯಿಂದ ತನ್ನ ಸಂಕಲ್ಪವನ್ನು ವಿಜಯಪಥದ ಕಡೆಗೆ ನಡೆಸಿದರೆ.... ಆಗ ಉಳಿದ ಕೋರಿಕೆಗಳೆಲ್ಲವೂ, ಉಳಿದ ಸಂಕಲ್ಪಗಳೆಲ್ಲವೂ ತಮ್ಮಷ್ಟಕ್ಕೆ ತಾವೇ ನೆರವೇರುತ್ತವೆ.

ಮೈ ಡಿಯರ್ ಫ್ರೆಂಡ್ಸ್! ಮೈ ಡಿಯರ್ ಮಾಸ್ಟರ್ಸ್! ಮೈ ಡಿಯರ್ ಗಾಡ್ಸ್ ಆಫ್ ಆಂಧ್ರ ಪ್ರದೇಶ್! ಈ ದಿನ ನಾವು ವಿಸ್ತಾರವಾಗಿ ಸಂಕಲ್ಪ ಶಕ್ತಿ ಎಂಬ ಅಂಶದ ಬಗ್ಗೆ ತಿಳಿದುಕೊಳ್ಳುತ್ತಿದ್ದೇವೆ.

ಸಂಕಲ್ಪಗಳೆಂಬ ಫಲವತ್ತಾದ ಪೈರುಗಳಲ್ಲಿ! ವಿಕಲ್ಪಗಳು ಎಂಬ ಕಳೆಗಳು ಇಲ್ಲದಿರುವುದು...! ಎಂಬುದು ‘ಸಂಕಲ್ಪ ಶುದ್ಧಿ!’ ವಿಕಲ್ಪದೊಂದಿಗೆ ಕೂಡಿಕೊಂಡಿದ್ದರೆ ಸಂಕಲ್ಪ ಅಶುದ್ಧಿ!’ ಅಶುದ್ಧ! ಅದು ಜೀವನವನ್ನು ಅವ್ಯವಸ್ಥೆ ಮಾಡುತ್ತದೆ. ಶುದ್ಧ ಸಂಕಲ್ಪ ಜೀವನವನ್ನು ಸರಿಯಾದ ಪಥದಲ್ಲಿ, ಬಯಸಿದ ಪಥದಲ್ಲಿ ನಡೆಸುತ್ತದೆ.

ಸಂಕಲ್ಪ ಶುದ್ಧಿಯ ಮೂಲಕ ಸಂಕಲ್ಪ ಶಕ್ತಿ!

ಎಲ್ಲಿ ಒಂದು ಸಂಕಲ್ಪಕ್ಕೆ ಎರಡು ಮೂರು ವಿಕಲ್ಪಗಳು ಜೊತೆಯಾಗುತ್ತವೆಯೋ... ಅಲ್ಲಿ... ಆ ಸಂಕಲ್ಪಕ್ಕೆ ಶಕ್ತಿ ಇರುವುದಿಲ್ಲ! ಅದು ನಿರ್ವೀರ್ಯವಾಗಿ ಇರುತ್ತದೆ. ಸಂಕಲ್ಪಕ್ಕೆ ಶಕ್ತಿ ಬೇಕಾದರೆ ಸಂಕಲ್ಪ ಶುದ್ಧಿ ಇರಬೇಕು! ಅಂದರೆ ವಿಕಲ್ಪಗಳು ಇರಬಾರದು. ಜೀವನವನ್ನು ಏಕ ಪಥದಲ್ಲಿ ನಡೆಸಬೇಕು.

ಮಂಗಳಂಪಲ್ಲಿ ಬಾಲಮುರಳಿ ಕೃಷ್ಣರವರಿಗೆ ಸಂಗೀತವನ್ನು ಬಿಟ್ಟರೆ ಬೇರೇನೂ ಬೇಕಾಗಿರಲಿಲ್ಲ. ಬಿಸ್ಮಿಲ್ಲಾ ಖಾನ್‌ಗೆ, ಪಂಡಿತ್ ಜಸರಾಜ್‌ರವರಿಗೆಗೆ, ಶೆಮ್ಮಂಗುಡಿ ಶ್ರೀನಿವಾಸ್ ಅಯ್ಯರ್‌ಗೆ,.... ಇವರೆಲ್ಲರಿಗೂ ಸಂಗೀತವನ್ನು ಬಿಟ್ಟರೆ ಬೇರೆ ಯಾವುದೂ ಬೇಕಾಗಿರಲಿಲ್ಲ. ಸಂಗೀತವನ್ನು ಸಾಧಿಸಿಕೊಂಡರು. ಸಂಗೀತದ ಮೂಲಕ ಸಕಲ ಪ್ರಪಂಚವನ್ನು ಜಯಿಸಿದರು. ಸಕಲ ಪ್ರಪಂಚವು ಅವರ ಪಾದಗಳಿಗೆ ಮಂಡಿಯೂರಿ ನಮಸ್ಕಾರ ಮಾಡಿತು. ನೋಡಿದಿರಾ! ಉದಾಹರಣೆಗೆ ಟೆಂಡೂಲ್ಕರನ್ನು ತೆಗೆದುಕೊಳ್ಳೋಣ. ಅವರು ತಮ್ಮ ಧ್ಯಾಸಧಾರೆಯಿಂದ ಪ್ರಪಂಚದಲ್ಲಿ ಶ್ರೇಷ್ಠ ಕ್ರಿಕೆಟರ್

ಆದರು. ಪ್ರಪಂಚವೆಲ್ಲ ಅವರಿಗೆ ದಾಸೋಹವಾಯಿತು. ನೋಡಿದಿರಾ! ಉಳಿದ ಕೋರಿಕೆಗಳೆಲ್ಲವನ್ನು ಒಂದೇ ಒಂದು ಕೋರಿಕೆಯ ಮೂಲಕ ನೆರವೇರಿಸಿಕೊಂಡರು. ಹಣ ಬೇಕು – ಕ್ರಿಕೆಟ್ ಮೂಲಕ ಹಣ ಬಂತು. ನೋಡಿದಿರಾ! ಸಂಘದಲ್ಲಿ ಗೌರವ ಬೇಕು – ಕ್ರಿಕೆಟ್ ಮೂಲಕ ಸಂಘದಲ್ಲಿ ಗೌರವ ಬಂತು. ಅಂದರೆ ಅವರು ಕ್ರಿಕೆಟ್ ಗೆ ಮೀಸಲಾಗಿದ್ದರಿಂದ ಅವರು ಕೋರಿಕೊಂಡ ಅವರು ಬಯಸಿದ ಉಳಿದವೆಲ್ಲವೂ ಸಹ ಅವರ ಮಡಿಲೊಳಗೆ ಬಂದು ಬಿದ್ದವು ನೋಡಿದಿರಾ! ಹಣ ಬೇಕಾ, ಹೆಸರು, ಕೀರ್ತಿ ಬೇಕಾ, ಸಂಘದಲ್ಲಿ ಗೌರವ ಬೇಕಾ, ಸಂಘದಲ್ಲಿ ಗೌರವ ಬೇಕೆಂದು ಯಾರಿಗೆ ಇರುವುದಿಲ್ಲ! ಎಲ್ಲರಿಗೂ ಇರುತ್ತದೆ. ಆದರೆ ತೆಂಡೂಲ್ಕರ್ ರವರು – ಸಚಿನ್ ತೆಂಡೂಲ್ಕರ್ ರವರು ಅವೆಲ್ಲವನ್ನೂ ಪಕ್ಕಕ್ಕಿಟ್ಟು ಕ್ರಿಕೆಟ್ ಮೇಲೆ ಗಮನವನ್ನು ಇರಿಸಿದರು. ಬಾಲನ್ನು ಬ್ಯಾಟ್ ನಿಂದ ಹೊಡೆಯುವುದರ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದರು. ಅವರಿಗೆ ಬೇಕಾದದ್ದು ಅದೇ. ಪ್ರತಿಯೊಂದು ಬಾಲನ್ನು ನಾನು ಬ್ಯಾಟ್ ನಿಂದ ಹೇಗೆ ಹೊಡೆಯಬೇಕು? ವಿಕೆಟ್ ಹೋಗದಂತೆ ಹೇಗೆ ಸಂರಕ್ಷಿಸಿಕೊಳ್ಳಬೇಕು? ಎಂಬುದರ ಮೇಲೆ ಕೇಂದ್ರೀಕರಿಸಿದರು – ಅವರ ಗಮನವನ್ನು ಕೇಂದ್ರೀಕರಿಸಿದರು. ಅವರ ಧ್ಯಾಸಧಾರೆಯನ್ನು ವಿಕಲ್ಪ ರಹಿತವಾಗಿ, ಸಂಕಲ್ಪ ಸಹಿತವಾಗಿ, ಪ್ರಪಂಚದಲ್ಲಿ ಒಬ್ಬ ಶ್ರೇಷ್ಠ ಕ್ರಿಕೆಟರ್ ಆದರು. ಬ್ಯಾಟ್ಸ್ ಮೆನ್ ಆದರು. ಕ್ಯಾಪ್ಟನ್ ಆದರು. ಹಲವಾರು ಸಾವಿರ ಸೆಂಚುರಿಗಳನ್ನು ಹೊಡೆದಿದ್ದಾರೋ..... ಹಲವಾರು ಸಾವಿರ ರನ್ ಗಳನ್ನು ಹೊಡೆದಿದ್ದಾರೋ. ನೋಡಿದಿರಾ!

ಪ್ರಪಂಚವನ್ನು ಜಯಿಸಿದರು!

ಬಿಸ್ಮಿಲ್ಲಾ ಖಾನ್ ಸ್ವರಗಳ ಮೇಲೆ, ತೆಂಡೂಲ್ಕರ್.... ಕೇವಲ ಕ್ರಿಕೆಟ್ ಮೇಲೆ ಗಮನವಿಟ್ಟು ಪ್ರಪಂಚವನ್ನು ಜಯಿಸಿದರು. ಅಟಲ್ ಬಿಹಾರಿ ವಾಜಪೇಯಿ ಪಾಲಿಟಿಕ್ಸ್ ಮೇಲೆ ಗಮನವಿಟ್ಟು ಪ್ರಪಂಚವನ್ನು ಜಯಿಸಿದರು. ಯಾವುದೋ ಒಂದು ವಸ್ತುವಿನ ಮೇಲೆ ಸಂಪೂರ್ಣ ಶ್ರದ್ಧೆಯನ್ನು, ಏಕಾಗ್ರತೆಯನ್ನು, ಕೇಂದ್ರೀಕರಿಸಿದರೆ ಉಳಿದ ಎಲ್ಲವುಗಳನ್ನೂ ಪಕ್ಕಕ್ಕಿಟ್ಟು, ಆಗ ಆ ಒಂದು ಸಂಪೂರ್ಣವಾಗಿ ಫಲಿಸಿದಾಗ ಅದರ ಮೂಲಕ ಉಳಿದೆಲ್ಲವೂ ಬಂದು ಬೀಳುತ್ತವೆ. ಮೈ ಡಿಯರ್ ಫ್ರೆಂಡ್ಸ್, ಪ್ರತಿಯೊಬ್ಬ ಮನುಷ್ಯನು ಸಹ ನಿರ್ಧರಿಸಿಕೊಳ್ಳಬೇಕು; ನಾನು ಈ ಜೀವನದಲ್ಲಿ ಏನು ಮಾಡಬೇಕು?"

ಉದಾಹರಣೆಗೆ ಒಂದು ಬೇವಿನ ಮರವಿದೆ ಎಂದುಕೊಳ್ಳೋಣ! ಬೇವಿನ ಮರ ಬೇವಿನ ಹೂಗಳನ್ನೇ ಬಿಡುತ್ತದೆ, ಬೇವಿನ ಹಣ್ಣುಗಳನ್ನೇ ಬಿಡುತ್ತದೆ. ವಿಧವಿಧವಾದ ಹೂವುಗಳು, ವಿಧವಿಧವಾದ ಹಣ್ಣುಗಳು ಒಂದೇ ಮರದಲ್ಲಿ ಬಿಡುತ್ತವೆ ಏನು?

ಬರುವುದಿಲ್ಲ! ಆದ್ದರಿಂದ, ಒಂದು ಬೀಜ, ಒಂದು ಸಸ್ಯ ಒಂದೇ ರೀತಿಯಲ್ಲಿಯೇ ಇರುತ್ತವೆ! ನಮ್ಮ ಜೀವನವು ಸಹ ಒಂದೇ ರೀತಿಯಲ್ಲಿ ಇರಬೇಕು! ಯಾವುದೋ ಒಂದು ರೀತಿಯನ್ನು ಆಯ್ಕೆ ಮಾಡಿಕೊಂಡು ಆ ರೀತಿಗೆ ನಮ್ಮ ಜೀವನವನ್ನು ಸಮರ್ಪಣೆ ಮಾಡಬೇಕು! ಸಿತಾರ್ ನುಡಿಸುತ್ತೇವೆ; ಜೀವನವೆಲ್ಲಾ ಸಿತಾರೇ! ತಬಲಾ ಬಾರಿಸುತ್ತೇವೆ, ಜೀವನವೆಲ್ಲಾ ತಬಲಾನೇ! ಫುಟ್ಬಾಲ್ ಆಡುತ್ತೇವೆ; ಜೀವನವೆಲ್ಲಾ ಫುಟ್ಬಾಲೇ! ಧ್ಯಾನ ಕಲಿಸುತ್ತೇವೆ; ಜೀವನವೆಲ್ಲಾ ಧ್ಯಾನ ಕಲಿಸಬೇಕು! ಅದಕ್ಕೆ ನಾವು ಮೀಸಲು. ಪಿರಮಿಡ್ ಸ್ಪಿರಿಚುವಲ್ ಸೊಸೈಟೀಸ್ ಮಾಸ್ಟರ್ಸ್ ಧ್ಯಾನ ಮಾಡುವುದಕ್ಕಲ್ಲ, ಧ್ಯಾನ ಮಾಡಿಸುವುದಕ್ಕೆ ಮೀಸಲಾದವರು. ಅನೇಕ ಜನ್ಮಗಳಲ್ಲಿ ಧ್ಯಾನಕ್ಕೆ ಬಹಳಷ್ಟು ಮೀಸಲಾಗಿ, ಈ ಜನ್ಮದಲ್ಲಿ ಧ್ಯಾನ ಪ್ರಚಾರಕ್ಕೆ ಮೀಸಲಾಗಿ ಹುಟ್ಟಿದವರು. ಆ ಸಂಕಲ್ಪದಿಂದ ಹುಟ್ಟಿದವರು! ನೆನಪಿಟ್ಟುಕೊಳ್ಳಿ ಪ್ರತಿ ಪ್ರಾಣಿಯೂ ಸಹ, ಪ್ರತಿ ಮಾನವನೂ ಸಹ, ಹುಟ್ಟುವ ಮುಂಚೆ ಅಖಂಡವಾದ ಸಂಕಲ್ಪ ಶುದ್ಧಿ ಇರುತ್ತದೆ. ಇಲ್ಲಿಗೆ ಬಂದ ನಂತರ ಪುನಃ ಎಲ್ಲಾ ಮುಗಿದು ಹೋಗುತ್ತದೆ. ಹುಟ್ಟುವುದಕ್ಕೆ ಮುಂಚೆ ಎಲ್ಲರಿಗೂ ಪ್ರತಿಶತ ನೂರಕ್ಕೆ ನೂರು ಸರಿಯಾದ ಸಂಕಲ್ಪ ಶುದ್ಧಿ ಇರುತ್ತದೆ.

'ನಾನು ಈ ಜನ್ಮದಲ್ಲಿಯಾದರೂ ಈ ಕೆಲಸ ಮಾಡಬೇಕು' ಎಂದು ಹುಟ್ಟುತ್ತಾನೆ. ಬಂದ ನಂತರ ಪಕ್ಕದಲ್ಲಿರುವವನನ್ನು ನೋಡಿ.... ಇವನನ್ನು ನೋಡಿ... ಆ ಮನೆಯವನನ್ನು ನೋಡಿ..... ಈ ಮನೆಯವನನ್ನು ನೋಡಿ..... ಅದೇ! ನನಗಿಂತಲೂ ಅವರದ್ದೇ ಚೆನ್ನಾಗಿದೆಯೇ! ನನಗಿಂತಲೂ ಇವರದ್ದೇ ಚೆನ್ನಾಗಿದೆಯೇ! ಅವರಿಗೆ A.C. ಕಾರಿದೆಯೇ! ಅಬ್ಬಬ್ಬಾ! ನೋಡಿದಿರಾ! ಇಲ್ಲಿಗೆ ಬಂದು ಎಲ್ಲವೂ ಗೊಂದಲಮಯ! ಹುಲಿಯನ್ನು ನೋಡಿ ನರಿ ಬರೆಗಳನ್ನು ಇಟ್ಟುಕೊಂಡಂತೆ; ನರಿಯನ್ನು ನೋಡಿ ಹುಲಿ ತನ್ನ ಬರೆಗಳನ್ನು ತೆಗೆದುಹಾಕಿದಂತೆ.... ಹಾಗೆ ತಯಾರಾಗುತ್ತದೆ ಜೀವನ.

ಸಂಪೂರ್ಣ ಅವಗಾಹನೆ (ಅರಿವು)

ಮೈ ಡಿಯರ್ ಫ್ರೆಂಡ್ಸ್! ಮನುಷ್ಯನಿಗೆ ಈ ಒಂದು ಸಂಕಲ್ಪ ಶಕ್ತಿಯ ಮೂಲಕ ಸಂಕಲ್ಪ ಸಿದ್ಧಿ ಉಂಟಾಗಬೇಕೆಂದರೆ ಸಂಕಲ್ಪ ಶುದ್ಧಿ ಇರಬೇಕು! ಸಂಕಲ್ಪ ಶುದ್ಧಿ ಎಂದರೆ "ನಾನು ಏನು ಮಾಡಬೇಕು ಈ ವರ್ತಮಾನ ಜೀವನದಲ್ಲಿ?"ಎಂಬ ಸಂಪೂರ್ಣ ಅರಿವು! ಉದಾಹರಣೆಗೆ ಕರ್ಣನಿದ್ದಾನೆ ಆತನಿಗೆ ಮಿತ್ರತ್ವವೇ ಬೇಕು; ದಾನವೇ ಬೇಕು; ಮಿತ್ರತ್ವಕ್ಕಾಗಿ ಪ್ರಾಣವನ್ನು ಅರ್ಪಿಸಿದನು; ದಾನಕ್ಕೆ ಎಲ್ಲವನ್ನೂ ಅರ್ಪಿಸಿದನು; ಅದಕ್ಕಾಗಿಯೇ ದಾನಕರ್ಣನಾದನು. ಮಿತ್ರತ್ವಕ್ಕೆ ಸಂಕೇತವಾದನು.

ಭೀಷ್ಮನು ತನ್ನ ಪ್ರತಿಜ್ಞೆಗೆ ಸಂಕೇತವಾದನು. ಶ್ರೀರಾಮನು ಪಿತೃವಾಕ್ಯ ಪರಿಪಾಲನೆಗೆ ಸಂಕೇತವಾದನು. ಸೀತೆಯು ಪತಿವ್ರತೆಯ ತತ್ವಕ್ಕೆ ಸಂಕೇತವಾದಳು. ಬಿಸ್ಮಿಲ್ಲಾ ಖಾನ್ ಷಹನಾಯ್‌ಗೆ ಸಂಕೇತವಾದರು.

ಮಹಾತ್ಮಾ ಗಾಂಧೀಜಿ ಅಹಿಂಸೆಯ ಸಿದ್ಧಾಂತಕ್ಕೆ ಸಂಕೇತವಾದರು. ಮದರ್ ತೆರೇಸಾ ಮಾನವಸೇವೆಗೆ ಸಂಕೇತವಾದರು. ಹಾಗಾದರೆ ನಾವು ಏನಾಗಿದ್ದೇವೆ? ಯಾವುದಕ್ಕೆ ಸಂಕೇತವಾಗಿದ್ದೇವೆ? ಬೆಳಿಗ್ಗೆಯೇ ಇಡ್ಲಿ, ವಡೆ, ಸಾಂಬಾರ್ ತಿನ್ನುವುದಕ್ಕೆ; ಮಧ್ಯಾಹ್ನ ವೆಜಿಟೇಬಲ್ ಪಲಾವ್ ತಿನ್ನುವುದಕ್ಕೆ, ಅನಂತರ ಸಾಯಂಕಾಲ ಮತ್ತೆ ಡಾಬಾಗೆ ಹೋಗಿ ಏನು ತಿನ್ನೋಣ? ಹಾಗಾದರೆ ತಿನ್ನುವುದಕ್ಕೆ ಕುಡಿಯುವುದಕ್ಕೆ ಸಂಕೇತ. ಶುದ್ಧವಾದ ಪ್ರಾಣಿ ಜೀವನ.

ಒಂದೊಂದು ಕಲೆ ಒಂದೊಂದು ವಿದ್ಯೆ!

ಮೈ ಡಿಯರ್ ಫ್ರೆಂಡ್ಸ್! ಎಲ್ಲರೂ ಸಕಲಕಲಾವಲ್ಲಭರು ಆಗಬೇಕು! ಸಕಲ ವಿದ್ಯಾ ಪಾರಂಗತರು ಆಗಬೇಕು! ಒಂದೊಂದು ಜೀವನ ಒಂದೊಂದು ಕಲೆಗೆ, ಒಂದೊಂದು ವಿದ್ಯೆಗೆ ಮೀಸಲು. ಮಾನವ ಜೀವನ ಪರಂಪರೆ ಎಂಬುದು ಸಕಲ ವಿದ್ಯಾಪಾರಂಗತರಾಗುವುದಕ್ಕೋಸ್ಕರ! ಸಕಲಕಲಾವಲ್ಲಭರಾಗುವುದಕ್ಕೋಸ್ಕರ! ಪ್ರತಿ ಜೀವನವು ಸಹ ಆಯ್ದುಕೊಂಡ ಜೀವನ ಯಶಸ್ವಿಗೊಳ್ಳುವುದಕ್ಕಾಗಿ! ಅದಕ್ಕೆ ಸಂಕಲ್ಪ ಶಕ್ತಿ, ಸಿದ್ಧಿ ಇರಬೇಕು! ಸಂಕಲ್ಪ ಶುದ್ಧಿ ಇದ್ದರೇನೇ ಸಂಕಲ್ಪ ಶಕ್ತಿ ಬರುತ್ತದೆ! ಸಂಕಲ್ಪ ಶಕ್ತಿ ಇದ್ದರೇನೇ ಸಂಕಲ್ಪ ಸಿದ್ಧಿಯಾಗುತ್ತದೆ! ಮೈ ಡಿಯರ್ ಫ್ರೆಂಡ್ಸ್! ಮೈ ಡಿಯರ್ ಮಾಸ್ಟರ್ಸ್! ಮೈ ಡಿಯರ್ ಗಾಡ್ಸ್ ಆಫ್ ಆಂಧ್ರಪ್ರದೇಶ್!

ಚಿಕ್ಕಂದಿನಿಂದಲೂ ಮಕ್ಕಳಿಗೆ ಸಂಕಲ್ಪ ಶಕ್ತಿಯನ್ನು, ಸಂಕಲ್ಪ ಶುದ್ದಿಯನ್ನು, ಸಂಕಲ್ಪ ಸಿದ್ಧಿಯನ್ನು..... ಈ ಸಂಕಲ್ಪ ಶಾಸ್ತ್ರವನ್ನು ಬೋಧಿಸಬೇಕು! ಈ ಧ್ಯಾಸ ಶಾಸ್ತ್ರವನ್ನು ಬೋಧಿಸಬೇಕು: ಮಕ್ಕಳನ್ನು ಇಂಟೆಂಟ್ ಬಾಲ್ಸ್ ಆಗಿ, ಸಂಕಲ್ಪಕ್ಕೆ ಪ್ರತಿರೂಪಗಳಾಗಿ ತಯಾರು ಮಾಡಬೇಕು! ಮೈ ಡಿಯರ್ ಫ್ರೆಂಡ್ಸ್!" ಇದೆಲ್ಲಾ ಹೇಗೆ ಸಾಧ್ಯ?"ಅಂದರೆ ಈ ಒಂದು ಧ್ಯಾಸ ಶಾಸ್ತ್ರ... ಈ ಒಂದು ಆಲೋಚನಾ ತರಂಗಗಳ ಶಾಸ್ತ್ರ.... ಇದನ್ನು ಅಧ್ಯಯನ ಮಾಡಿಸಬೇಕು.

ಸಕಾರಾತ್ಮಕ ಆಲೋಚನೆಗಳು

ನಮ್ಮ ಮನಸ್ಸಿನಲ್ಲಿ ಸಕಾರಾತ್ಮಕ ಆಲೋಚನಾ ತರಂಗಗಳು ಯಾವಾಗಲೂ ಸುಪ್ರತಿಷ್ಠೆಯಾಗಿರಬೇಕು! ಮನಸ್ಸಿನಲ್ಲಿ ಯಾವುದೋ ಒಂದು ರೀತಿಯ ತರಂಗಗಳು ಯಾವಾಗಲೂ ಇರುತ್ತವೆ. ಎಂತಹ ಆಲೋಚನಾ ತರಂಗಗಳಿರಬೇಕು?.....

ಯಾವಾಗಲೂ ಸಕಾರಾತ್ಮಕ ಆಲೋಚನಾ ತರಂಗಗಳು ಇರಬೇಕು! ನಕಾರಾತ್ಮಕ ಆಲೋಚನಾ ತರಂಗಗಳು ಇರಬಾರದು.

ಇವನ್ನೆಲ್ಲಾ ಸಾಧಿಸಬೇಕೆಂದರೆ ಧ್ಯಾನ ಕಡ್ಡಾಯ! ಮನಸ್ಸನ್ನು ಎಷ್ಟು ಶೂನ್ಯವಾಗಿ ಇರಿಸಿಕೊಂಡರೆ ಮನಸ್ಸಿನ ಶಕ್ತಿ ಅಷ್ಟು ಹೆಚ್ಚಾಗುತ್ತದೆ! ಮನಸ್ಸನ್ನು ಎಷ್ಟು ಪರಿಶೂನ್ಯವಾಗಿ ಇರಿಸಿಕೊಂಡರೆ ಅಷ್ಟು ಪ್ರಚಂಡವಾಗಿ ಇರುತ್ತದೆ!

ಮೊದಲನೆಯದು ಮೌನ; ಎರಡನೆಯದು ಧ್ಯಾನ; ಇನ್ನು ಮೂರನೆಯದು ಈ ಒಂದು ಸಂಕಲ್ಪಶಾಸ್ತ್ರ! ಈ ಮೂರು ಸಹ ಅನುಕ್ರಮವಾಗಿ ಸಂಕಲ್ಪಕ್ಕೆ ಶಕ್ತಿಯನ್ನು ಸರಬರಾಜು ಮಾಡುವಂತಹವು! ಅತ್ಯಧಿಕವಾಗಿ ಮೌನ ಇರಬೇಕು! ಅವಶ್ಯಕತೆ ಇದ್ದರೇನೇ ಮಾತನಾಡಬೇಕು! ಅಗತ್ಯವಿಲ್ಲದ ಮಾತುಗಳು ಅತಿಯಾಗಿರಬಾರದು.. ನಂತರ ಅನಗತ್ಯವಾದ ಆಲೋಚನೆಗಳು ಇರಬಾರದು. ಅಗತ್ಯವಾದ ಆಲೋಚನೆಗಳೇ ಇರಬೇಕು. ಇಲ್ಲದಿರುವಾಗ ಆಲೋಚನಾ ರಹಿತ ಸ್ಥಿತಿಯಲ್ಲಿ, ಧ್ಯಾನದಲ್ಲಿ ಮಗ್ನರಾಗಬೇಕು.

ಮೊಟ್ಟಮೊದಲನೆಯದು ಮೌನ, ಎರಡನೆಯದು ಧ್ಯಾನ, ಮೂರನೆಯದು ಈ ಸಂಕಲ್ಪ ಶಾಸ್ತ್ರ, ಈ ಥಾಟ್ ಸೈನ್ಸ್! ಈ ಒಂದು ಸಂಕಲ್ಪ ಶಾಸ್ತ್ರವನ್ನು ವಿಶೇಷವಾಗಿ ಪರಿಚಯ ಮಾಡಿಕೊಳ್ಳಬೇಕು! ಅಧ್ಯಯನ ಮಾಡಬೇಕು! ಆದ್ದರಿಂದ ಈ ಒಂದು ಸಂಕಲ್ಪ ಶಾಸ್ತ್ರಜ್ಞಾನ, ಮತ್ತು ಧ್ಯಾನ, ಮತ್ತು ಮೌನ ಈ ಮೂರು ಸಹ ಸಂಕಲ್ಪಗಳಿಗೆ ಶಕ್ತಿಯನ್ನು ಸರಬರಾಜು ಮಾಡುವಂತಹವು.

ನೋ ಮೆಂಟಲ್ ಡಯಾರಿಯ!

ಮತ್ತೊಮ್ಮೆ ಹೇಳಿಕೊಳ್ಳೋಣ. ಮೈ ಡಿಯರ್ ಫ್ರೆಂಡ್ಸ್!

ಮೌನವೆಂದರೆ ಬಾಯಿಚಪಲ (ಬಾಯಿಯ ಕುಹರ) ಇಲ್ಲದಿರುವುದು! There should be no verbal diarrhoea! ದಟ್ ಈಜ್ ಮೌನ! ಹತ್ತು ವಾಕ್ಯಗಳಲ್ಲಿ ಹೇಳಬೇಕಾದದ್ದನ್ನು ....ಒಂದು ಪದದಲ್ಲಿ ಹೇಳಬೇಕು! ನಂತರ ಮೆಂಟಲ್ ಡಯೇರಿಯಾ ಇರಬಾರದು; ಥಾಟ್ ಡಯೇರಿಯಾ ಇರಬಾರದು. ಯಾವಾಗಲೂ ಅದರ ಬಗ್ಗೆ ಆಲೋಚಿಸಿ, ಇದರ ಬಗ್ಗೆ ಆಲೋಚಿಸಿ,... "ನಾನು ಹೀಗೆ ಮಾಡಿದರೆ ಅವನು ಹೀಗೆ ಅನ್ನುತ್ತಾನೆ!" ಅವನು ಹಾಗೆ ಮಾಡಿದರೆ ನಾನು ಹೇಗೆ ಮಾಡಬೇಕು?"... ಇದೆಲ್ಲವೂ ಸಹ ಮೆಂಟಲ್ ಡಯೇರಿಯಾ! ಅದು ಇರಬಾರದು! ನಂತರ ಈ ಒಂದು ಧ್ಯಾನ ಶಾಸ್ತ್ರ, ಮೌನ ಶಾಸ್ತ್ರಗಳು ಹೇಗಿವೆಯೋ..... ಅದೇ ರೀತಿಯಾಗಿ ಸಂಕಲ್ಪ ಶಾಸ್ತ್ರ, ಧ್ಯಾಸ ಶಾಸ್ತ್ರ! ಇವುಗಳನ್ನು ಅಧ್ಯಯನ ಮಾಡಬೇಕು.

ರಾಮ್ತಾ

ಎಷ್ಟೋ ಅದ್ಭುತ ಪುಸ್ತಕಗಳು ಇವೆ. ಉದಾಹರಣೆಗೆ ರಾಮ್ತಾ ಎಂಬ ಪುಸ್ತಕವನ್ನು ತಪ್ಪದೇ ಓದಬೇಕು. ಈ ಒಂದು "ಧ್ಯಾಸ ಶಾಸ್ತ್ರ"ದ ಪ್ರಚಂಡವಾದ ರೂಪ ರಾಮ್ತಾ ಎಂಬ ಪುಸ್ತಕ! ತೆಲುಗಿಗೆ ಅನುವಾದ ಮಾಡಲ್ಪಟ್ಟಿದೆ! ಪಿರಮಿಡ್ ಸ್ಪಿರಿಚುವಲ್ ಸೊಸೈಟೀಸ್ ಮಾಸ್ಟರ್ಸ್ ರಾಮ್ತಾ ಎಂಬ ಪುಸ್ತಕವನ್ನು ದ್ಯಾಸ ಶಾಸ್ತ್ರ ವಿಜ್ಞಾನವಾಗಿ, 'ವಿಜ್ಞಾನದ ಜ್ಞಾನಭಂಡಾರ'ವಾಗಿ ಧ್ಯಾಸ ಶಾಸ್ತ್ರವನ್ನು ಈ ಒಂದು ಸಂಕಲ್ಪ ಶಾಸ್ತ್ರವನ್ನು ಹಿಟ್ಟು ಮಾಡಿ ಊಟ ಮಾಡಿ ಜೀರ್ಣಿಸಿಕೊಂಡವರು!

ಸಂಕಲ್ಪ ಶಕ್ತಿಗೆ ಮಿತಿಗಳಿಲ್ಲ!

ಸಂಕಲ್ಪಗಳನ್ನು ಪರಿಶುದ್ಧ ಮಾಡಿಕೊಂಡವರೇ ಪಿರಮಿಡ್ ಮಾಸ್ಟರ್ ಗಳು! ವಿಶೇಷವಾದ ಪ್ರಚಂಡವಾದ ಧ್ಯಾನದ ಮೂಲಕ ಪರಿಶುದ್ಧ ಆತ್ಮಗಳಾಗಿ ಈ ಒಂದು ಧ್ಯಾಸ ಶಾಸ್ತ್ರವನ್ನು ಧ್ಯಾಸ ಶಾಸ್ತ್ರಜ್ಞರಾಗಿ, ಮತ್ತು ಸಮಾಜದಲ್ಲಿ ಕಲ್ಯಾಣವನ್ನು ಆವಿಷ್ಕರಿಸಲು ಕಂಕಣ ಕಟ್ಟಿಕೊಂಡವರು. "ಸ್ವಕಲ್ಯಾಣ ಧ್ಯಾನದ ಮೂಲಕ, ಲೋಕಕಲ್ಯಾಣ ಸಂಕಲ್ಪ ಶಕ್ತಿಯ ಮೂಲಕ!"ನನ್ನ ಸ್ವಂತ ಕಲ್ಯಾಣಕ್ಕೆ ನನ್ನ ಧ್ಯಾನ, ಲೋಕಕಲ್ಯಾಣಕ್ಕೆ ನನ್ನಯ ಅಖಂಡವಾದ ಸಂಕಲ್ಪ! ಮಾನವನ ಸಂಕಲ್ಪ ಶಕ್ತಿಗೆ ಮಿತಿಗಳಿಲ್ಲ. ಯಾವುದು ಬೇಕೆಂದರೆ ಅದನ್ನು ಪಡೆಯಬಲ್ಲರು. ಪಡೆಯಲೇಬೇಕು! ಪ್ರತಿ ಬಯಕೆಯನ್ನು ಈಡೇರಿಸಿಕೊಳ್ಳಲು ಕೋಟ್ಯಾನುಕೋಟಿ ಜೀವನಗಳು! ಜೀವನದ ಅನಂತ ಪ್ರವಾಹ. ಸಾಧನೆ – ಧ್ಯಾನ ಸಾಧನೆ. ಸಂಕಲ್ಪ ಶಾಸ್ತ್ರದ ಅಧ್ಯಯನ, ಸಂಕಲ್ಪ ಸಾಧನೆ, ಇವೆಲ್ಲವೂ ಸಹ ಒಟ್ಟಾಗಿಯೇ ಮಾನವನ ಕಲ್ಯಾಣಕ್ಕೆ; ಲೋಕಕಲ್ಯಾಣಕ್ಕೆ, ಯಾವುದಾದರೆ ಮಾನವನ ಕಲ್ಯಾಣಕ್ಕೆ ಮಾರ್ಗವೋ ಅದೇ ಲೋಕ ಕಲ್ಯಾಣ. ಜಗತ್ತು ಮಾನವರೊಂದಿಗೆ ಒಟ್ಟಾಗಿರುವ ಸಮೂಹ.

ಯಾವಾಗಲೂ ಪ್ರೋತ್ಸಾಹ ನೀಡುತ್ತಿರಬೇಕು

ಚಿಕ್ಕ ಮಕ್ಕಳಿಗೆ "ನೀನು ಅದನ್ನು ಮಾಡಲಾಗುವುದಿಲ್ಲ"ಎಂಬ ಮಾತನ್ನು ಯಾವಾಗಲೂ ಹೇಳಬಾರದು. ಅಂತಹ ಮಾತುಗಳು ದೊಡ್ಡವರಿಂದ ಯಾವಾಗಲೂ ಬರಬಾರದು. ಯಾವಾಗಲೂ ಪ್ರೋತ್ಸಾಹವನ್ನು ನೀಡಬೇಕು! ನಿರುತ್ಸಾಹ ಇರಬಾರದು, ನಿರುತ್ಸಾಹ ಪಡಿಸಬಾರದು, ಪ್ರೋತ್ಸಾಹಿಸಬೇಕು! ಒಂಣುತಚೆಣುಂಟಿ, ಟಿಂಣ ಜಜಟಂಣುತಚೆಣುಂಟಿ. ಪ್ರೋತ್ಸಾಹ ವನ್ನು ಯಾವಾಗಲೂ ಹಾಗೆ ಹಂಚುತ್ತಾ ಇರಬೇಕು! ನಿರುದ್ಸಾಹ ಯಾವಾಗಲೂ ಈ ಒಂದು ಮಾತನ್ನೇ ಆಡಬಾರದು. ಈ ಒಂದು ಮಾತು

ಇರಬಾರದು. ಆ ಒಂದು ಆಲೋಚನೆ ಇರಬಾರದು. ಏನನ್ನಾದರೂ ಎಂಬ ಮಾತೆ ಸರಿಯಾದ ಮಾತು! ಏನನ್ನಾದರೂ ಮಾಡಬಲ್ಲೆನು ಎಂಬ ಆಲೋಚನೆ ಸರಿಯಾದ ಆಲೋಚನೆ! ನಿನ್ನ ಆಲೋಚನೆ ನಿನ್ನನ್ನು ಬಲಿಷ್ಠಗೊಳಿಸುತ್ತದೆ! ನಿನ್ನ ಮಾತು ನಿನ್ನನ್ನು, ಮತ್ತು ಜಗತ್ತನ್ನು ಬಲಿಷ್ಠಗೊಳಿಸುತ್ತದೆ. ನಿನ್ನ ಆಲೋಚನೆ ಪಕ್ಕದವನಿಗೆ ಸೇರುವುದಿಲ್ಲ. ನಿನ್ನ ಮಾತು ಪ್ರಪಂಚಕ್ಕೆ ಸೇರುತ್ತದೆ ಮಾತನಾಡಿದ ತಕ್ಷಣವೇ!

ಮೌನ – ಧ್ಯಾನ

ಮೈ ಡಿಯರ್ ಫ್ರೆಂಡ್ಸ್! ಧ್ಯಾಸವೆಂದರೆ ನಮ್ಮ ಮನಸ್ಸಿನಲ್ಲಿನ ಆಲೋಚನೆಗಳನ್ನು ಶುದ್ಧವಾಗಿ ಇರಿಸಿಕೊಳ್ಳುವುದು.! ಬಲಿಷ್ಠ ಗೊಳಿಸುವುದು! "ಧ್ಯಾನ ಶಕ್ತಿಯ ಮೂಲಕವೇ ಸಂಕಲ್ಪ ಶಕ್ತಿ" ಎಷ್ಟು ನಾವು ಧ್ಯಾನದಲ್ಲಿ ಇರುತ್ತೇವೆಯೋ ಅಷ್ಟು ಸಂಕಲ್ಪ ಶಕ್ತಿ ಸಂಗ್ರಹವಾಗುತ್ತದೆ! ಎಷ್ಟೊಂದು ಈ ಧ್ಯಾನಶಾಸ್ತ್ರವನ್ನು ಅರ್ಥ ಮಾಡಿಕೊಂಡಿರುತ್ತೇವೆಯೋ ಅಷ್ಟೊಂದು ನಮ್ಮ ಸಂಕಲ್ಪ ಶಕ್ತಿ ಸಂಗ್ರಹವಾಗುತ್ತದೆ. ಈ ಮೂರು ವಿಧಾನಗಳು ಮೌನ, ಧ್ಯಾನ, ಜ್ಞಾನದ ಮೂಲಕ ಸಂಕಲ್ಪದ ಶಕ್ತಿ... ಎಲ್ಲಿ ಮೌನವಿಲ್ಲವೋ... ಎಲ್ಲಿ ಧ್ಯಾನವಿಲ್ಲವೋ... ಎಲ್ಲಿ ಜ್ಞಾನವಿಲ್ಲವೋ... ಸಂಕಲ್ಪದಲ್ಲಿ ಒಂದು ಸಂಕಲ್ಪಕ್ಕೆ ಹಲವಾರು ವಿಕಲ್ಪಗಳು ಇರುತ್ತವೆ. ಮಾನವನ ಜೀವನ ಅಸ್ತವ್ಯಸ್ತವಾಗಿ ತಯಾರಾಗುತ್ತದೆ. ಮಾನವನ ಧ್ಯಾಸ ಜೀವನದಲ್ಲಿ ಸಂಕಲ್ಪಗಳ ರಾಶಿಯೇ ಇರಬೇಕು! ಆದರೆ ವಿಕಲ್ಪ ಎಂಬ ಆ ಕಳೆ ಇರಬಾರದು. ವಿಕಲ್ಪವೆಂಬುದು ಮಾನವನ ಜೀವನದಲ್ಲಿರುವ ಕಳೆ. ಆ ಕಳೆಯನ್ನು ಕಿತ್ತು ಹಾಕಬೇಕು. ಬೆಳೆ ಪರಿಶುದ್ಧವಾಗಿರಬೇಕು!

ಕಲ್ಪನೆ

ಮೈ ಡಿಯರ್ ಫ್ರೆಂಡ್ಸ್! ಪಿರಮಿಡ್ ಸ್ಪಿರಿಚುವಲ್ ಸೊಸೈಟಿ ಮಾಸ್ಟರ್ಸ್ ಎಲ್ಲರೂ ಈ ದಿನ ಈ ಒಂದು ಸಂಕಲ್ಪ ಶಕ್ತಿ, ಸಂಕಲ್ಪ ಶುದ್ದಿ, ಸಂಕಲ್ಪ ಸಿದ್ಧಿಯ ಬಗ್ಗೆ ಇನ್ನೂ ತಿಳಿದುಕೊಳ್ಳುತ್ತಿದ್ದೇವೆ. ವಿಕಲ್ಪ ಇದ್ದರೆ ವಿಕಲ್ಪಸಿದ್ಧಿಯಾಗುತ್ತದೆ!" "ಸಂಕಲ್ಪವಿದ್ದರೆ ಸಂಕಲ್ಪ ಸಿದ್ಧಿ ಆಗುತ್ತದೆ!" ನಾನು ಮಾಡಲಾರೆನು ಎಂಬ ಆಲೋಚನೆ ಇದ್ದರೆ, ನೀನು ಮಾಡಲಾರದೇ ಇರುವುದು ನಿನಗೆ ನೀನು ಅಪಜಯವನ್ನು ಹೊಂದುವುದು, ಅದೇ ಸಿದ್ಧಿಸುತ್ತದೆ. ವಿಕಲ್ಪವಿದ್ದರೆ ವಿಕಲ್ಪ ಸಿದ್ಧಿಸುತ್ತದೆ. ಸಂಕಲ್ಪವಿದ್ದರೆ ಸಂಕಲ್ಪ ಸಿದ್ಧಿಸುತ್ತದೆ. ಆದ್ದರಿಂದ 'ಕಲ್ಪ'; 'ಕಲ್ಪನೆ'; ಯನ್ನು ತಯಾರು ಮಾಡುವುದು ಸೃಷ್ಟಿ, ಸೃಷ್ಟಿಕರ್ತ ಎಂದರೆ ಸೃಷ್ಟಿಸಂಕಲ್ಪ ಮಾಡುತ್ತಿರುವವನು. 'ಕಲ್ಪನೆ'....ನೋಡಿದಿರಾ! "ಸಂಕಲ್ಪದಲ್ಲಾಗಲೀ, ವಿಕಲ್ಪದಲ್ಲಾಗಲಿ ಕಲ್ಪನೆ ಎಂಬ ಪದ ಇದೆ!"

ಕಲ್ಪನೆ ಎಂದರೆ imagination. ಸೃಷ್ಟಿಸುವ ಪದಾರ್ಥ, ಕಲ್ಪನೆ. "ನಾನು

ಕೈಲಾಗದವನು"ಎಂಬ ಆಲೋಚನೆ ಇದ್ದರೆ ನಮ್ಮ ಕೈಲಾಗದತನವೇ ಸೃಷ್ಟಿಸಲ್ಪಡುತ್ತದೆ! ನಾನು ಕೈಲಾಗದವನು! ಕೈಲಾಗದವನು!"ಅಂದುಕೊಳ್ಳುತ್ತಿದ್ದರೆ ಯಾವುದೇ ಕೆಲಸವನ್ನು ಕೈಹಿಡಿದರೂ ಅದರಲ್ಲಿ ನಾವು ಅಸಫಲರಾಗುತ್ತೇವೆ. ಅಂದರೆ ನಮ್ಮ ವಿಕಲ್ಪ ಸಿದ್ಧಿಸಿದೆ! ವಿಕಲ್ಪವಿದ್ದರೆ ವಿಕಲ್ಪ ಸಿದ್ಧಿಸುತ್ತದೆ. ಅಪಜಯವಿದೆ ಎಂದರೆ ಅಲ್ಲಿ ವಿಕಲ್ಪವಿದೆ ಯೆಂದು; ಜಯವಿದೆಯೆಂದರೆ ಅಲ್ಲಿ ಸಂಕಲ್ಪವಿದೆ ಎಂದು ನಾವು ಅರ್ಥಮಾಡಿಕೊಳ್ಳಬೇಕು! ಸಂಕಲ್ಪವಿದ್ದರೆ ಸಂಕಲ್ಪ ಸಿದ್ಧಿಸುತ್ತದೆ; ವಿಕಲ್ಪವಿದ್ದರೆ ವಿಕಲ್ಪ ಸಿದ್ಧಿಸುತ್ತದೆ. ಎಲ್ಲವೂ ಸೇರಿ ನಾವು ಯಾವ ಕಲ್ಪನೆಯನ್ನು ಮಾಡುತ್ತೇವೆಯೋ... ಯಾವ ವಿಕಲ್ಪವನ್ನು ಮಾಡುತ್ತೇವೆ, ಯಾವುದನ್ನು ಸಂಕಲ್ಪಿಸುತ್ತೇವೆಯೋ... ಅದು ಸಿದ್ಧಿಸುತ್ತದೆ! ವಿಕಲ್ಪಕ್ಕೆ ಅಗಾಧವಾದ ಶಕ್ತಿ ಇದ್ದರೆ... ವಿಕಲ್ಪ ಸಿದ್ಧಿಸುತ್ತದೆ. ಸಂಕಲ್ಪಕ್ಕೆ ಅಗಾಧವಾದ ಶಕ್ತಿ ಇದ್ದರೆ... ಸಂಕಲ್ಪ ಸಿದ್ಧಿಸುತ್ತದೆ.

ಹೊಸ ಆಗಮನ

ಒಂದು ಸಮಯದಲ್ಲಿ ಶ್ರೀಲಂಕಾ ಲಾಸ್ಟ ಟೀಮ್ ಆಗಿತ್ತು ಪ್ರಪಂಚದಲ್ಲಿ. ಆಗ ಶ್ರೇಷ್ಠ ಆಟಗಾರ ಸನತ್ ಜಯಸೂರ್ಯ ಬಂದು ಮೊಟ್ಟಮೊದಲನೆಯ ಓವರ್ನಲ್ಲಿಯೇ ಸಿಕ್ಸರ್ ಗಳನ್ನು ಹೊಡೆಯಲು ಪ್ರಾರಂಭಿಸಿದರು. ಹೊಸ ಅಲೆ ಸೃಷ್ಟಿಸಿದರು. ಯಾವುದನ್ನಾದರೂ ಸೃಷ್ಟಿಸಬಲ್ಲೆವು. ಅದಕ್ಕಿಂತ ಮುಂಚೆ ನಾವು ಕೈಲಾಗದವರು ಆದ್ದರಿಂದ ಈಗಲೂ ಸಹ ಕೈಲಾಗದವರು ಆಗಬೇಕಾಗಿಲ್ಲ. ಅದಕ್ಕಿಂತ ಮುಂಚೆ ಸಣ್ಣ ವಿಕಲ್ಪ ಶಕ್ತಿ ಇತ್ತು ಆದ್ದರಿಂದ ನಾವು ವಿಫಲರಾದೆವು. ಈ ದಿನ ಸಂಕಲ್ಪ ಶಕ್ತಿಯ ಅಧ್ಯಯನ ಮಾಡಿ ಸ್ವಾಧೀನ ಪಡಿಸಿಕೊಂಡರೆ ಒಂದು ದಿನ ಯಶಸ್ವಿಯಾಗುತ್ತೇವೆ!"ನಿನ್ನೆಯ ಸಂಕಲ್ಪ ಶಕ್ತಿಯನ್ನಾಧರಿಸಿ ಇಂದಲ್ಲ, ಇಂದಿನ ಸಂಕಲ್ಪ ಶಕ್ತಿಯನ್ನು ಆಧರಿಸಿ ಇಂದಿನ ವಿಜಯ!" ನಿನ್ನೆಯ ಸಂಕಲ್ಪ ಶಕ್ತಿ, ಇಂದಿನ ಸಂಕಲ್ಪ ಶಕ್ತಿ, ಅಥವಾ ಇಂದಿನ ವಿಕಲ್ಪ ಶಕ್ತಿಯನ್ನಾಧರಿಸಿ ಇಂದಿನ ಸಿದ್ಧಿ. ನಿನ್ನೆಗೂ, ಇಂದಿಗೂ ಸಂಬಂಧವಿಲ್ಲ. ಮೊನ್ನೆ ಇಂಡಿಯಾ ಸೋತು ಹೋಯಿತು. ಇಂದು ಸಹ ಆಸ್ಟ್ರೇಲಿಯಾದೊಂದಿಗೆ ಇಂಡಿಯಾ ಸೋತು ಹೋಗುತ್ತದೆಯೇನು?

ಗಮನದ ಮೇಲೆ ಗಮನ

ಸಂಕಲ್ಪ ಶಕ್ತಿಯನ್ನು ಬಲಪಡಿಸಿಕೊಂಡರೆ, ಈ ಗಂಗೂಲಿ ಟೀಮ್ ಎಲ್ಲಾ ದಿನವೂ ಧ್ಯಾನ ಮಾಡಿದರೆ ಗ್ಯಾರೆಂಟಿಯಾಗಿ ಇಂಡಿಯಾ ನಂಬರ್ ಒನ್ ಆಗುತ್ತದೆ. ಧ್ಯಾನ ಮಾಡಿ ಸಾಯುವುದಿಲ್ಲ! ನಮ್ಮ ಹತ್ತಿರ ಬಂದರೆ ಅಲ್ಲವೇ ಧ್ಯಾನ ಕಲಿಸಿಕೊಡಲು!

ಮೈ ಡಿಯರ್ ಫ್ರೆಂಡ್ಸ್, ಶುದ್ಧಿ ಎಂಬುದು ಶಕ್ತಿಯನ್ನು ಪ್ರಸಾದಿಸುತ್ತದೆ. ಶಕ್ತಿಯ ಮೂಲಕವೇ ಸಿದ್ಧಿ. ಆದ್ದರಿಂದ ಶ್ವಾಸದ ಮೇಲೆ ಗಮನ ಎಂಬುದು ಧ್ಯಾಸಶಾಸ್ತ್ರವಾದರೆ, ಗಮನದ ಮೇಲೆ ಗಮನ ಎಂಬುದು ಸಂಕಲ್ಪ ಶಾಸ್ತ್ರ! ಅಹಿಂಸೆಯ ಮೇಲೆ ಗಮನ ವಿರುಸಿದರು ಮಹಾತ್ಮ ಗಾಂಧಿ. ಸಹಜೀವಿಗೆ ಸೇವೆ ಎಂಬ ವಿಷಯದ ಮೇಲೆ

ಗಮನವೇರಿಸಿದರು ಮದರ್ ತೆರೇಸಾ. ಆ.... ಸಂಗೀತದ ಮೇಲೆ, ಸ್ವರಗಳ ಮೇಲೆ ಗಮನವಿರಿಸಿದರು ಬಿಸ್ಮಿಲ್ಲಾ ಖಾನ್.

ಆತ್ಮಜ್ಞಾನಿಗಳು ಗಮನ ಇರುವವರು. ಶಾಸ್ತ್ರಜ್ಞರು ಗಮನದ ಮೇಲೆ ಗಮನ ಇರಿಸುತ್ತಾರೆ. ಬಿಸ್ಮಿಲ್ಲಾ ಖಾನ್ ಹತ್ತಿರ ಸುಸ್ವರವಿರುತ್ತದೆ. ಸಾಕ್ರೆಟಿಸ್ ಹತ್ತಿರ ಸುಧ್ಯಾಸ ಇರುತ್ತದೆ. ಒಬ್ಬ ಆತ್ಮಜ್ಞಾನಿಯ ಹತ್ತಿರ ಸುಧ್ಯಾಸ (ಅದ್ಭುತವಾದ ಗಮನ) ಇರುತ್ತದೆ.

ಮೈ ಡಿಯರ್ ಫ್ರೆಂಡ್ಸ್! ಧ್ಯಾಸ ಶಾಸ್ತ್ರವೇ ಸೃಷ್ಟಿ ಶಾಸ್ತ್ರ! ಧ್ಯಾಸ ವಿಜ್ಞಾನವೇ ಸೃಷ್ಟಿ ವಿಜ್ಞಾನ! ಧ್ಯಾಸವೇ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣಭೂತವಾದದ್ದು! ಗಮನದ ಮೂಲಕವೇ ಸೃಷ್ಟಿ, ಗಮನದ ಮೂಲಕವೇ ಸ್ಥಿತಿ, ಗಮನೋಪಸಂಹಾರದ ಮೂಲಕವೇ ಲಯ. ನಮ್ಮ ಜೀವನಕ್ಕೆ ನಾವೇ ಸೃಷ್ಟಿಕಾರಕರು; ಸ್ಥಿತಿಕಾರಕರು; ಲಯಕಾರಕರು! ನಮ್ಮ ಆನಂದ ವಿಷಾದಗಳಿಗೂ, ಆರೋಗ್ಯ ಅನಾರೋಗ್ಯಗಳಿಗೂ ನಾವೇ ಸೃಷ್ಟಿಕರ್ತರು! ಸ್ಥಿತಿ ಕರ್ತರು! ಲಯ ಕರ್ತರು! ನಮ್ಮ ಹುಟ್ಟು ನಮ್ಮ ಸಾವುಗಳಿಗೆ ನಾವೇ ಸೃಷ್ಟಿಕರ್ತರು! ಸ್ಥಿತಿ ಕರ್ತರು! ಲಯಕರ್ತರು!

ಮೈ ಡಿಯರ್ ಫ್ರೆಂಡ್ಸ್, ಮೈ ಡಿಯರ್ ಮಾಸ್ಟರ್ಸ್, ಮೈ ಡಿಯರ್ ಗಾಡ್ಸ್ ಆಫ್ ಆಂಧ್ರಪ್ರದೇಶ್ –ಗಮನಶಾಸ್ತ್ರ, ಇಂಟೆಂಟ್ ಶಾಸ್ತ್ರ, ಥಾಟ್ ಪವರ್, ಮನೋವೈಜ್ಞಾನಿಕ ಶಾಸ್ತ್ರ ಅಂದರೆ ಇದುವೇ! ಆಧ್ಯಾತ್ಮಿಕ ಶಾಸ್ತ್ರವೆಂದರೂ ಇದುವೇ!

ಮನೋವೈಜ್ಞಾನಿಕ ಶಾಸ್ತ್ರಕ್ಕೆ ಧ್ಯಾನವನ್ನು ಜೊತೆಗೂಡಿಸಿದರೆ ಅದು ಆಧ್ಯಾತ್ಮಿಕ ಶಾಸ್ತ್ರ ವಾಗುತ್ತದೆ! ಆಧ್ಯಾತ್ಮಿಕ ಶಾಸ್ತ್ರದಿಂದ ಧ್ಯಾನಶಾಸ್ತ್ರವೆಂಬುದನ್ನು ಪಕ್ಕಕ್ಕಿಟ್ಟರೆ, ಅದು ಮನೋವೈಜ್ಞಾನಿಕ ಶಾಸ್ತ್ರ ವಾಗುತ್ತದೆ ಮೈ ಡಿಯರ್ ಫ್ರೆಂಡ್ಸ್, ಮೈ ಡಿಯರ್ ಮಾಸ್ಟರ್ಸ್, ಮೈ ಡಿಯರ್ ಗಾಡ್ಸ್. ನಾವು ಮೂಲಭೂತವಾಗಿ ಆಧ್ಯಾತ್ಮಿಕ ಶಾಸ್ತ್ರಜ್ಞರು, ಅದರಲ್ಲಿಯೇ ಮನೋವೈಜ್ಞಾನಿಕತೆ ಅಡಗಿದೆ. ಕೇವಲ ಮನೋವೈಜ್ಞಾನಿಕತೆಯಲ್ಲಿ ಆಧ್ಯಾತ್ಮಿಕತೆ ಎಂಬುದು ಸ್ವಲ್ಪವೂ ಇಲ್ಲ. ಆದ್ದರಿಂದ ಪಿರಮಿಡ್ ಆಧ್ಯಾತ್ಮಿಕ ಶಾಸ್ತ್ರಜ್ಞರಿಗೂ, ವಿಶಾಲ ಹೃದಯದವರಾದ ಪಿರಮಿಡ್ ಮಾಸ್ಟರ್ ಗಳಿಗೂ ಬೇರೇ ಮನೋವೈಜ್ಞಾನಿಕ ಶಾಸ್ತ್ರವಿಲ್ಲ. ಆತ್ಮಶಾಸ್ತ್ರ, ಧ್ಯಾನಶಾಸ್ತ್ರಗಳಿಗೆ ಸಂಬಂಧಿಸಿದ್ದೇ ಮನೋವೈಜ್ಞಾನಿಕ ಶಾಸ್ತ್ರ. ಆದ್ದರಿಂದ ಆಧ್ಯಾತ್ಮಿಕ ಶಾಸ್ತ್ರ, ಧ್ಯಾಸ ಶಾಸ್ತ್ರ, ತಿಳಿಯದವರಿಗೋಸ್ಕರ ಈ ದಿನ ಈ ಒಂದು ಸಂಕಲ್ಪ ಶಕ್ತಿ, ಈ ಒಂದು ಧ್ಯಾಸ ಶಾಸ್ತ್ರದ ಬಗ್ಗೆ ವಿವರಿಸಬೇಕಾದ ಅಗತ್ಯ ಏರ್ಪಟ್ಟಿತು! ಪಿರಮಿಡ್ ಮಾಸ್ಟರ್‌ಗಳಿಗೆ ಈ ಅಗತ್ಯ ಇಲ್ಲವೇ ಇಲ್ಲ.

'ಓಂ ತತ್ ಸತ್'

1. ನಾವು "ಜೀವನ"ವೆಂಬ ಆಟದಲ್ಲಿ ಇದ್ದೇವೆ! ಆದರೆ, ನಮಗೆ ಅರ್ಥವಾಗದ ಆಟವೇ ಜೀವನ!

2. ಈ ಆಟದಲ್ಲಿ ಸೋಲು/ ಗೆಲುವುಗಳು ಇರುವುದಿಲ್ಲ, ಆದರೆ ಸುಖ-ದುಃಖಗಳು ಇರುತ್ತವೆ. ಸಂತೋಷ ವಿಷಾದಗಳು ಇರುತ್ತವೆ... ವಿಧವಿಧವಾದ ಮಿಶ್ರ ಅನುಭವಗಳ ಪರಂಪರೆ ಇರುತ್ತದೆ.

3. ಆಟದಲ್ಲಿ ಆಟ... ಆಟದಲ್ಲಿ ಆಟ... ಹೀಗೆ ಎಷ್ಟೋ ದೊಡ್ಡ ದೊಡ್ಡ ಆಟಗಳಲ್ಲಿ ಚಿಕ್ಕ ಚಿಕ್ಕ ಆಟಗಳು.

4. ಜೀವನಗಳು ಎನ್ನುವಂತಹವು ಜಂಟಿ (ಕೂಡಿಕೊಂಡಿರುವ) ಆಟಗಳು! ಪಾತ್ರಗಳು ಅನೇಕಾನೇಕ! ಯಾರ ಮನಸ್ತತ್ವವನ್ನು ಆಧರಿಸಿ ಅವರು ಆಟಗಳಲ್ಲಿ ಪಾಲ್ಗೊಳ್ಳುತ್ತಾರೆ.

5. ಆಟಗಳಲ್ಲಿ ಸ್ವಲ್ಪಹೊತ್ತು ಸುಮ್ಮನಿದ್ದು ಬಿಡುವುದು ಎಂಬುದು ಸಹ ಆಟದಲ್ಲಿಯ ಭಾಗವೇ! ಸ್ವಲ್ಪಹೊತ್ತು ಸುಮ್ಮನಿದ್ದು ಬಿಡುವುದು ಎಂದರೆ ಶರೀರದಿಂದ ನಿಷ್ಕ್ರಮಿಸುವುದೇ!

6. ಕ್ಷಣ ಕ್ಷಣಕ್ಕೂ ಬದಲಾಗುವ ಈ ಮಹಾ ಜಂಟಿ ಆಟದಲ್ಲಿ "BALL" ಯಾವ ಕಡೆ ಹೋಗುತ್ತದೆಯೋ ಯಾರಿಗೆ ತಿಳಿದಿದೆ? ಮೇಲಿರುವ ಭಗವಂತನಿಗೂ ಸಹಿತ ತಿಳಿದಿಲ್ಲವೆಂದರೆ ತಿಳಿದಿಲ್ಲ!

7. ಮೇಲಿರುವವರಿಗು ಸಹ ಗೊತ್ತಿಲ್ಲವಾದ್ದರಿಂದ, ಅವರು ಸಹ ಬಹಳಷ್ಟು ಉತ್ಸಾಹದಿಂದ ಈ ಭೂಲೋಕದಲ್ಲಿ ನಡೆಯುವ ಚಿತ್ರವಿಚಿತ್ರ ಆಟಗಳನ್ನು ಅವರವರ ಸ್ವಯಂ "ಆತ್ಮ"ಗಳಲ್ಲಿ ನೋಡುತ್ತಿರುತ್ತಾರೆ! ಆಗಾಗ ಅವರವರ ವಿನೋದಕೋಸ್ಕರ "ಬೆಟ್ಟಿಂಗು"ಗಳಲ್ಲಿಯೂ ಸಹ ಇರುತ್ತಿರುತ್ತಾರೆ...!

8. ಒಂದು ಶ್ರೇಷ್ಠತೆ ಏನೆಂದರೆ EGYPTIAN HERMETIC PRINCIPLE ಏನೆಂದರೆ "AS BELOW, SO ABOVE" ಒಂದಾನೊಂದು ಈಜಿಪ್ಷಿಯನ್ ಸತ್ಯ ಸಿದ್ಧಾಂತವೇನೆಂದರೆ ಕೆಳಗೆ ಹೇಗಿರುತ್ತದೆಯೋ ಮೇಲೆ ಸಹ ಹಾಗೆಯೇ ಇರುತ್ತದೆ? ಒಂದು ಕೋಣೆಯೊಳಗಿಂದ ನಾವು ಇನ್ನೊಂದು ಕೋಣೆಯೊಳಗೆ ಹೋದರೆ ಅವರ ಮನ:ಸ್ತತ್ವಗಳು ಬದಲಾಗುವುದಿಲ್ಲ; ನಮ್ಮ ಆಟಗಳು ಸಹ ಬದಲಾಗುವುದಿಲ್ಲ! ಕೋರಿಕೆಗಳನ್ನಾಧರಿಸಿಯೇ ಆಟಗಳು! ವಿಧ ವಿಧವಾದ ಕೋರಿಕೆಗಳಿಂದ ವಿಧವಿಧವಾದ ಆಟಗಳು ಹುಟ್ಟುತ್ತಿರುತ್ತವೆ!

10. ಕೆಳಗಿನ ಲೋಕದಿಂದ ಮೇಲಿನ ಲೋಕಕ್ಕೆ ಹೋಗಬೇಕಾದರೂ.. ಮೇಲಿನ ಲೋಕಗಳಿಗೆ ಬರುವುದೆಂದರೂ.. "ಕೋಣೆಗಳನ್ನು" ಬದಲಾಯಿಸಿದಂತೆಯೇ! ಆದರೆ ಮೇಲಿನ ಕೋಣೆಗಳಲ್ಲಿ(ಕೊಠಡಿ).. ಅಂದರೆ ಮೇಲಿನ ಲೋಕಗಳಲ್ಲಿ... ಹಸಿವು ಬಾಯಾರಿಕೆಗಳು, ಸಂಸಾರದಲ್ಲಿ ಈಜುವ ಸಂಕಟಗಳು ಇರುವುದಿಲ್ಲ!

11. ಇದೆಲ್ಲಾ ಲೆಕ್ಕವಿಲ್ಲದಷ್ಟು ಮಂದಿ(ಜನ) ಭಗವಂತರ ಅಂತ್ಯವಿಲ್ಲದ ಕಥೆ! ಅಂತ್ಯವಿಲ್ಲದ ಗೊಂದಲ!

12. ಇದನ್ನೇ ಪುರಾಣಗಳಲ್ಲಿ "ಲೀಲೆ" ಎಂದಿದ್ದಾರೆ.

13. ಸರ್ವಜ್ಞರು "ಲೀಲೆ" ಎಂದೂ... ಅಲ್ಪಜ್ಞರು "ಮಾಯೆ" ಎಂದೂ... ಸೃಷ್ಟಿ ತತ್ವವನ್ನು ಎರಡು ವಿಧಗಳಾಗಿ ವ್ಯಾಖ್ಯಾನಿಸಿದ್ದಾರೆ. ಆತ್ಮಾನು ಭವವಿದ್ದು ಆತ್ಮತತ್ವದ ಕಡೆಯಿಂದ ಶರೀರ ತತ್ವದ ಕಡೆ ನೋಡಿದರೇ, ಆಗ ಎಲ್ಲವೂ "ಮಾಯೆ" ಅನಿಸುತ್ತದೆ.

14. ಅರ್ಥವಾದರೆ ಕಥೆ! ಅರ್ಥವಾಗದಿದ್ದರೆ ಗೊಂದಲ! ಅರ್ಥ ಮಾಡಿಸಿದರೆ ಬೋಧನೆ!

15. ಧ್ಯಾನದ ಮೂಲಕವೇ ಆತ್ಮಾನುಭವ; ಪಿರಮಿಡ್ ಮಾಸ್ಟರ್ ಗಳೆಂದರೆ ಮಹಾ ಧ್ಯಾನ ಬೋಧಕರು!

16. ಧ್ಯಾನದ ಮೂಲಕ "ಮಾಯೆ" ಎಂಬ ಕಾನ್ಸೆಪ್ಟ್ ನಿಂದ ಹೊರಬಂದು "ಲೀಲೆ" ಎಂಬ ಕಾನ್ಸೆಪ್ಟ್ ನೊಳಗೆ ಪ್ರವೇಶಿಸುತ್ತೇವೆ.

17. ಧ್ಯಾನಕ್ಕೆ ಮುಂಚೆ ಎಲ್ಲವೂ "ಗೊಂದಲ" – ಎಲ್ಲವೂ "ಮಾಯೆ" – ಎಲ್ಲವೂ ಅಲ್ಪಜ್ಞತೆ". ಧ್ಯಾನಕ್ಕೆ ಮುಂಚೆ ಮಣಿಪೂರಕ, ಅನಾಹತ ಸ್ಥಿತಿಗಳು.. ಧ್ಯಾನದಲ್ಲಿ ವಿಶುದ್ಧ, ಆಜ್ಞಾ ಸ್ಥಿತಿಗಳು.. ಧ್ಯಾನದ ನಂತರ ಸಹಸ್ರಾರ ಸ್ಥಿತಿ.. ಧ್ಯಾನದ ನಂತರ ಎಲ್ಲಾ "ಡ್ರಾಮಾ"ಗಳು.. ಎಲ್ಲಾ "ಲೀಲೆ"ಎಲ್ಲವೂ "ಸರ್ವಜ್ಞತೆ".

18. ಧ್ಯಾನ ಅಭ್ಯಾಸ ಇಲ್ಲದೆ ಹೋದರೆ ಎಲ್ಲಾ "ಟ್ರಾಜೆಡೀ"ಯೇ! ಧ್ಯಾನಾಭ್ಯಾಸವಿದ್ದರೆ ಎಲ್ಲಾ "ಕಾಮೆಡೀ"ಯೇ!

"ಧ್ಯಾನವೆಂದರೆ ಶ್ವಾಸಧಾರೆಯಲ್ಲಿ ಮನಸ್ಸನ್ನು ವಿಸರ್ಜನೆ ಮಾಡುವುದೇ"

"ಧ್ಯಾನವೆಂದರೆ ಶ್ವಾಸದ ಮೇಲೆ ಗಮನ

–ಬ್ರಹ್ಮರ್ಷಿ ಪತ್ರೀಜಿ

ಶ್ರೀ ರಾಮಧಾಮ ಧ್ಯಾನಕೇಂದ್ರ

ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು–560 066.
ಸಂಪರ್ಕಿಸಿ : ಹೆಚ್. ಎನ್. ಶ್ರೀನಿವಾಸ, 9449695503
ವಿಜಯಲಕ್ಷ್ಮೀ ಎಸ್.ಎನ್. 80500 82689

ಆತ್ಮಜ್ಞಾನ ಶಿಕ್ಷಣ ಶಿಬಿರ ಕಾರ್ಯಕ್ರಮಗಳು

* ಪ್ರತಿ ಸೋಮವಾರ ಸಂಜೆ 6.30 ರಿಂದ 8.30 ರವರೆಗೆ ಧ್ಯಾನ ತರಗತಿಗಳು ನಡೆಯುತ್ತವೆ.
* ಹುಣ್ಣಿಮೆ ಹಾಗೂ ಅಮಾವಾಸ್ಯೆ ಧ್ಯಾನ
* ಪ್ರತಿ ಆರು ತಿಂಗಳಿಗೊಮ್ಮೆ ಆತ್ಮಜ್ಞಾನ ಶಿಕ್ಷಣ ಶಿಬಿರ ಉಚಿತವಾಗಿ ನಡೆಯುತ್ತದೆ ಇದರ ವಿವರಗಳನ್ನು ಧ್ಯಾನಕಸ್ತೂರಿಯಲ್ಲಿ ಹಾಗೂ ಪಿಎಂಸಿ ಕನ್ನಡ ಚಾನೆಲ್‌ನಲ್ಲಿ ಪ್ರಕಟಿಸಲಾಗುವುದು.

ಶ್ರೀ ರಾಮ ಪಬ್ಲಿಕೇಶನ್ಸ್‌ನಲ್ಲಿ ದೊರೆಯುವ ಪುಸ್ತಕಗಳು

1.	ಅಹಿಂಸೆ & ಶಾಖಾಹಾರ	ರೂ. 20
2.	ನವವಿಧ ಧರ್ಮಗಳು	ರೂ. 15
3.	ಸಸ್ಯಾಹಾರವೇ ಮಾನವಾಹಾರ	ರೂ. 20
4.	ಧ್ಯಾನ	ರೂ. 40
5.	ವಿದ್ಯಾರ್ಥಿಗಳ ವಿಕಾಸಕ್ಕೆ ಧ್ಯಾನ ವಿದ್ಯೆ	ರೂ. 30
6.	ಭಾಗವತ ಸನ್ನಿವೇಶಗಳ ಅಂತರಾರ್ಥ	ರೂ. 30
7.	ಷಿರಿಡಿ ಸಾಯಿ ಸಂದೇಶಗಳು	ರೂ. 30
8.	ಪ್ರಾಣ ಶಕ್ತಿ	ರೂ. 100
9.	ಜೀವನದ ಸೂಕ್ಷ್ಮಗಳು	ರೂ. 60
10.	ವಿದ್ಯಾರ್ಥಿ ಜೀವನ ಕ್ರಾಂತಿ	ರೂ. 40
11.	ಸಂಘಂ ಶರಣಂ ಗಚ್ಛಾಮಿ	ರೂ. 300
12.	ತುಳಸಿ ದಳ (I)	ರೂ. 200
13.	ತುಳಸಿ ದಳ (ii)	ರೂ. 220
14.	ಆಶ್ಚರ್ಯ....ಆಶ್ಚರ್ಯ	ರೂ. 40
15.	ದುಃಖ ನಿವಾರಣೆಯ ಮಾರ್ಗ	ರೂ. 70
16.	ಧ್ಯಾನದಿಂದಲೇ ಜ್ಞಾನ	ರೂ. 70
17.	ಬ್ರಹ್ಮಜ್ಞಾನ	ರೂ. 70
18.	ಜ್ಞಾನ ಜ್ಯೋತಿ	ರೂ. 90
19.	ಗೈಡಿಂಗ್	ರೂ. 100

ಪುಸ್ತಕಗಳಿಗಾಗಿ ಸಂಪರ್ಕಿಸಿ ಶ್ರೀರಾಮ ಪಬ್ಲಿಕೇಶನ್ಸ್
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು–560 066

“ಧ್ಯಾನ ಮಾಡುವ ವಿಧಾನ”

ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..
ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..
ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..
ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!

ಧ್ಯಾನವನ್ನು ಯಾರಾದರೂ ಮಾಡಬಹುದು
ಯಾವ ವಯಸ್ಸಿನವರಾದರೂ ಮಾಡಬಹುದು
ಯಾವ ಸಮಯದಲ್ಲಿಯಾದರೂ ಮಾಡಬಹುದು
ಯಾವ ಸ್ಥಳದಲ್ಲಿಯಾದರೂ ಮಾಡಬಹುದು.

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.

ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಚಂದಾದಾರರಾಗಲು ಬ್ಯಾಂಕ್ ಖಾತೆಗೆ ಹಣ ಪಾವತಿಸಿ ಚಂದಾದಾರರಾಗಬಹುದು

ಬ್ಯಾಂಕ್ ಹೆಸರು :ಭಾರತೀಯ ಸ್ಟೇಟ್ ಬ್ಯಾಂಕ್ –State Bank of India
ಶಾಖೆಯ ಹೆಸರು:ಚಾಮರಾಜಪೇಟೆ ಶಾಖೆ –Chamarajapete Branch
ಖಾತೆ ಸಂಖ್ಯೆ :30828057680 : I.F.S.C. ಕೋಡ್ –S.B.I.N 0005794
ಖಾತೆಯ ಹೆಸರು:ಕೆ.ಪಿ.ಡಿ.ಪಿ. ಟ್ರಸ್ಟ್–ಅಕೌಂಟ್–ಧ್ಯಾನ ಕಸ್ತೂರಿ–K.P.D.P. Trust A/c. Dhayana Kasturi

ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಆನ್‌ಲೈನ್‌ನಲ್ಲಿಯೇ ಚಂದಾದಾರರಾಗಬಹುದು.
ಕನ್ನಡ ಆಧ್ಯಾತ್ಮಿಕ ಪುಸ್ತಕಗಳನ್ನು ಆನ್‌ಲೈನ್‌ನಲ್ಲಿಯೇ ಖರೀದಿಸಬಹುದು. ಇದಕ್ಕಾಗಿ
ನಿಮ್ಮ ಮೊಬೈಲ್ ಬಳಸಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ,
ನಂತರ ಕಾಣಿಸಿಕೊಳ್ಳುವ ಲಿಂಕ್ ಅನ್ನು ಕ್ಲಿಕ್ ಮಾಡಿ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ)
1534/1, ಒಂದನೇ ಮಹಡಿ 26ನೇ ಮುಖ್ಯರಸ್ತೆ, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಹತ್ತಿರ
9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069
ವಾಟ್ಸಾಪ್ ಅಥವಾ ಕರೆಮಾಡಿ : 9448883872; 9901598073

“ಈ ಒಂದು ಅಂಶ.....
ಸಂಕಲ್ಪ ಶಕ್ತಿ...ಎಂಬುದು ಜೀವನದಲ್ಲಿ ಅತ್ಯಂತ
ಮೂಲಭೂತವಾದ ವಿಷಯ. ಮನುಷ್ಯ ತನ್ನ
‘ಸಂಕಲ್ಪ ಶಕ್ತಿ’ಯಿಂದಲೇ ‘ಸೃಷ್ಟಿಕರ್ತ’ನಾಗಿ
ರಾರಾಜಿಸುತ್ತಿರುವನು.
ಮನುಷ್ಯನಷ್ಟೇ ಅಲ್ಲ ಯಾವ ಪ್ರಾಣಿಯಾದರೂ
ಸರಿಯೇ ತನ್ನ ‘ಸಂಕಲ್ಪ ಶಕ್ತಿ’ಯಿಂದಲೇ ‘ಕರ್ತ’ನಾಗಿ
‘ಸೃಷ್ಟಿಕರ್ತ’ನಾಗಿ ರಾರಾಜಿಸುತ್ತಿದೆ”

ಬ್ರಹ್ಮರ್ಷಿ ಪತ್ರೀಜಿ

ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ
ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ
https: //www.youtube.com/pmckannada • www.meditationeverywhere.org • www.pssmovement.org

ಶ್ರೀರಾಮ ಪಬ್ಲಿಕೇಶನ್ಸ್
ಶ್ರೀರಾಮಧಾಮ ಧ್ಯಾನಕೇಂದ್ರ,
ನಾರಾಯಣಪ್ಪ ಗಾರ್ಡನ್, ವೈಟ್ ಫೀಲ್ಡ್, ಬೆಂಗಳೂರು - 560 066
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ / 9449695503
ವಿಜಯಲಕ್ಷ್ಮಿ ಎಸ್.ಎನ್ / 8050082689